A Kannada Grammatical Primer

Approved by the Textbook Committee and recognized as a Textbook for the 3rd and 4th Standards by the Director of Public Instruction

by

P. Mangesh Rau, B. A., L. T.

Sub-Assistant Inspector of Schools, Kasaragod Range

SECOND EDITION

ಕನ್ನಡ ಮೂಲವ್ಯಾಕರಣ

ವಿದ್ಯಾಭ್ಯಾಸದ ಮೊದಲ ಸೋಪಾನಗಳಿಗಾಗಿ ಸರಿಯಾಗಿ

ಪಿ. ಮಂಗೇಶರಾವ್, ಬಿ. ಎ., ಎಲ್. ಟಿ.

ಕಾಸರಗೋಡು ರೇಂಜ್ ಶಾಲಾ ಸಬ್ ಅಸಿಸ್ಟಾಂಟ್ ಇನ್ಸ್ಪೆಕ್ಟರ್

ಇವರಿಂದ ರಚಿಸಲ್ಪಟ್ಟಿದ್ದಾಗಿ

ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಮಂಜೂರು ಮಾಡಲ್ಪಟ್ಟು

ಡಿರೆಕ್ಟರವರಿಂದ ಮೂರನೆಯ ನಾಲ್ಕನೆಯ ದರ್ಜೆಗಳಿಗೆ ಪಠ್ಯಪುಸ್ತಕವಾಗಿ ನಿಯಮಿಸಿದ್ದು

MANGALORE

ON BOOK AND TRACT DEPOSITORY

1907

Copyright registered.

ಕ್ರಯ: ಒಕ್ಕೆ ಆಣೆ

A Kannada Grammatical Primer

Approved by the Textbook Committee and recognised as a Textbook for the 3rd and 4th Standards by the Director of Public Instruction

by

P. Mangesh Rau, B. A., L. T.

Sub-Assistant Inspector of Schools, Kasaragod Range

SECOND EDITION

ಕನ್ನಡ ಮೂಲವ್ಯಾಕರಣ

ವಿದ್ಯಾಶಾಲೆಯ ಹೊಸ ನಿಬಂಧನೆಗಳಿಗೆ ಸರಿಯಾಗಿ

ಪಿ. ಮಂಗೇಶರಾವ್, ಬಿ. ಎ., ಎಲ್. ಟಿ.

ಕಾಸರಗೋಡು ರೇಂಜ್ ಶಾಲಾ ಸಬ್ ಅಸಿಸ್ಟಾಂಟ್ ಇನ್ಸ್ಪೆಕ್ಟರ್

ಇವರಿಂದ ರಚಿಸೋಣಾಗಿ

ಟಿಕ್ಸ್ಟ್‌ಬುಕ್ ಕಮಿಟಿಯವರಿಂದ ಮಂಜೂರಾಗಿ

ಡಿರೆಕ್ಟರವರಿಂದ ಮೂರನೆಯ ನಾಲ್ಕನೆಯ ದರ್ಜೆಗಳಿಗೆ ಪಠ್ಯಪುಸ್ತಕವಾಗಿ ಏರ್ಪಡಿಸಿದ್ದು

MANGALORE

BASEL MISSION BOOK AND TRACT DEPOSITORY

1907

Copyright registered.



PRINTED AT THE BASEL MISSION PRESS, MANGALORE.

15 OCT 1963

This little book has been written with a special view to the requirements of students in our Primary Schools.

The plan I have followed needs no justification. To pass from the particular to the general, to make children familiar first with the function and then with the definition—is a method which will be allowed to be an improvement on those generally followed. Particular care has been taken to see that beginners are not repelled by the dry rules of grammar. For the same reason the tedious chapters on orthography, euphony and compound words have been prudently eliminated. The subject which has been universally neglected is made as interesting as possible, and if the book does not fail to impart to children a thorough knowledge of the rudiments of Kannada Grammar, I shall deem my labours amply rewarded.

To each lesson are appended copious exercises. These have been prepared specially to enable the pupil to ascertain whether he has mastered the chief points in the lesson. The system of exercises and test questions, copied from the best English models will, I hope, be welcomed both by the teacher and the student.

To the many friends who assisted me in preparing this book I offer my sincere thanks. I am deeply indebted to Mr. M. Sheshagiri Prabhu, M.A., of the Mangalore College, whose Primer of Malayalam Grammar was of considerable use to me.

FALNEER VILLA,
Midsummer, 1905.

ISRT

ಅನುಕ್ರಮಣಿಕೆ.

ಪಾಠ.		ಪುಟ.
1.	ವಾಕ್ಯ (The Sentence)	1
	ಪದ (The Word)	3
2.	ನಾಮಪದಗಳು (Nouns)	4
3.	ಸರ್ವನಾಮಗಳು (Pronouns)	7
4.	ಸರ್ವನಾಮಗಳು (Pronouns, *continued*)	10
5.	ಕ್ರಿಯಾಪದಗಳು (Verbs)	12
	ಕಾಲಗಳು (Tenses)	13
6.	ವಿಶೇಷಣಗಳು (Adjuncts)	15
7.	ಕ್ರಿಯಾವಿಶೇಷಣಗಳು (Adverbs)	17
8.	ಸಮುಚ್ಚಯಗಳು (Conjunctions)	19
9.	ಆಖ್ಯೆ, ಕರ್ತೃ (The Subject)	20
10.	ಆಖ್ಯಾತ (The Predicate)	24
11.	ಕರ್ಮಪದ (The Object)	26
	ಸಕರ್ಮಕಕ್ರಿಯೆಗಳು, ಅಕರ್ಮಕಕ್ರಿಯೆಗಳು (Transitive and Intransitive Verbs)	28
12.	ಅಂಕಿತನಾಮಗಳು (Proper Nouns)	30
13.	ಸಾಮಾನ್ಯನಾಮಗಳು (Common Nouns)	33
	ಜಾತಿ, ವ್ಯಕ್ತಿ (Class and Individuals of a Class)	35
14.	ಸಂಘನಾಮಗಳು (Collective Nouns)	37
15.	ಭಾವನಾಮಗಳು (Abstract Nouns)	38
16.	ಶಬ್ದ, ಪ್ರತ್ಯಯ, ಪ್ರಕೃತಿ, ಧಾತು (Stem, Affix, Inflected Word)	40
17.	ಲಿಂಗ (Gender)	42
18.	ವಚನ (Number)	45
19.	ವಿಭಕ್ತಿ (Case)	47
20.	ಪುರುಷಾರ್ಥಕ ಸರ್ವನಾಮಗಳು (Personal Pronouns)	50
21.	ಆತ್ಮಾರ್ಥಕ ಮತ್ತು ಪ್ರಶ್ನಾರ್ಥಕ ಸರ್ವನಾಮಗಳು (Reflexive and Interrogative Pronouns)	52
22.	ಸರ್ವನಾಮಗಳ ವಚನ ವಿಭಕ್ತಿಗಳು (Number and Cases of Pronouns)	54
23.	ಪ್ರಯೋಜಕಧಾತುಗಳು (Causative Verbs)	58
24.	ನ್ಯೂನರೂಪಗಳು (Participles)	60
25.	ಆಖ್ಯಾತಪ್ರತ್ಯಯಗಳೂ ಪುರುಷಾತ್ಮಕರೂಪಗಳೂ (Conjugation of Verbs)	64
26.	ಅರ್ಥವಿಶೇಷತ್ರಯಗಳು (Moods)	68
27.	ಕೃದ್ವಾಚಿಗಳು (Participial Adjectives)	72
28.	ಕೃನ್ನಾಮಗಳೂ ಕ್ರಿಯಾನಾಮಗಳೂ (Verbal Nouns)	74
29.	ವಿಶೇಷಣಗಳು (Adjuncts)	77
	ಗುಣವಾಚಕಗಳು (Adjectives)	78
30.	ಕ್ರಿಯಾವಿಶೇಷಣಗಳು (Adverbs)	81
	ಉಪಸರ್ಗಗಳು (Postpositions)	84
31.	ಸಮುಚ್ಚಯಗಳು (Conjunctions)	86
	ಭಾವಬೋಧಕಗಳು (Interjections)	87

ISRT

ಕನ್ನಡ ಮೂಲ ವ್ಯಾಕರಣ.

Sentence-book

1ನೆಯ ಪಾಠ.—ವಾಕ್ಯವೂ ಪದವೂ.

1. ಹಕ್ಕಿ ಹಾರುತ್ತದೆ. 2. ಮಾನುಗಳು ಈಸುತ್ತವೆ. 3. ಸೂರ್ಯನು ಆಕಾಶದಲ್ಲಿ ಹೊಳೆಯುತ್ತಾನೆ. 4. ರಂಗನು ಗಿಡವನ್ನು ಚೂರಿಯಿಂದ ಕಡಿದನು. 5. ನಾವು ಪಕ್ಷಿಗಳಿಗೆ ಮೇವು ಹಾಕಬೇಕು. 6. ದೇವರು ನಮ್ಮಲ್ಲಿ ದಯೆಯುಳ್ಳವನು.

ಮೇಲಿನವುಗಳಲ್ಲಿ ಮೊದಲನೆಯದನ್ನು ಓದು. ಹಕ್ಕಿ ಹಾರುತ್ತದೆ. ಓದುವಾಗ ಹಕ್ಕಿ ಎಂದು ಇಷ್ಟೇ ಹೇಳಿಬಿಟ್ಟರೆ, ನಮ್ಮ ಮನಸ್ಸಿನಲ್ಲಿ ಇದ್ದದ್ದನ್ನು ಪೂರ್ಣವಾಗಿ ಹೇಳಲಿಲ್ಲ ಎಂಬಂತೆ ತೋರುತ್ತದೆ; ಪೂರ್ಣವಾಗಿ ಹೇಳಬೇಕಾದರೆ, ಹಾರುತ್ತದೆ, ಹಾಡುವುದು, ಕೂತುಕೊಂಡಿದೆ, ಕೂಗುತ್ತಿದೆ ಮುಂತಾದ ಮಾತುಗಳನ್ನು ಸೇರಿಸಬೇಕಾಗುವುದು. ಹಾಗೆ ಸೇರಿಸಿದರೆ,

ಹಕ್ಕಿ ಹಾರುತ್ತದೆ, ಹಕ್ಕಿ ಹಾಡುವುದು, ಹಕ್ಕಿ ಗೂಡಿನಲ್ಲಿ ಕೂತುಕೊಂಡಿದೆ, ಹಕ್ಕಿ ಕೂಗುತ್ತಿದೆ

ಎಂಬೀ ವಾಕ್ಯಗಳಾಗುವುವು. ರಂಗನು ಗಿಡವನ್ನು ಎಂದು ಹೇಳಿ ನಿಲ್ಲಿಸಿಬಿಟ್ಟರೆ, ಸಂಪೂರ್ಣವಾದ ವಾಕ್ಯವಾಗುವುದಿಲ್ಲ. ವಾಕ್ಯವಾಗಬೇಕಾದರೆ, ಕಡಿದನು, ಕೊಯ್ಯುತ್ತಾನೆ ಎಂಬೀ ಮಾತುಗಳನ್ನು ಕೂಡಿಸಬೇಕಾಗುವುದು.

1. ಪ್ರಶ್ನೆಗಳು.

ಕೆಳಗೆ ಬರೆದುವುಗಳು ವಾಕ್ಯಗಳಾಗುವಂತೆ ತಕ್ಕ ಮಾತುಗಳನ್ನು ಸೇರಿಸಿರಿ:—

1. ಹುಡುಗರು ಪುಸ್ತಕಗಳನ್ನು..... 2. ಕುರಿಯು ಹುಲ್ಲನ್ನು.....
3. ಬಳೆಗಳನ್ನು ಗಾಜಿನಿಂದ..... 4. ದೇವರೇ! ನಮ್ಮನ್ನು ನೀನು.....
5. ನಾಯಿಗೆ ಸಂತೋಷವುಂಟಾದಾಗ ತನ್ನ ಬಾಲವನ್ನು..... 6. ಒಳ್ಳೆಯ ಹುಡು

ISRT

ಗರು ತಾಯಿತಂದೆಗಳಿಗೂ ಉಪಾಧ್ಯಾಯರಿಗೂ..... 7. ಗಿಳಿಯು ಚೆಲುವಾದ..... 8. ಕುಂದಿಲಿಯು ಸುಮಾರು ಚಿಕ್ಕನಷ್ಟು ಗಾತ್ರವಿರುವ..... 9. ನನ್ನ ತಂದೆಯ ಹೆಸರು..... 10. ಯಾವ ಕೆಲಸವನ್ನಾದರೂ ಅವಸರದಲ್ಲಿ.....

ಹಕ್ಕಿ ಹಾರುತ್ತದೆ. "ಇಲ್ಲಿ ಹಕ್ಕಿ ಎಂಬ ಮಾತನ್ನು ಮಾತ್ರವೇ ಹೇಳಿದರೆ, ಆಲೋಚನೆಯು ಸಂಪೂರ್ಣವಾಗುವುದಿಲ್ಲ. ಹಾರುತ್ತದೆ, ಹಾಡುವುದು, ಕೂತುಕೊಂಡಿದೆ ಎಂಬ ಯಾವುದೊಂದು ಮಾತನ್ನಾದರೂ ಸೇರಿಸಬೇಕು. ಹಕ್ಕಿ ಹಾರುತ್ತದೆ ಈ ಮಾತುಗಳಿಂದ ಆಲೋಚನೆಯು ಸಂಪೂರ್ಣವಾಗುವುದು," ಎಂದರೆ ಒಂದು ವಾಕ್ಯವಾಗುತ್ತದೆ.

ಸಂಪೂರ್ಣವಾದ ಆಲೋಚನೆಯನ್ನು ಹೇಳುವ ಮಾತಿಗಾಗಲಿ ಮಾತುಗಳ ಸಮೂಹಕ್ಕಾಗಲಿ ವಾಕ್ಯವೆಂದು ಹೆಸರು.

ಮೇಲೆ ಕೊಟ್ಟ ಪ್ರಶ್ನೆಗಳಲ್ಲಿ ನೀವು ಸರಿಯಾದ ಮಾತುಗಳನ್ನು ಸೇರಿಸಿದರೆ, ಅವುಗಳಲ್ಲಿ ಪ್ರತಿಯೊಂದು ವಾಕ್ಯವಾಗುತ್ತದೆ. ಹುಡುಗರು ಪುಸ್ತಕಗಳನ್ನು ಎಂಬೀ ಮಾತುಗಳು ವಾಕ್ಯವಾಗುವುದಿಲ್ಲ; ಏಕೆಂದರೆ ಆ ಮಾತುಗಳಿಂದ ಆಲೋಚನೆಯನ್ನು ನಾವು ಸಂಪೂರ್ಣವಾಗಿ ಹೇಳಿದಂತೆ ಆಗುವುದಿಲ್ಲ.

ಹುಡುಗರು ಪುಸ್ತಕಗಳನ್ನು ಓದುತ್ತಾರೆ; ಹುಡುಗರು ಪುಸ್ತಕಗಳನ್ನು ಓದಿದರು; ಹುಡುಗರು ಪುಸ್ತಕಗಳನ್ನು ಓದುವರು—ಎಂದು ಹೇಳಿದರೆ, ನಾವು ಆಲೋಚನೆಯನ್ನು ಸಂಪೂರ್ಣವಾಗಿ ತಿಳಿಸಿದಂತಾಯಿತು, ಎಂದರೆ ವಾಕ್ಯಗಳಾದುವು.

2. ಪ್ರಶ್ನೆಗಳು.

ಕೆಳಗಿನವುಗಳು ವಾಕ್ಯಗಳೊ ಎಂದು ಓದಿ ಹೇಳಿರಿ; ವಾಕ್ಯಗಳಲ್ಲದಿದ್ದರೆ, ತಕ್ಕ ಮಾತುಗಳನ್ನು ಸೇರಿಸಿ ಅವುಗಳನ್ನು ವಾಕ್ಯಗಳನ್ನಾಗಿ ಮಾಡಿರಿ:—

1. ನಾಯಿಯು ನಂಬಿಕೆಯುಳ್ಳ ಪ್ರಾಣಿಯಾಗಿರುತ್ತದೆ. 2. ಹಕ್ಕಿಗಳು ಹುಲ್ಲು ಕಡ್ಡಿಗಳಿಂದ ಗೂಡುಗಳನ್ನು 3. ಹಣ್ಣು ಮಾರುವವರು ಹಣ್ಣುಗಳನ್ನು ಎಲ್ಲಿಂದ 4. ನಮಗೆ ಅವಶ್ಯವಾದ ದಿನ ಕಾಲೆ 5. ಎಣ್ಣೆ ಇಲ್ಲದಿದ್ದರೆ ದೀಪವು 6. ಅಯ್ಯೋ! ನನ್ನ ಮೊಟ್ಟೆಗಳು ಹೋದುವಲ್ಲಾ. 7. ಸ್ವಾಮಿ ದೇವನೆ, ಲೋಕಪಾಲನೆ, ನಿನ್ನ ಭಜಿಸುವೆ, ಭಜಿಸುವೆ. 8. ದೇವದೇವನೆ, ಹಸ್ತಪಾದಗಳಿಂದಲೂ ಮನದಿಂದಲೂ 9. ಹುಷ್ಟ ವ್ಯಾಘ್ರನ

ಕೈಲಿ ಮುಟ್ಟಿ ಹಿಡಿತರಬಹುದು. 10. ಆಡುವಾಗಲು ನಾವು ಭೋಜನ ಮಾಡುವಾಗಲು ಸರ್ವದಾ 11. ನಿನ್ನ ನಾಮವ ಪೇಳ್ವ ನಾಲಗೆ ಧನ್ಯವಲ್ಲವೆ ಸರ್ವದಾ. 12. ಕುದುರೆಯು ಉಪಯೋಗವಾದ ಮೃಗವು. 13. ತುಂಬಿಗಳು ಹಂಬಲಿಸುತಿಹವು ಹೂಗಳಲಿ.

ನಾಯಿಯು ಬಗುಳುತ್ತದೆ. ಇದು ವಾಕ್ಯವೋ? ಹೌದು, ಇದು ವಾಕ್ಯವು. ಇಲ್ಲಿ ಆಲೋಚನೆಯು ಸಂಪೂರ್ಣವಾಗಿದೆ. ಈ ವಾಕ್ಯದಲ್ಲಿ ಎಷ್ಟು ಮಾತುಗಳಿವೆ? ಎರಡೇ ಇವೆ. ರಾಜರು ನಮ್ಮನ್ನು ಆಳುತ್ತಾರೆ. ಈ ವಾಕ್ಯದಲ್ಲಿ ಎಷ್ಟಿವೆ? ಮೂರೇ ಇವೆ. ವಾಕ್ಯದಲ್ಲಿ ಪ್ರಯೋಗಿಸುವ ಒಂದೊಂದು ಮಾತಿಗೆ ಪದವೆಂದು ಹೆಸರು. ತಾಯಿ ಕೂಸನ್ನು ಮಲಗಿಸಿದಳು. ಈ ವಾಕ್ಯದಲ್ಲಿರುವ ಮೂರು ಮಾತುಗಳಲ್ಲಿ ಪ್ರತಿಯೊಂದನ್ನು ನಾವು ಪದವೆಂದು ಕರೆಯುತ್ತೇವೆ.

ಒಂದು ವಾಕ್ಯವಾಗಬೇಕಾದರೆ, ಹೆಚ್ಚು ಪದಗಳು ಅದರಲ್ಲಿ ಇರಲೇಬೇಕೆಂಬ ಆವಶ್ಯಕವಿಲ್ಲ; ಆಲೋಚನೆಯು ಮಾತ್ರ ಸಂಪೂರ್ಣವಾಗಿರಬೇಕು. ಬರೆಯುತ್ತೇನೆ ಈ ಒಂದೇ ಪದದಿಂದ ವಾಕ್ಯವಾಗುತ್ತಿದೆಯೇ? ಹೌದು. ಏಕೆಂದರೆ, ಬರೆಯುತ್ತೇನೆ ಎಂಬ ಒಂದೇ ಪದವಿದ್ದರೂ ಆ ಪದದಿಂದಲೇ ನಾನು ಬರೆಯುತ್ತೇನೆ ಎಂಬೀ ಎರಡು ಪದಗಳು ಸ್ಪಷ್ಟವಾಗಿ, ಆಲೋಚನೆಯು ಸಂಪೂರ್ಣವಾಗುತ್ತದೆ. ಹಾಗೆಯೇ ನೋಡಿದ್ದಿಯೇ, ಹೋಗುತ್ತಾರೆ, ಆಡಿದುವು, ಬಂದಳು, ಮಾಡುವೆವು ಎಂಬೀ ಪದಗಳು ಒಂದೊಂದೇ ಇದ್ದರೂ ಅಲ್ಲಲ್ಲಿ ಅವಶ್ಯವಿರುವ ಪದಗಳು ಬಿಟ್ಟುಹೋಗಿವೆ. ಬಿಟ್ಟ ಪದಗಳನ್ನು ನಾವು ಸುಲಭವಾಗಿ ತಿಳಿದುಕೊಳ್ಳಬಹುದು; ಆದ್ದರಿಂದಲೇ ಅವನ್ನು ಸೇರಿಸದೆ ಬಿಟ್ಟುಬಿಟ್ಟಿದ್ದಾರೆ. ಹೋಗುತ್ತಾರೆ ಎಂಬ ಒಂದೇ ಪದವಿದ್ದರೂ, ಅದರಿಂದಲೇ ಅವರು ಹೋಗುತ್ತಾರೆ ಎಂಬ ವಾಕ್ಯವನ್ನು ನಾವು ಗ್ರಹಿಸಬಹುದು.

ಮೇಲೆ ವಿವರಿಸಿದಂತೆ ಕೆಲವು ವಾಕ್ಯಗಳಲ್ಲಿ ಒಂದೇ ಪದವಿದ್ದರೂ ಸುಲಭವಾಗಿ ತಿಳಿದುಕೊಳ್ಳಬಹುದಾದ ಇತರ ಪದಗಳು ಅವುಗಳಲ್ಲಿ ಬಿಟ್ಟುಹೋಗಿವೆ ಎಂದು ಗ್ರಹಿಸಬೇಕು. ಕೆಲವು ವಾಕ್ಯಗಳಲ್ಲಿ ಒಂದಕ್ಕಿಂತ ಹೆಚ್ಚು ಪದಗಳೂ ಇರುತ್ತವೆ. ಆದ್ದರಿಂದ ವಾಕ್ಯದಲ್ಲಿ ಇಷ್ಟೇ ಪದಗಳಿರಬೇಕೆಂಬ ನಿಯಮವಿಲ್ಲ. ವಾಕ್ಯವಾಗಬೇಕಾದರೆ, ಮನಸ್ಸಿನಲ್ಲಿದ್ದ ಆಲೋಚನೆಯನ್ನು ನಾವು ಮಾತುಗಳಿಂದ ಸಂಪೂರ್ಣವಾಗಿ ತಿಳಿಸಬೇಕು.

ಪರೀಕ್ಷೆ.

ವಾಕ್ಯವೆಂದರೇನು? ಪದವೆಂದರೇನು? ಬೆಕ್ಕು ಹಕ್ಕೆಗಳನ್ನೂ ಅಳಿಲುಗಳನ್ನೂ ಹಿಡಿದು ತಿನ್ನುತ್ತದೆ—ಈ ವಾಕ್ಯದಲ್ಲಿ ಎಷ್ಟು ಪದಗಳಿವೆ? ವಾಕ್ಯವಾಗಬೇಕಾದರೆ, ಎಷ್ಟು ಪದಗಳಿರಬೇಕು? ಒಂದೇ ಪದದಿಂದ ವಾಕ್ಯವಾಗಬಹುದೇ? ಉದಾಹರಣೆಗಳನ್ನು ಕೊಡು. ಗಿಳಿಗಳಿಗೆ ಮನುಷ್ಯರ ಹಾಗೆ ಮಾತಾಡುವದಕ್ಕೆ—ಇದು ಏಕೆ ವಾಕ್ಯವಲ್ಲ? ತಾಯಿಗಿಂತ ಬಂಧು ಇಲ್ಲ, ಉಪ್ಪಿಗಿಂತ ರುಚಿ ಇಲ್ಲ—ಇಲ್ಲಿ ಎಷ್ಟು ವಾಕ್ಯಗಳಿವೆ? ಏಕೆ? ಕೆವುಡ ಕೇಳುವನೆ ಸಂಗೀತವನು ಪಾಡಿದರೆ—ಇದು ವಾಕ್ಯವೇ? ಸರಿಯಾಗಿ ಉತ್ತರಕೊಡು. ಹೋಗುತ್ತಾನೋ, ಬರುತ್ತೇವೆ, ನೋಡಿರಿ, ಬರುತ್ತೀರೋ—ಇಲ್ಲಿ ಬಿಟ್ಟುಹೋದ ಪದಗಳು ಯಾವುವು? ಈ ಪದಗಳು ಒಂದೊಂದೇ ಇದ್ದರೂ ಇವು ವಾಕ್ಯಗಳೆಂದು ಹೇಳುವುದಕ್ಕೆ ಕಾರಣವೇನು?

2ನೆಯ ಪಾಠ.—ನಾಮಪದಗಳು.*

ಈಗ ವಾಕ್ಯವೆಂದರೆ ಏನೆಂದು ನಿನಗೆ ತಿಳಿಯಿತು. ವಾಕ್ಯದಲ್ಲಿ ಅನೇಕ ಪದಗಳು ಬರಬಹುದೆಂದೂ ನೀನು ಓದಿರುವೆಯಷ್ಟೆ. ತೋಟದಲ್ಲಿ ಬಗೆ ಬಗೆಯ ಮರಗಳಿರುವಂತೆ, ವಾಕ್ಯದಲ್ಲಿ ಪದಗಳು ಕೂಡುತ್ತವೆ. ತೋಟದ ಮರಗಳಲ್ಲಿ ಒಂದು ತೆಂಗು, ಮತ್ತೊಂದು ಮಾವು, ಇನ್ನೊಂದು ಹಲಸು ಎಂದು ಹೇಗೆ ವಿಂಗಡಿಸುವೆಯೋ ಹಾಗೆಯೇ ವಾಕ್ಯದಲ್ಲಿ ಅರ್ಥಕ್ಕೆ ಅನುಸಾರವಾಗಿ ಪದಗಳ ಭೇದವನ್ನು ನೋಡಿಕೊಂಡು, ಅವುಗಳನ್ನು ವಿಂಗಡಿಸಬಹುದು. ಕೃಷ್ಣ ಉಪಾಧ್ಯಾಯರು ಹುಡುಗರನ್ನು ಕಾಲೆಯಲ್ಲಿ ಕಲಿಸುತ್ತಾರೆ. ಈ ವಾಕ್ಯದಲ್ಲಿ ಕೃಷ್ಣ ಎಂಬ ಪದವು ಒಬ್ಬನನ್ನು ಕುರಿತು ಹೇಳುವ ಹೆಸರಾಗಿದೆ; ಉಪಾಧ್ಯಾಯ ಎಂಬುದು ಪಾಠವನ್ನು ಹೇಳಿಕೊಡುವವರಿಗೆ ಬರುವ ಹೆಸರಾಗಿದೆ; ಹುಡುಗರನ್ನು ಎಂಬ ಪದವು ಪ್ರಾಯ ಬಾರದ ಗಂಡು ಮಕ್ಕಳನ್ನು ಕುರಿತು ಹೇಳುವ ಹೆಸರಾಗಿದೆ; ಕಾಲೆಯಲ್ಲಿ ಎಂಬುದು ಒಂದು ಸ್ಥಳವನ್ನು ಕುರಿತು ಹೇಳುವ ಹೆಸರಾಗಿದೆ; ಕಲಿಸುತ್ತಾರೆ ಎಂಬುದು ಉಪಾಧ್ಯಾಯರು ಮಾಡುವ ಕೆಲಸವನ್ನು ಸೂಚಿಸುತ್ತದೆ.

---

*ಈ ಪಾಠದಲ್ಲಿ ಭಾವನಾಮಗಳನ್ನು ಕುರಿತು ಹೇಳಿಲ್ಲ.

ISRT

ಮನುಷ್ಯರನ್ನು ಕುರಿತು ಹೇಳುವ ಕೆಲವು ಹೆಸರುಗಳನ್ನು ಹೇಳು:—
ಗೋವಿಂದ, ಸೀತೆ, ಪೀಟರ್, ಲ್ಯೂಸಿ, ಅಜ್ಜಬ್ಬ, ತೋಟಗಾರ, ಕಮ್ಮಾರ, ಬ್ರಾಹ್ಮಣ, ರೈತ ಇವೆಲ್ಲವೂ ಹೆಸರುಗಳು.

3. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ಮನುಷ್ಯರ ಹೆಸರುಗಳಾದ ಪದಗಳನ್ನು ತೋರಿಸು:—

1. ಎತ್ತುಗಳನ್ನು ಗೋವಿಂದನು ಚೆನ್ನಾಗಿ ಕಾಪಾಡುತ್ತಾನೆ. 2. ಗೌಳಿಗನು ಹಾಲು ಮಾರುತ್ತಾನೆ. 3. ಹೂಗಳನ್ನು ತಂದು ಪೇಟೆಯಲ್ಲಿ ರಜನಿಯು ಮಾರುತ್ತಾಳೆ. 4. ಐಶ್ವರ್ಯವಂತರ ಮಕ್ಕಳು ಚೆನ್ನಾದ ಬಳೆಗಳನ್ನು ತೊಟ್ಟುಕೊಳ್ಳುತ್ತಾರೆ. 5. ಕುರುಬನು ಕುರಿಯ ಮಂದೆಯನ್ನು ಎಲ್ಲಿಗೆ ಹೊಡೆದುಕೊಂಡು ಹೋಗುತ್ತಿದ್ದಾನೆ? 6. ಗದ್ದೆಯಲ್ಲಿ ಉಳುವ ಒಕ್ಕಲಿಗನನ್ನು ನೋಡು. 7. ದಶರಥನಿಗೆ ರಾಮನೆಂಬ ಮಗನು ಹುಟ್ಟಿ ದಿನೇದಿನೇ ಬೆಳೆಯುತ್ತಿದ್ದನು. 8. ಗ್ರಾಮದ ಮುನಸೀಫನು ಡೊಂಬರವನಿಗೆ ಚೆನ್ನಾದ ಬಳೆಯನ್ನು ತೊಡಿಸಿದನು. 9. ಅರಸನು ವ್ರಜೆಗಳನ್ನು ಆಳುತ್ತಾನೆ. 10. ಗುರುವು ಶಿಷ್ಯನಿಂದ ಪುಸ್ತಕ ಓದಿಸಿಕೊಂಡನು.

ಮನುಷ್ಯರ ಹೆಸರುಗಳಾದ ಪದಗಳನ್ನು ವಾಕ್ಯದಿಂದ ನೀನು ತೋರಿಸಬಲ್ಲೆ. ಮನುಷ್ಯರಲ್ಲಿ ಉಪಾಧ್ಯಾಯ, ಚಿತ್ರಕಾರ, ಗಾಣಿಗ ಎಂಬ ಹೆಸರುಗಳಿರುವ ಹಾಗೆಯೇ ಇತರ ಪ್ರಾಣಿಗಳಿಗೂ ಬೇರೆ ಬೇರೆ ಹೆಸರುಗಳುಂಟು. ಕುರಿ, ಪನ, ಮಾನು, ಹುಳು, ಹಾವು, ಹಲ್ಲಿ ಮೊದಲಾದುವುಗಳು ಇಂಥ ಹೆಸರುಗಳು.

4. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ಪ್ರಾಣಿಗಳ ಹೆಸರುಗಳನ್ನು ತೋರಿಸಿಕೊಡು:—

1. ನರಿಯು ಬಹಳ ಮಟ್ಟಿಗೆ ನಾಯಿಯನ್ನು ಹೋಲುತ್ತದೆ. 2. ಎತ್ತುಗಳೂ ಕೋಣಗಳೂ ಉಳುವುದಕ್ಕೆ ಉಪಯೋಗವಾಗುತ್ತವೆ. 3. ಸಿಂಹ, ಹುಲಿ, ಚಿರತೆ ಮೊದಲಾದುವು ಬೆಕ್ಕಿನ ಜಾತಿಗೆ ಸೇರುತ್ತವೆ. 4. ದೇವರು ಹಾರುವ ಸುಬ್ಬಿಯನ್ನೂ, ಹರಿಯುವ ಹಾವನ್ನೂ, ಈಸುವ ಮೀನನ್ನೂ ಸೃಷ್ಟಿಸಿದನು. 5. ಕ್ರಿಮಿಗಳನ್ನೂ ನೊಣಗಳನ್ನೂ ಹುಳುಗಳನ್ನೂ ಕಾಗೆಗಳು ತಿನ್ನುತ್ತವೆ.

ISRT

ಮರ, ಎಲೆ, ಕೈ, ಕಾಲು, ಕಲ್ಲು, ಸೋಡೆ, ಹತ್ತಿ, ಉಣ್ಣೆ, ಇವು ಸಹ ಹೆಸರುಗಳೇ. ಆದರೆ ಇವು ಮನುಷ್ಯರನ್ನಾಗಲಿ ಇತರ ಪ್ರಾಣಿಗಳನ್ನಾಗಲಿ ಕುರಿತು ಹೇಳುವ ಹೆಸರುಗಳಲ್ಲ. ಇವು ಬಗೆಬಗೆಯ ವಸ್ತುಗಳ ಹೆಸರುಗಳು.

5. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ವಸ್ತುಗಳ ಹೆಸರುಗಳನ್ನು ತೋರಿಸಿರಿ:—

1. ಎಲೆಗಳಿಂದ ದೊನ್ನೆಗಳನ್ನೂ, ನುರುಗಿಂದ ಪೊಟ್ಟಣಗಳನ್ನೂ, ನಾರಿನಿಂದ ಹೂಗಳನ್ನೂ ಕಟ್ಟುತ್ತಾರೆ. 2. ಆ ಹೆಂಗಸು ಒಲೆಯ ಮೇಲೆ ಪಾತ್ರೆಯನ್ನಿಟ್ಟು ಅನ್ನವನ್ನು ಮಾಡುತ್ತಾಳೆ. 3. ಕರಡಿಯು ಹಿಂಗಾಲುಗಳ ಮೇಲೆ ನಿಂತು ಕತ್ತುವಿನ ಎದೆಯ ಮೂಳೆಗಳನ್ನು ಮುರಿದುಬಿಡುತ್ತದೆ. 4. ಮನೆಯನ್ನು ಕಟ್ಟಬೇಕಾದರೆ, ಮಣ್ಣು, ಸುಣ್ಣ, ಕಂಬಗಳು ಹೇಗೆ ಅವಶ್ಯವೋ ಹಾಗೆಯೇ ದೇಹವು ಬೆಳೆಯಬೇಕಾದರೆ, ಗಾಳಿ, ನೀರು, ಆಹಾರವು ಅಗತ್ಯವಾಗಿವೆ. 5. ದೊಡ್ಡ ಕಾವುಳ್ಳ ಒಂದು ಹಲಗೆಗೆ ಕುಂಟೆಯೆಂದು ಹೆಸರು; ಇದರ ಕೆಳಗೆ ಕಬ್ಬಿಣದ ಮೊಳೆಗಳನ್ನು ನಾಟುತ್ತಾರೆ.

ಈ ವರೆಗೆ ಹೇಳಿದ ಹೆಸರುಗಳಲ್ಲದೆ ಇನ್ನೂ ಬಗೆಬಗೆಯ ಹೆಸರುಗಳಿವೆ. ಒಂದು ಸ್ಥಳವನ್ನು ಗುಡ್ಡವೆಂದೂ ಮತ್ತೊಂದನ್ನು ಹಳ್ಳವೆಂದೂ ನಾವು ಕರೆಯುತ್ತೇವೆ. ಗುಡ್ಡ, ಹಳ್ಳ, ದೇಶ, ಪಟ್ಟಣ, ಕಾಲೆ, ಮಂಗಳೂರು, ಇವು ಸ್ಥಳಗಳ ಹೆಸರುಗಳು.

6. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ಸ್ಥಳಗಳ ಹೆಸರುಗಳನ್ನು ತೋರಿಸಿರಿ:—

1. ಮೀನುಗಳು ಸಮುದ್ರದಲ್ಲಿಯೂ ಮೃಗಗಳು ವನದಲ್ಲಿಯೂ ಹಕ್ಕಿಗಳು ಆಕಾಶದಲ್ಲಿಯೂ ಸಂಚರಿಸುತ್ತವೆ. 2. ದೊಡ್ಡ ಪಟ್ಟಣಗಳಲ್ಲಿ ಪಾಠಶಾಲೆಗಳೂ ಕಚೇರಿಗಳೂ ಮನೆಗಳೂ ಇವೆ; ಹಳ್ಳಿಗಳಲ್ಲಿ ಹೊಲಗಳೂ ಗದ್ದೆಗಳೂ ಗುಡಿಸಲುಗಳೂ ಇವೆ. 3. ನಮ್ಮ ಮಹಾರಾಜರು ಇಂಗ್ಲೆಂಡ್, ಹಿಂದುಸ್ಥಾನ, ಕೆನಡ ಮೊದಲಾದ ದೇಶಗಳನ್ನು ಆಳುತ್ತಾರೆ. 4. ಗೂಗೆಗಳು ಮರದ ಪೊಟ್ಟರೆಗಳಲ್ಲಿಯೂ ಹಾಳುಸೋಡೆಗಳ ಬಿಲಗಳಲ್ಲಿಯೂ ಬಿದ್ದಿರುತ್ತವೆ. 5. ಮನೆಗಳ ಮುಂದೆ ತೋಟವಿದ್ದರೆ, ಅಂದವಾಗಿ ತೋರುವುದು.

ಮನುಷ್ಯರಿಗೂ ಇತರ ಪ್ರಾಣಿಗಳಿಗೂ ಸ್ಥಳಗಳಿಗೂ ವಸ್ತುಗಳಿಗೂ ಬರುವ ಹೆಸರುಗಳನ್ನು ವ್ಯಾಕರಣದಲ್ಲಿ ನಾಮಪದಗಳೆಂದು ಕರೆಯುತ್ತಾರೆ. ನಾಮ ಎಂದರೆ ಹೆಸರು ಎಂದರ್ಥ; ನಾಮಪದವೆಂದರೆ ವಾಕ್ಯದಲ್ಲಿ ಒಂದು

ISRT

ವಸ್ತುವಿನ ಹೆಸರನ್ನು ಹೇಳುವ ಪದವು. ಯಾವುದೊಂದರ ಹೆಸರನ್ನು ಹೇಳುವ ಪದವನ್ನು ನಾವು ವ್ಯಾಕರಣದಲ್ಲಿ ನಾಮಪದವೆಂದು ಕರೆಯುತ್ತೇವೆ. ದೇವದಾಸ, ತಂದೆ, ಕುರಿ, ಗಿಡ, ಕಲ್ಲು, ಸೊಪ್ಪು ಮೊದಲಾದ ಶಬ್ದಗಳಿಗೆ ವ್ಯಾಕರಣದಲ್ಲಿ ನಾಮಪದಗಳೆಂದು ಹೆಸರು. ಕುರಿ ಎಂಬ ಮಾತು ನಾಮಪದವಲ್ಲದೆ ಕುರಿ ಎಂಬ ವಸ್ತುವು ನಾಮಪದವಲ್ಲ; ಪುಸ್ತಕ ಎಂಬ ಪದವು ನಾಮಪದವಲ್ಲದೆ ಪುಸ್ತಕ ಎಂಬ ಒಡವೆಯು ನಾಮಪದವಲ್ಲ.

ಪರೀಕ್ಷೆ.

ನಾಮಪದವೆಂದರೇನು? ನಾಮಪದವೆಂದು ಹೆಸರು ಬರಲು ಕಾರಣವೇನು? ತಂಗಿ, ಪಕ್ಷಿ, ಗಿಡ, ತಿಮ್ಮ, ಕಮಲ, ಎಮ್ಮೆ, ಮಂಗ, ಸೂರ್ಯ, ಕತ್ತಿ, ಕೂದಲು, ಕಾಫಿ, ಅಪ್ಪ, ಎಣ್ಣೆ — ಇವುಗಳಲ್ಲಿ ಮನುಷ್ಯರನ್ನು ಕುರಿತ ಹೆಸರುಗಳು ಯಾವುವು? ಇತರ ಪ್ರಾಣಿಗಳನ್ನು ಸೂಚಿಸುವ ಹೆಸರುಗಳು ಯಾವುವು? ವಸ್ತುಗಳ ಹೆಸರುಗಳು ಯಾವುವು?

3ನೆಯ ಪಾಠ.—ಸರ್ವನಾಮಗಳು.

1. ಕೃಷ್ಣನು ಪುಸ್ತಕವನ್ನು ತಂದನು. 2. ಅವನು ಅದನ್ನು ಮಾಧವನಿಗೆ ಕೊಟ್ಟನು. 3. ಅವಳು ಅವನನ್ನು ಪ್ರೀತಿಸಿದಳು. 4. ಅವರಿಬ್ಬರು ಅಣ್ಣತಂಗಿಯರು.

ಎರಡನೆಯ ವಾಕ್ಯದಲ್ಲಿ ಅವನು ಎಂದರೆ ಯಾರು? ಕೃಷ್ಣನು. ಮೂರನೆಯ ವಾಕ್ಯದಲ್ಲಿ ಅವಳು ಎಂದರೆ ಯಾರು? ಮಾಧವ. ಕೃಷ್ಣನು ಪುಸ್ತಕವನ್ನು ತಂದನು; ಕೃಷ್ಣನು ಪುಸ್ತಕವನ್ನು ಮಾಧವನಿಗೆ ಕೊಟ್ಟನು ಎಂದು ಹೇಳುವುದಕ್ಕೆ ಬದಲಾಗಿ ಕೃಷ್ಣನು ಪುಸ್ತಕವನ್ನು ತಂದನು; ಅವನು ಅದನ್ನು ಮಾಧವನಿಗೆ ಕೊಟ್ಟನು ಎಂದು ನಾವು ವಾಡಿಕೆಯಾಗಿ ಹೇಳುತ್ತೇವೆ. ಒಂದು ಸಲ ಹೇಳಿದ ಪದವನ್ನೇ ಮತ್ತೆ ಮತ್ತೆ ವಾಕ್ಯದಲ್ಲಿ ಹೇಳಿದರೆ, ಕಿವಿಗೆ ಇಂಪಾಗುವುದಿಲ್ಲ.

ಕಂಕನರಿಯು ಬಿಲಗಳಲ್ಲಿ ವಾಸ ಮಾಡುತ್ತದೆ; ಅದು ರಾತ್ರಿಯಲ್ಲಿ ಅವುಗಳಿಂದ ಹೊರಕ್ಕೆ ಬರುತ್ತದೆ. ಈ ವಾಕ್ಯಗಳಲ್ಲಿ ಕಂಕನರಿ ಎಂಬ ಪದವನ್ನು ಹೇಳದೆ ಅದು ಎಂಬ ಚಿಕ್ಕ ಪದವನ್ನು ಇಟ್ಟು, ಅದೇ ಅರ್ಥವು ಬರುವ ಹಾಗೆ ಮಾಡಿದೆ. ಹಾಗೆಯೇ ಬಿಲಗಳಿಂದ ಎಂದು ತಿರಿಗಿ ಹೇಳದೆ ಅವುಗಳಿಂದ ಎಂಬ ತಕ್ಕ ಪದವು ಇಟ್ಟಿದೆ.

ISRT

7. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ಮತ್ತೆ ಮತ್ತೆ ಹೇಳಿದ ಪದಗಳ ಬದಲಾಗಿ ಬೇರೆ ತಕ್ಕ ಪದಗಳನ್ನು ಹೇಳಿರಿ:—

1. ಕುರಿಗಳ ಕೂದಲಿಗೆ ಉಣ್ಣೆ ಎನ್ನುತ್ತಾರೆ; ಉಣ್ಣೆಯಿರುವುದರಿಂದ ಕುರಿಗಳಿಗೆ ಚಳಿಯಾಗುವುದಿಲ್ಲ. 2. ಮನುಷ್ಯರು ಗಿಳಿಗಳನ್ನು ಹಿಡಿದು ಸಾಕುತ್ತಾರೆ; ಮನುಷ್ಯರು ಗಿಳಿಗಳಿಗೆ ಮಾತು ಕಲಿಸುತ್ತಾರೆ. 3. ರಂಗನೆಂಬ ಚಿಕ್ಕ ಹುಡುಗನಿದ್ದನು; ರಂಗನ ತಂದೆಯು ರಂಗನನ್ನು ಪಾಠಶಾಲೆಗೆ ಕಳುಹಿಸಿದನು. 4. ಜನಕರಾಯನ ಮಗಳು ಸೀತೆ; ಸೀತೆಯು ರಾಮನನ್ನು ಮದವೆ ಮಾಡಿಕೊಂಡಳು. 5. ಹಕ್ಕಿಯ ಮನೆಯು ಹಕ್ಕಿಯ ಗೂಡು; ಗೂಡಿನಲ್ಲಿ ಹಕ್ಕಿಯು ಮೊಟ್ಟೆಗಳನ್ನು ಇಡುತ್ತದೆ. 6. ಮಂಗನ ಕೈಯಲ್ಲಿ ಮಾಣಿಕ್ಯ ಕೊಟ್ಟರೆ, ಮಂಗನಿಗೆ ಮಾಣಿಕ್ಯದ ಬೆಲೆ ತಿಳಿದೀತೇ? 7. ಒಂಟಿಯು ತಾಳ್ಮೆಯುಳ್ಳ ಪ್ರಾಣಿ; ಅರಬ್ಬಿಯವನು ಒಂಟಿಯನ್ನು ಪ್ರೀತಿಸುತ್ತಾನೆ; ಅರಬ್ಬಿಯವನು ಒಂಟಿಯ ಹಾಲನ್ನು ಕುಡಿಯುತ್ತಾನೆ. 8. ಒಂಟಿಯ ಕೂದಲು ಅರಬ್ಬಿಯವನಿಗೆ ಬಟ್ಟೆಗೆ ಆಗುತ್ತದೆ; ಒಂಟಿಗಳು ಮುಳ್ಳುಗಿಡಗಳನ್ನು ತಿನ್ನುತ್ತವೆ.

1. "ನಾನು ಅಂಗಡಿಬೀದಿಗೆ ಬರುತ್ತೇನೆ" ಎಂದು ನಾರಾಯಣನು ಹೇಳಿದನು. 2. "ನಾನು ಪಾಠಶಾಲೆಗೆ ಹೋಗಲಾರೆನು" ಎಂದು ಹುಡುಗಿಯು ಹಟಮಾಡಿದಳು. 3. "ನಾನು ನನ್ನ ಉಣ್ಣೆಯನ್ನು ಕೊಟ್ಟೆನು" ಎಂದು ಕುರಿಯು ಹೇಳಿತು.

ಮೊದಲನೆಯ ವಾಕ್ಯದಲ್ಲಿ ನಾರಾಯಣನು ಹೇಳಿದ ಮಾತುಗಳು ಯಾವುವು? ನಾನು ಅಂಗಡಿಬೀದಿಗೆ ಬರುತ್ತೇನೆ. ಈ ವಾಕ್ಯದಲ್ಲಿ ನಾನು ಎಂದರೆ ಯಾರು? ಮಾತಾಡುವ ಮನುಷ್ಯನು. ನಾರಾಯಣನು ಈ ವಾಕ್ಯವನ್ನು ಆಡಿದ್ದರಿಂದ ನಾರಾಯಣನು ತನ್ನನ್ನು ಕುರಿತು ಹೇಳುವಾಗ ನಾನು ಎಂದು ಹೇಳುವನು. ಎರಡನೆಯ ವಾಕ್ಯವನ್ನು ಯಾರು ಆಡಿದರು? ಹುಡುಗಿಯು ಆ ಮಾತುಗಳನ್ನು ಹೇಳಿದಳು. ಎರಡನೆಯ ವಾಕ್ಯದಲ್ಲಿ ನಾನು ಎಂಬ ಪದವು ಹುಡುಗಿಯನ್ನು ಕುರಿತು ಹೇಳಿದ್ದಾಗಿದೆ. ಮೂರನೆಯ ವಾಕ್ಯವನ್ನು ಕುರಿಯು ಹೇಳಿದ್ದರಿಂದ ನಾನು ಎಂಬ ಪದವು ಕುರಿಯನ್ನು ಕುರಿತು ಹೇಳಿದ್ದಾಗಿದೆ. ನಾನು ಎಂಬುದು ಮಾತಾಡುವವನು ತನ್ನ ಹೆಸರಿನ ಬದಲಾಗಿ ವಾಕ್ಯದಲ್ಲಿ ಹೇಳುವ ಪದವಾಗಿದೆ. ಕೃಷ್ಣನು ತನ್ನನ್ನು ಕುರಿತು ಮಾತಾಡುವಾಗ ಕೃಷ್ಣನು ಎಂದು ಹೇಳುವುದಿಲ್ಲ. ಹಾಗೆ ಹೇಳುವ ಬದಲಾಗಿ ನಾನು ಎಂಬ ಪದವನ್ನು ಪ್ರಯೋಗಿಸುವನು.

ISRT

ಇದರಂತೆಯೇ ವಿಚಾರಿಸಿದರೆ, ನಾನು—ನಾವು, ನನ್ನನ್ನು—ನಮ್ಮನ್ನು, ನನ್ನಿಂದ—ನಮ್ಮಿಂದ, ನನಗೆ—ನಮಗೆ, ನನ್ನ—ನಮ್ಮ, ನನ್ನಲ್ಲಿ—ನಮ್ಮಲ್ಲಿ ಎಂಬೀ ಪದಗಳು ಮಾತಾಡುವವರು ತಮ್ಮ ಹೆಸರನ್ನು ಹೇಳಬೇಕಾದ ಎಡೆಗಳಲ್ಲಿ ಪ್ರಯೋಗಿಸುವ ಪದಗಳಾಗಿವೆ.

ನಿನ್ನ ತಾಯಿತಂದೆಗಳು ನಿನ್ನನ್ನು ಪ್ರೀತಿಸಬೇಕಾದರೆ, ನೀನು ನಿನ್ನ ಕೆಲಸಗಳನ್ನು ಸರಿಯಾಗಿ ಮಾಡಬೇಕು.

ಈ ವಾಕ್ಯದಲ್ಲಿ ನೀನು ಎಂಬ ಪದವು ಯಾರ ಹೆಸರಿನ ಬದಲಾಗಿ ಉಪಯೋಗವಾಗಿದೆ? ನಾವು ಯಾರೊಡನೆ ಮಾತಾಡುತ್ತೇವೋ ಅವನ ಹೆಸರಿನ ಬದಲಾಗಿ ನೀನು ಎಂಬುದು ಪ್ರಯೋಗವಾಗಿದೆ. ಈ ವಾಕ್ಯವನ್ನು ಉಪಾಧ್ಯಾಯನು ಕೃಷ್ಣನೊಡನೆ ಮಾತಾಡಿದರೆ, ನೀನು ಎಂಬ ಪದವು ಕೃಷ್ಣ ಎಂಬ ಹೆಸರಿನ ಬದಲಾಗಿ ಬರುತ್ತದೆ. ಇದೇ ವಾಕ್ಯವನ್ನು ಉಪಾಧ್ಯಾಯನು ಸೀತೆಯೊಡನೆ ಹೇಳಿದರೆ, ನೀನು ಎಂಬ ಪದವು ಸೀತೆ ಎಂಬ ಹೆಸರಿನ ಬದಲಾಗಿ ಬರಬಹುದು.

ಇದರಂತೆಯೇ ವಿಚಾರಿಸಿದರೆ, ನೀನು—ನೀವು, ನಿನ್ನನ್ನು—ನಿಮ್ಮನ್ನು, ನಿನ್ನಿಂದ—ನಿಮ್ಮಿಂದ, ನಿನಗೆ—ನಿಮಗೆ, ನಿನ್ನ—ನಿಮ್ಮ, ನಿನ್ನಲ್ಲಿ—ನಿಮ್ಮಲ್ಲಿ ಎಂಬೀ ಪದಗಳು ನಾವು ಯಾರೊಡನೆ ಮಾತಾಡುತ್ತೇವೋ ಅವರ ಹೆಸರಿನ ಬದಲಾಗಿ ವಾಕ್ಯಗಳಲ್ಲಿ ಬರುತ್ತವೆ.

8. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ದೊಡ್ಡ ಅಕ್ಷರದಿಂದ ಬರೆದ ಪದಗಳು ಯಾರ ಹೆಸರಿನ ಬದಲಾಗಿ ಬರುತ್ತವೆಂದು ಹೇಳಿರಿ:—

1. ಒಬ್ಬ ಮನುಷ್ಯನು ಆ ಮುದುಕನನ್ನು ನೋಡಿ, "ಅಯ್ಯಾ! ನೀನು ನಿನ್ನ ಮಗನೊಡನೆ ನಡೆಯುತ್ತಿದ್ದೀ, ಇಷ್ಟೆಯೇ ನಿಮಗೆ ಇರುವ ಬುದ್ಧಿ?" ಎಂದನು. 2. ಮಸುವು ಫೀನುಹುಳುವನ್ನು ಕಂಡು, "ನಾನು ಇದರ ಹಾಗೆ ಹಾರಾಡಲಿಕ್ಕೆ ಕಲಿತಿದ್ದರೆ, ನನಗೆ ಶಾಲೆಗೆ ಹೋಗಲು ಇತ್ತೇ?" ಎಂದಿತು. 3. "ಅಮ್ಮಣ್ಣೀ! ನೀನು ಚೆನ್ನಾಗಿ ಕಲಿತರೆ, ನಾನು ಒಂದು ಹಿಂಬಳೆಯನ್ನು ನಿನಗೆ ಮಾಡಿಸಿಕೊಡುತ್ತೇನೆ" ಎಂದು ತಂದೆಯು ಲಕ್ಷ್ಮಿಗೆ ಹೇಳಿದನು. 4. "ಅಮ್ಮಾ! ನೀನು ಚಂದ್ರನಿಗೆ ಆಸೆ ಪಡಬೇಡ! ಅದು ನಮ್ಮ ಕೈಗೆ ಸಿಕ್ಕುವುದಿಲ್ಲ. ನಿನಗೆ ಬೇಕಾದರೆ, ನಾನು ಬೇರೆ ಒಡವೆಗಳನ್ನು ತಂದುಕೊಡುವೆನು" ಎಂದು

ಕೌಸಲ್ಯೆಯು ರಾಮನನ್ನು ಸಂತೈಸಿದಳು. 5. ಆ ಪ್ರಯಾಣಸ್ಥರಲ್ಲಿ ಸುಬ್ಬಯ್ಯನು ರಾಮಯ್ಯನನ್ನು ಕುರಿತು—"ಒಂದು ಹುಲಿ ಬಂದರೆ, ನಾವು ಏನು ಮಾಡಬೇಕು? ನನಗೆ ಭಯವಾಗುತ್ತಿದೆ. ದೇವರೇ ನಮ್ಮನ್ನು ರಕ್ಷಿಸಲಿ! ನಾವು ಅವನನ್ನು ಬೇಡಿಕೊಳ್ಳುವ!" ಎಂದನು. 6. "ಮೊರೆಗಳೇ! ನೀವು ನಮ್ಮ ಊರಿಗೆ ಬಂದ ಮೇಲೆ ನಮ್ಮ ಸ್ಥಿತಿಯು ಒಳ್ಳೆಯದಾಯಿತು. ನೀವು ಇದರಂತೆಯೇ ನಡೆಯಿಸಬೇಕಾಗಿ ಬೇಡಿಕೊಳ್ಳುತ್ತೇವೆ" ಎಂದು ಕುರುಬನು ಅರಸನೊಡನೆ ಪ್ರಾರ್ಥಿಸಿದನು.

Pronoun.

4ನೆಯ ಪಾಠ.—ಸರ್ವನಾಮಗಳು.

ಕೃಷ್ಣನು ತಾಯಿತಂದೆಗಳು ಹೇಳಿದ ಹಾಗೆ ಕೇಳಿಕೊಳ್ಳುತ್ತಾನೆ. ಕೃಷ್ಣನ ತಾಯಿತಂದೆಗಳು ಕೃಷ್ಣನನ್ನು ಪ್ರೀತಿಸುತ್ತಾರೆ. ಕೃಷ್ಣನಿಗೆ ಹಣವನ್ನು ಕೊಡುತ್ತಾರೆ. ಕೃಷ್ಣನಿಂದ ಪುಸ್ತಕವನ್ನು ಓದಿಸುತ್ತಾರೆ. ಕೃಷ್ಣನಲ್ಲಿ ಕೆಟ್ಟ ಗುಣವೊಂದೂ ಇಲ್ಲ.

ಮೇಲಿನ ವಾಕ್ಯಗಳಲ್ಲಿ ಕೃಷ್ಣ ಎಂಬ ಪದವು ಮತ್ತೆಮತ್ತೆ ಹೇಳಬೇಕಾದ್ದರಿಂದ ಹಾಗೆ ಹೇಳುವ ಬದಲಾಗಿ ಅವನು ಮುಂತಾದ ಪದಗಳನ್ನು ವಾಡಿಕೆಯಾಗಿ ಉಪಯೋಗಿಸುತ್ತೇವೆ. ಇಂಥ ಪದಗಳನ್ನು ಮೇಲಿನ ವಾಕ್ಯಗಳಲ್ಲಿಟ್ಟು ಬರೆದರೆ, ಅವುಗಳ ಅರ್ಥವು ಕೆಡುವುದಿಲ್ಲ.

ಕೃಷ್ಣನು ತಾಯಿತಂದೆಗಳು ಹೇಳಿದ ಹಾಗೆ ಕೇಳುತ್ತಾನೆ. ಅವನ ತಾಯಿತಂದೆಗಳು ಅವನನ್ನು ಪ್ರೀತಿಸುತ್ತಾರೆ. ಅವನಿಗೆ ಹಣವನ್ನು ಕೊಡುತ್ತಾರೆ. ಅವನಿಂದ ಪುಸ್ತಕವನ್ನು ಓದಿಸುತ್ತಾರೆ. ಅವನಲ್ಲಿ ಕೆಟ್ಟ ಗುಣವೊಂದೂ ಇಲ್ಲ.

ಮೇಲಿನ ವಾಕ್ಯಗಳಲ್ಲಿ ಕೃಷ್ಣ ಎಂಬ ನಾಮಪದದ ಬದಲಾಗಿ ಅವನು ಎಂಬ ಪದವನ್ನು ಇಟ್ಟು ಬರೆದೆವು. ನಾಮಪದದ ಬದಲಾಗಿ ಪ್ರಯೋಗಿಸುವ ಪದಗಳು ಸಹ ನಾಮಗಳೇ. ಆದರೆ ಇವುಗಳಿಗೆ ಸರ್ವನಾಮಗಳೆಂದು ಹೆಸರು.

ನಾಮಗಳಿಗೆ ಇರುವ ಹಾಗೆ ಈ ಪದಗಳಿಗೆ ಸ್ವತಃ ಅರ್ಥವಿಲ್ಲ. ವಾಕ್ಯದಲ್ಲಿ ಮುಂದೆ ಹೇಳಿದ ಅಥವಾ ಹಿಂದೆ ಹೇಳುವ ನಾಮಪದಕ್ಕೆ ಸಂಬಂಧವಾಗಿ ಈ ಪದಗಳಿಗೆ ಅರ್ಥವಾಗುವುದು. ಅವನು ಬಂದನು ಎಂದು ಇಷ್ಟೇ

ISRT

ಹೇಳಿಬಿಟ್ಟರೆ, ಅವನು ಎಂಬ ಪದವು ಮುಂಚೆ ಹೇಳಿರುವ ಯಾರೋ ಒಬ್ಬನನ್ನು ಕುರಿತು ಹೇಳಿದ ಪದವಾಗಿರುತ್ತದೆ ಎಂದು ತಿಳಿಯಬೇಕು. ಅವನು ಯಾರೆಂದು ತಿಳಿಯಲಿಕ್ಕೆ ಈ ವಾಕ್ಯದಿಂದ ಆಗದೆ ಇದ್ದುದರಿಂದ, ಅವನು ಎಂಬ ಪದಕ್ಕೆ ಸರಿಯಾಗಿ ಅರ್ಥವಾಗುವುದಿಲ್ಲ; ಯಾರನ್ನು ಕುರಿತು ಮಾತಾಡುತ್ತೇವೆಂದೂ ಹೇಳಬರುವುದಿಲ್ಲ.

ಅವನು ಬಂದನು ಎಂಬ ವಾಕ್ಯದಲ್ಲಿ ಅವನು ಎಂಬ ಪದವು ರಾಮ ಎಂಬ ನಾಮಪದದ ಬದಲಾಗಿ ಪ್ರಯೋಗವಾಗಬಹುದು. ಅವಶ್ಯವಿದ್ದರೆ, ಗೋವಿಂದನನ್ನು ಕುರಿತು ಮಾತಾಡುವಾಗ ಅವನು ಬಂದನು ಎಂದೂ ಹೇಳಬಹುದು. ಹಾಗೆಯೇ ಅವನು ಬಂದನು ಎಂಬ ವಾಕ್ಯದಲ್ಲಿದ್ದ ಅವನು ಎಂಬ ಪದವು ಅಂಗಡಿಗಾರ, ಉಪಾಧ್ಯಾಯ, ಗಂಡಸು ಮೊದಲಾದ ಸರ್ವರನ್ನು ಕುರಿತು ಒಂದೇ ರೀತಿಯಾಗಿ ಪ್ರಯೋಗವಾಗಬಹುದು.

• ವಾಕ್ಯದಲ್ಲಿ ಸ್ವತಃ ಅರ್ಥವಿಲ್ಲದೆ ಬೇರೆ ನಾಮಪದದ ಬದಲಾಗಿ ಪ್ರಯೋಗವಾಗುವ ಪದಕ್ಕೆ ಸರ್ವನಾಮವೆಂದು ಹೆಸರು. ಸರ್ವನಾಮವೆಂದರೆ ಎಲ್ಲರನ್ನು ಕುರಿತು ಹೇಳಬಹುದಾದ ಹೆಸರು. ನಾನು, ನಾವು, ನೀನು, ನೀವು, ಅವನು, ಅವಳು, ಅವರು, ಅದು, ಅವು, ಇವನು, ಇವರು, ಇದು, ಇವುಗಳು, ಆತನು, ಈತನು, ಆಕೆ, ಈಕೆ, ತಾನು, ತಾವು, ಯಾರು, ಯಾವುವು, ಯಾವುದು, ಏನು ಮೊದಲಾದ ಪದಗಳನ್ನು ನಾವು ಸರ್ವರನ್ನು ಕುರಿತು ಪ್ರಯೋಗಿಸಬಹುದು; ಇವುಗಳು ಸರ್ವನಾಮಗಳು.

9. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ಸರ್ವನಾಮಗಳನ್ನು ತೋರಿಸಿರಿ:—

1. ಟಪ್ಪಾಲಿನವನು ತನ್ನ ಎಡಗೈಯಲ್ಲಿ ಕಾಗದಗಳನ್ನು ಹಿಡಿದುಕೊಂಡು ಅವುಗಳಲ್ಲಿ ಒಂದು ಕಾಗದವನ್ನು ಅವನು ತೆಗೆದು ತನ್ನ ಬಲಗೈಯಲ್ಲಿ ಹಿಡಿದುಕೊಂಡಿದ್ದಾನೆ. 2. ಮುದುಕನೂ ಅವನ ಮಗನೂ ತಮ್ಮ ಕತ್ತೆಯನ್ನು ಹೊಡೆದುಕೊಂಡು ಹೋಗುವುದನ್ನು ನೋಡಿ—"ನೀವು ಇದೇನು ಮಾಡುತ್ತೀರಿ? ಹೀಗೆ ನೀವು ಮಾಡಲು ಯಾರು ಹೇಳಿದರು? ಅದು ನಿಮ್ಮನ್ನು ಹೊರುವುದಕ್ಕಿಂತ ನೀವೇ ಅದನ್ನು ಹೊರುವುದು ಲೇಸು" ಎಂದು ದಾರಿಗನು ಹೇಳಿದನು. 3. ಯಾರೋ ನನ್ನ ಗೂಡನ್ನು ಕಳವು ಮಾಡಿದರು. ನಾನು ಇನ್ನೇನು ಮಾಡಲಿ? 4. ನಾನು ನೀನು ಎಂಬ ಭೇದವ ಬಿಟ್ಟುನೋಡು.

ISRT

5. ಅಡುವಾಗಲು ನಾವು ಭೋಜನ ಮಾಡುವಾಗಲು ಸರ್ವದಾ ।
ನೋಡಿ ನೀ ದಯದಿಂದ ನಮ್ಮೆನು ಪಾಲಿಸೈ ಭಗವಂತನೆ ॥
ಬೇಡಿಕೊಂಬೆವು ನಮ್ಮ ದೇಹಕೆ ಸೌಖ್ಯಮಂ ಬಲಪುಷ್ಟಿಯಂ ।
ನೀಡು ನಿನ್ನಯ ಪಾದಭಕ್ತಿಯನೆಂದಿಗೂ ಬಿಡಲಾರೆವೈ ॥

ಪರೀಕ್ಷೆ.

ನಾಮಪದಗಳ ಬದಲಿಗೆ ಬರುವ ಪದಗಳು ಯಾವುವು? ಸರ್ವನಾಮವೆಂದರೇನು? ಸರ್ವನಾಮವೆಂದು ಏಕೆ ಕರೆಯುವರು? ಕೆಲವು ಸರ್ವನಾಮಗಳನ್ನು ಹೇಳು. ಸರ್ವನಾಮಕ್ಕೂ ನಾಮಪದಕ್ಕೂ ಭೇದವೇನು? ಸರ್ವನಾಮವು ಎಲ್ಲರನ್ನು ಕುರಿತು ಹೇಳುವ ಹೆಸರು ಎಂಬುದಕ್ಕೆ ಉದಾಹರಣೆಗಳನ್ನು ಕೊಡು.

5ನೆಯ ಪಾಠ.—ಕ್ರಿಯಾಪದಗಳು.

1. ರಾಮನು ಓಡುತ್ತಾನೆ. 2. ರಾಮನು ಓಡಿದನು. 3. ರಾಮನು ಓಡುವನು.

ಮೇಲೆ ಬರೆದ ಮೂರು ವಾಕ್ಯಗಳನ್ನು ಓದು. ಈ ಮೂರು ವಾಕ್ಯಗಳ ಅರ್ಥವು ಒಂದೇಯಾಗಿದೆಯೇ? ಇಲ್ಲ. ಅರ್ಥಭೇದವು ಹೇಗುಂಟಾಯಿತೆಂದು ಹೇಳಬಲ್ಲೆಯಾ? ನಾನು ಹೇಳುತ್ತೇನೆ. ಈ ವಾಕ್ಯಗಳಲ್ಲಿ ಅರ್ಥಭೇದವು ಓಡುತ್ತಾನೆ, ಓಡಿದನು, ಓಡುವನು ಎಂಬೀ ಪದಗಳಿಂದ ಉಂಟಾಗಿದೆ. ಈ ಪದಗಳು ರಾಮನು ಓಡುವುದು ಯಾವಾಗ ಎಂಬುದನ್ನು ತಿಳಿಸುತ್ತವೆ; ಈ ಪದಗಳು ರಾಮನು ಮಾಡುವ ಕೆಲಸವನ್ನೂ ಹೇಳುತ್ತವೆ. ರಾಮನು ಓಡುತ್ತಾನೆ; ಈ ವಾಕ್ಯದಲ್ಲಿ ರಾಮನು ಮಾಡುವ ಕೆಲಸವನ್ನು ಹೇಳುವ ಪದವು ಯಾವುದು? ಓಡುತ್ತಾನೆ ಎಂಬುದೇ. ಆ ಪದವು ರಾಮನು ಮಾಡುವ ಯಾವ ಕಾರ್ಯವನ್ನು ಹೇಳುತ್ತದೆ? ಓಡುವುದನ್ನು ಎಂದು ನೀನು ಹೇಳಬಲ್ಲೆ.

ಯಾವನೊಬ್ಬ ಮನುಷ್ಯನು ಅಥವಾ ಯಾವುದೊಂದು ವಸ್ತುವು ಮಾಡುವ ಕೆಲಸಕ್ಕೆ ಪ್ರವೃತ್ತಿಯೆಂದೂ ಅಥವಾ ಕ್ರಿಯೆಯೆಂದೂ ಹೇಳುತ್ತಾರೆ. ಪ್ರವೃತ್ತಿ ಎಂದರೆ ಕಾರ್ಯ. ಹುಡುಗರು ಕಲಿಯುತ್ತಾರೆ; ಈ ವಾಕ್ಯದಲ್ಲಿ ಕಲಿ

ISRT

ಯುವುದು ಹುಡುಗರ ಪ್ರವೃತ್ತಿಯಾಗಿದೆ. ಸೂರ್ಯನು ಹೊಳೆಯುತ್ತಾನೆ; ಈ ವಾಕ್ಯದಲ್ಲಿ ಹೊಳೆಯುವುದೇ ಸೂರ್ಯನ ಪ್ರವೃತ್ತಿಯಾಗಿದೆ. ಎಾನು ಈಸುತ್ತದೆ; ಇದರಲ್ಲಿ ಮಾನಿನ ಪ್ರವೃತ್ತಿ ಈಸುವುದಾಗಿದೆ. ಮರವು ಬೆಳೆಯುತ್ತದೆ; ಇಲ್ಲಿ ಬೆಳೆಯುವುದೇ ಮರದ ಪ್ರವೃತ್ತಿಯಾಗಿದೆ.

ಓಡುತ್ತಾನೆ, ಓಡಿದನು, ಓಡುವನು ಎಂಬೀ ಪದಗಳು ರಾಮನ ಪ್ರವೃತ್ತಿಯನ್ನು ತೋರಿಸುತ್ತವೆ; ಮತ್ತು ರಾಮನು ಆ ಪ್ರವೃತ್ತಿಯನ್ನು ಯಾವಾಗ ಮಾಡುತ್ತಾನೆಂಬುದನ್ನೂ ತೋರಿಸುತ್ತವೆ.

ರಾಮನು ಓಡುತ್ತಾನೆ— ಈ ವಾಕ್ಯದಲ್ಲಿ ರಾಮನ ಪ್ರವೃತ್ತಿಯು ಯಾವುದು? ಓಡುವುದು. ಓಡುತ್ತಾನೆ ಎಂಬ ಪದದಿಂದ ಈ ಪ್ರವೃತ್ತಿಯು ಈಗ ನಡೆಯುವ ಕಾಲದಲ್ಲಿಯೇ ಇದೆ ಎಂದು ತಿಳಿಯಬಹುದು. ರಾಮನು ಓಡಿದನು— ಇಲ್ಲಿ ರಾಮನ ಪ್ರವೃತ್ತಿಯು ಹಿಂದಿನ ಕಾಲದಲ್ಲಿ ಆಗಿಹೋಯಿತೆಂದು ತಿಳಿಯಬಹುದು. ರಾಮನು ಓಡುವನು— ಈ ವಾಕ್ಯದಲ್ಲಿ ರಾಮನು ಇನ್ನು ಮುಂದಿನ ಕಾಲದಲ್ಲಿ ಆ ಪ್ರವೃತ್ತಿಯನ್ನು ಮಾಡಲುಳ್ಳವನೆಂದು ತಿಳಿಯಬಹುದು. ಓಡುತ್ತಾನೆ, ಓಡಿದನು, ಓಡುವನು ಎಂಬೀ ಪದಗಳು ಕಾಲಭೇದವನ್ನೂ ಪ್ರವೃತ್ತಿಯನ್ನೂ ತೋರಿಸುತ್ತವೆ.

ಕಾಲಭೇದವನ್ನೂ ಪ್ರವೃತ್ತಿಯನ್ನೂ ತೋರಿಸುವ ಪದಗಳಿಗೆ ವ್ಯಾಕರಣದಲ್ಲಿ ಕ್ರಿಯಾಪದಗಳೆಂದು ಹೆಸರು. ಓಡುತ್ತಾನೆ, ಕಲಿಯುತ್ತಾಳೆ, ಹೊಳೆಯಿತು ಎಂಬೀ ಪದಗಳು ಕ್ರಿಯಾಪದಗಳೆನ್ನಿಸುತ್ತವೆ. ವಸ್ತುಗಳು ಮಾಡುವ ಕ್ರಿಯೆಯನ್ನುತೋರಿಸುವುದರಿಂದಲೇ ಆ ಪದಗಳಿಗೆ ಕ್ರಿಯಾಪದಗಳೆಂದು ಹೆಸರಾಗಿದೆ.

1. ರಾಮನು ಓಡುತ್ತಾನೆ. 2. ರಾಮನು ಓಡಿದನು. 3. ರಾಮನು ಓಡುವನು.

ಈ ಮೂರು ವಾಕ್ಯಗಳಲ್ಲಿ ಓಡು ಎಂಬ ಕ್ರಿಯಾಪದವು ರಾಮನ ಪ್ರವೃತ್ತಿಯನ್ನು ತೋರಿಸುತ್ತದೆಂದು ನೀನು ತಿಳಿದಿರುವೆಯಷ್ಟೆ. ಓಡುತ್ತಾನೆ ಎಂಬುದು ನಡೆಯುವ ಕಾಲವನ್ನು ಹೇಳುತ್ತದೆ; ಓಡಿದನು ಎಂಬುದು ಕಳೆದ ಕಾಲವನ್ನು ಹೇಳುತ್ತದೆ; ಓಡುವನು ಎಂಬುದು ಬರುವ ಕಾಲವನ್ನು ಹೇಳುತ್ತದೆ.

ನಡೆಯುವ ಕಾಲಕ್ಕೆ ವರ್ತಮಾನಕಾಲವೆಂದು ಹೆಸರು; ಕಳೆದ ಕಾಲಕ್ಕೆ ಭೂತಕಾಲವೆಂದು ಹೆಸರು; ಬರುವ ಕಾಲಕ್ಕೆ ಭವಿಷ್ಯತ್ಕಾಲವೆಂದು ಹೆಸರು.

ISRT

ಓಡುತ್ತಾನೆ ಎಂಬ ಪದದಿಂದ ಕ್ರಿಯೆಯು ವರ್ತಮಾನಕಾಲದಲ್ಲಿಯೂ, ಓಡಿದನು ಎಂಬಲ್ಲಿ ಭೂತಕಾಲದಲ್ಲಿಯೂ, ಓಡುವನು ಎಂಬಲ್ಲಿ ಭವಿಷ್ಯತ್ಕಾಲದಲ್ಲಿಯೂ ಇರುತ್ತದೆಂದು ತಿಳಿಯಬೇಕು.

10. ಪ್ರಶ್ನೆಗಳು.

ಕೆಳಗಿನವುಗಳಲ್ಲಿ ಕ್ರಿಯಾಪದಗಳನ್ನು ಹೆಕ್ಕಿ ತೆಗೆದು, ಅವು ಯಾವ ಕಾಲವನ್ನು ತೋರಿಸುತ್ತವೆಂದು ಹೇಳಿರಿ:—

1. ಸೀತೆಯು ಅಂಗಿಯನ್ನು ಹೊಲಿಯುತ್ತಾಳೆ. 2. ಗೋವಿಂದನು ಇಪ್ಪತ್ತು ರೂಪಾಯಿಗೆ ಒಂದೆತ್ತನ್ನು ಕೊಂಡುಕೊಂಡನು. 3. ಗಬ್ಬಿಲವು ಹಲ್ಲುಗಳಿಂದ ಗಟ್ಟಿಯಾಗಿ ಕಚ್ಚುತ್ತದೆ. 4. ಕೂಳೆ ನೀರಿನಿಂದ ರೋಗಾದಿಗಳು ಹುಟ್ಟುತ್ತವೆ. 5. ನನ್ನ ಮೊಟ್ಟಿಗಳು ಹೋದುವಲ್ಲಾ ಎಂದು ಹಕ್ಕಿಯು ಗೋಳಾಡಿತು. 6. ನಾಯಿಯು ಯಾರಾದರೂ ನೀರಿನಲ್ಲಿ ಬಿದ್ದರೆ, ಅವರ ಬಳಿಗೆ ಹೋಗಿ, ಅವರ ಪ್ರಾಣವನ್ನು ರಕ್ಷಿಸುವುದು. 7. ಕಟ್ಟಿ ಮೇಲೆ ಬುದ್ಧಿ ಬಂತು, ಅಟ್ಟ ಮೇಲೆ ಒಲೆ ಉರಿಯಿತು. 8. ಉಗಿಯಂತ್ರವು ಹಡಗನ್ನು ನಡಿಸುತ್ತದೆ, ಭಾರವನ್ನು ಎತ್ತುತ್ತದೆ, ಸೇತುವೆಯನ್ನು ಕಟ್ಟುತ್ತದೆ, ಗಣಿಯನ್ನು ಅಗೆಯುತ್ತದೆ—ಹೀಗೆ ಮನುಷ್ಯನಿಗೆ ಒತ್ತಾಸೆ ಮಾಡುತ್ತದೆ. 9. ದೇವರು ಈ ಲೋಕವನ್ನು ಸಂರಕ್ಷಿಸುತ್ತಿರುವನು.

10. ನೇಮಿಸೆಮ್ಮೊಳು ಧರ್ಮಮಾರ್ಗವ ನಿನ್ನ ಭಜಿಸುವೆ ಭಜಿಸುವೆ।
ಪ್ರೇಮದಿಂದಲಿ ಪಾಲಿಸೆಮ್ಮನು ನಿನ್ನ ಭಜಿಸುವೆ ಭಜಿಸುವೆ॥

11. ದೇವ ಗೌಡರೆ ನಮ್ಮ ಬಿನ್ನಹ ನೀವು ಕೇಳಿರಿ ಬೇಗ ಏಳಿರಿ।
ಸಾವ ತಪ್ಪಿಸಿ ಇಲಿಯ ಕೈಯೊಳು ಕಾಯುವುದು ನೀಂ ಕರುಣಿಸಿ॥

ಪರೀಕ್ಷೆ.

ಪ್ರವೃತ್ತಿಯೆಂದರೇನು? ಕ್ರಿಯಾಪದವೆಂದರೇನು? ಕ್ರಿಯಾಪದಕ್ಕೂ ನಾಮಪದಕ್ಕೂ ಭೇದವೇನು? ಕ್ರಿಯಾಪದಕ್ಕೆ ಬರುವ ಮೂರು ಕಾಲಗಳು ಯಾವುವು? ವರ್ತಮಾನಕಾಲವೆಂದರೇನು? ಭೂತಕಾಲವೆಂದರೇನು? ಭವಿಷ್ಯತ್ಕಾಲವೆಂದರೇನು? ಒಕ್ಕಲಿಗನು ಹುಲ್ಲಿಂದ ಮಾಡು ಮಾಡುತ್ತಾನೆ; ಸೂರ್ಯನ ಪ್ರಕಾಶಕ್ಕೆ ಹೊಳೆಯು ಹೊಳೆಯುತ್ತದೆ; ಹಿತ್ತಿಲಲ್ಲಿ ಆಡು ಆಡುತ್ತಿತ್ತು; ಈ ವಾಕ್ಯಗಳಲ್ಲಿ ತೋರುವ ನಾಮಪದಗಳನ್ನೂ ಕ್ರಿಯಾಪದಗಳನ್ನೂ ತೋರಿಸಿರಿ. ಕ್ರಿಯಾಪದವೆಂಬ ಹೆಸರು ಹೇಗೆ ಬಂದಿತು? ಹತ್ತು ಕ್ರಿಯಾಪದಗಳನ್ನು ಹೇಳಿರಿ. ಕೆಳಗೆ ಕೊಟ್ಟ ಪ್ರಶ್ನೆಗಳಲ್ಲಿರುವ ಕ್ರಿಯಾಪದಗಳ ಕಾಲವನ್ನು ಹೇಳಿರಿ. ನಾನು ಓಡುತ್ತೇನೆ, ನೀವು ಕೇಳಿದಿರಿ, ಅವರು

ISRT

ಹೋಗುವರು, ನೀನು ತರುವೆ, ಅವನು ಬರೆಯುತ್ತಾನೆ, ಅವಳು ಓದಿದಳು, ಆದು ಮಾಡಿತು, ನಾವು ಕಲಿಯುತ್ತೇವೆ — ಇಲ್ಲಿ ಕ್ರಿಯಾಪದಗಳ ಕಾಲವು ಯಾವುದು? ಆ ವಾಕ್ಯಗಳಲ್ಲಿ ವರ್ತಮಾನಕಾಲವಿದ್ದರೆ, ಭೂತ ಭವಿಷ್ಯತ್ಕಾಲಗಳನ್ನು ಹೇಳು.

6ನೆಯ ಪಾಠ.—ವಿಶೇಷಣಗಳು. adjectives.

1. ಬಿಳಿ ಆನೆಗಳು ಬರ್ಮದಲ್ಲಿ ದೊರೆಯುತ್ತವೆ. 2. ದೊಡ್ಡ ಗಬ್ಬಿಲಗಳನ್ನು ಪಾವಲಿಗಳೆಂದು ಕರೆಯುತ್ತಾರೆ. 3. ಅಗಸರು ಹಳೆ ಬಟ್ಟೆಗಳನ್ನು ಒಗೆಯುತ್ತಾರೆ.

ಈ ಮೂರು ವಾಕ್ಯಗಳನ್ನು ಓದು. ಇವುಗಳಲ್ಲಿ ಮೊದಲನೆಯ ವಾಕ್ಯದಲ್ಲಿರುವ ಆನೆಗಳು, ಬರ್ಮದಲ್ಲಿ ಎಂಬ ಪದಗಳು ನಾಮಪದಗಳೆಂದು ನೀನು ಹೇಳಬಲ್ಲೆ; ದೊರೆಯುತ್ತವೆ ಎಂಬುದು ಕ್ರಿಯಾಪದವೆಂದೂ ನಿನಗೆ ಗೊತ್ತಾಗಿದೆ. ಬಿಳಿ ಎಂಬುದು ಯಾವ ಪದವಾಗಿದೆ? ಅದು ನಾಮಪದವಲ್ಲ, ಏಕೆಂದರೆ ಅದು ಯಾವುದೊಂದು ವಸ್ತುವಿನ ಹೆಸರಲ್ಲ. ಬಿಳಿ ಎಂಬ ಪದವು ಕಾಲಭೇದವನ್ನೂ ಪ್ರವೃತ್ತಿಯನ್ನೂ ತೋರಿಸುತ್ತದೆಯೇ? ಇಲ್ಲ. ಆದುದರಿಂದ ಅದು ಕ್ರಿಯಾಪದವಾಗಲಾರದು. ಬಿಳಿ, ದೊಡ್ಡ, ಹಳೆ ಎಂಬ ಶಬ್ದಗಳು ಯಾವ ಬಗೆಯ ಪದಗಳೆಂದು ನೋಡೋಣ!

ಬಿಳಿ ಆನೆಗಳು, ದೊಡ್ಡ ಆನೆಗಳು ಎಂದು ಹೇಳಿದರೆ, ಆನೆಗಳ ಒಂದು ಗುಣವನ್ನು ಕುರಿತು ಹೇಳಿದ ಹಾಗಾಯಿತು. ದುಷ್ಟ ಮೃಗವು, ಕೆಟ್ಟ ಹುಡುಗನು ಎಂದು ಹೇಳಿದರೆ, ಮೃಗದಲ್ಲಿಯೂ ಹುಡುಗನಲ್ಲಿಯೂ ತೋರುವ ಒಂದೊಂದು ಗುಣವನ್ನು ಹೇಳಿದ ಹಾಗಾಯಿತು. ಎರಡು ಕಣ್ಣುಗಳು, ನಾಲ್ಕು ಮರಗಳು. ಇಲ್ಲಿ ಕಣ್ಣುಗಳು ಎಷ್ಟಿವೆ ಎಂದೂ ಮರಗಳು ಎಷ್ಟಿವೆ ಎಂದೂ ತಿಳಿಸಿದ ಹಾಗಾಯಿತು. ಇಂಥ ಪದಗಳು ನಾಮಪದಗಳ ಮುಂದೆ ನಿಂತು ಅವುಗಳ ಗುಣವನ್ನಾಗಲಿ, ಲಕ್ಷಣವನ್ನಾಗಲಿ, ಸಂಖ್ಯೆಯನ್ನಾಗಲಿ ವಿಶೇಷವಾಗಿ ತಿಳಿಸುತ್ತವೆ. ವ್ಯಾಕರಣದಲ್ಲಿ ಇಂಥ ಪದಗಳಿಗೆ ವಿಶೇಷಣಗಳೆಂದು ಹೆಸರು.

ವಸ್ತುಗಳ ಗುಣವನ್ನೂ ಸಂಖ್ಯೆಯನ್ನೂ ಪರಿಮಾಣವನ್ನೂ ಒಮ್ಮೆಯೇ ತಿಳಿಸುವ ಪದಗಳು ವಿಶೇಷಣಪದಗಳು. ಈ ಪದಗಳು ಯಾವ ನಾಮಪದ

ISRT

ಗಳೊಂದಿಗೆ ಸೇರುತ್ತವೋ ಆ ನಾಮಪದಗಳಿಗೆ ಅವು ವಿಶೇಷಿಸುತ್ತವೆಂದು ಹೇಳುತ್ತೇವೆ.

ಕೆಳಗೆ ಬರೆದುವುಗಳಲ್ಲಿ ದೊಡ್ಡ ಅಕ್ಷರದಿಂದ ಬರೆದ ಪದಗಳು ವಿಶೇಷಣಗಳೆಂದು ಓದಿ ತಿಳಿದುಕೊಳ್ಳಿರಿ:

1. ಧನಕ್ಕೆ ಒಳ್ಳೇ ಮೇವು ಹಾಕಬೇಕು. 2. ಮೂರು ವರ್ಷದ ಬುದ್ಧಿ ನೂರು ವರ್ಷದ ಧನಕ. 3. ನಾವು ನಾಲ್ಕನೆಯ ಪುಸ್ತಕವನ್ನು ಓದುತ್ತೇವೆ. 4. ರಾಮನಿಗೆ ಅಷ್ಟು ಹಣವು ಎಲ್ಲಿಂದ ಬಂದಿತು? 5. ಆ ಪುಸ್ತಕಗಳನ್ನೂ ಈ ಕಡ್ಡಿಗಳನ್ನೂ ತೆಗೆದುಕೊಳ್ಳು. 6. ಕೃಷ್ಣನು ಕೆಳಗಿನ ಪೇಟೆಯಿಂದ ಹೊಸ ಅಂಗಡಿಗೆ ಹೋದನು. 7. ಮೂರನೆಯ ದಿನ ಅವನು ಕೆಲವು ಜನಗಳೊಡನೆ ಬಂದನು. 8. ನಾಯಿಯು ಹಾಳು ಜನರನ್ನು ಜರಲೀಸುವುದಿಲ್ಲ. 9. ಸಣ್ಣ ತಲೆಗೆ ದೊಡ್ಡ ಮುಂಡಾಸು.

ವಿಶೇಷಣವು ಯಾವ ಪದಕ್ಕೆ ಸಂಬಂಧಿಸಿರುವುದೋ ಆ ಪದಕ್ಕೆ ವಿಶೇಷ್ಯವೆಂದು ಹೆಸರು. ಚಿರತೆಗೆ ಕೂರಾದ ಹಲ್ಲುಗಳಿವೆ. ಈ ವಾಕ್ಯದಲ್ಲಿ ಕೂರಾದ ಎಂಬ ಪದವು ವಿಶೇಷಣವು; ಹಲ್ಲುಗಳು ಎಂಬ ಪದವೇ ವಿಶೇಷ್ಯವು.

11. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿರುವ ವಿಶೇಷಣಪದಗಳನ್ನು ತೋರಿಸಿರಿ; ಅವು ಯಾವುದಕ್ಕೆ ವಿಶೇಷಿಸುತ್ತವೆಂದೂ ಹೇಳಿರಿ:—

1. ಒಂದು ಊರಿನಲ್ಲಿ ರಂಗನೆಂಬ ಚಿಕ್ಕ ಹುಡುಗನಿದ್ದನು. 2. ಹೆಚ್ಚು ಕ್ರಯವನ್ನು ಈ ಸಣ್ಣ ಗಿಳಿಗೆ ಏಕೆ ಕೇಳುತ್ತೀಯೇ? 3. ತೋಳನು ಭಯಂಕರವಾದ ದೊಡ್ಡ ನಾಯಿಯಾಗಿದೆ. 4. ಈ ಮರವು ನನಗೆ ಹಳೆಯ ಸ್ನೇಹಿತನು; ಇದರಲ್ಲಿ ಎಷ್ಟು ಪಕ್ಷಿಗಳ ಗೂಡುಗಳಿವೆ! 5. ಸಣ್ಣ ಸಸಿಗೆ ಬೀಜದಿಂದ ಆಹಾರವು ದೊರೆಯುತ್ತದೆ; ದೊಡ್ಡ ಸಸಿಗೆ ವಾಯುವಿನಿಂದ ದೊರೆಯುತ್ತದೆ. 6. ಇಲ್ಲಿನ ಕಾಗೆಗಳಲ್ಲಿ ಎರಡು ಜಾತಿಗಳುಂಟು; ಒಂದು ಜಾತಿಯು ಮತ್ತೊಂದು ಜಾತಿಯದಕ್ಕಿಂತ ದೊಡ್ಡದಾಗಿದೆ. 7. ಆ ಪೂರ್ಣಚಂದ್ರನನ್ನು ಹಿಡಿದುಕೊಳ್ಳುವುದಕ್ಕೆ ರಾಮನು ಎರಡು ಪುಟ್ಟ ಕೈಗಳನ್ನು ನೀಡಿದನು. 8. ಈ ತೋಟದಲ್ಲಿ ಕೆಂಪು ಹೂಗಳೂ, ಬಿಳಿ ಮೊಗ್ಗುಗಳೂ, ಹಸುರು ಎಲೆಗಳೂ ಅಂದವಾಗಿ ತೋರುತ್ತಿವೆ. 9. ಬಲವಾದ ಗಾಳಿಯು ಬೀಸುತ್ತಲೆ ದೊಡ್ಡ ಮರಗಳೂ ಉರುಳಿ ಬೀಳುವುವು; ಎಳ ಹುಲ್ಲು ಭದ್ರವಾಗಿರುವುದು. 10. ಅಷ್ಟು ಹಣ ಕೊಟ್ಟರು, ಇಷ್ಟು ಹಣ ಕೊಟ್ಟರು ಎಂದು ಗುಣಸುಟ್ಟಬೇಡ. 11. ಹುಲಿಯ ಚರ್ಮದ ಮೇಲೆ ಕಿರಿಯ ಕೂದಲೂ ಕಪ್ಪು ಗೆರೆಗಳೂ ಇರುತ್ತವೆ. 12. ಹಳೆ ಎತ್ತಿಗೆ ಹಾಳು ಬಂಡಿ.

ISRT

ಪರೀಕ್ಷೆ.

ಒಂದು ಪದವು ಮತ್ತೊಂದಕ್ಕೆ ವಿಶೇಷಿಸುತ್ತದೆ ಎಂದರೇನು? ವಿಶೇಷಣವೆಂದರೇನು? ವಿಶೇಷ್ಯವೆಂದರೇನು? ವಿಶೇಷಣಗಳಿಗೆ ಕೆಲವು ಉದಾಹರಣೆಗಳನ್ನು ಕೊಡು. ವಿಶೇಷಣಗಳು ನಾಮಪದಗಳೊಡನೆ ಸೇರುವುದರಿಂದ ಅವು ನಾಮಪದಗಳ ವಿಷಯವಾಗಿ ಏನು ತಿಳಿಸುತ್ತವೆ?

7ನೆಯ ಪಾಠ.—ಕ್ರಿಯಾವಿಶೇಷಣಗಳು. adverbs

1. ರಾಮನು ನಿನ್ನೆ ಬಂದನು. 2. ರಾಮನು ಚೆನ್ನಾಗಿ ಪಾಠವನ್ನು ಓದುತ್ತಾನೆ. 3. ರಾಮನು ಪುಸ್ತಕವನ್ನು ಕೆಳಕ್ಕೆ ಇಟ್ಟನು.

ಮೊದಲನೆಯ ವಾಕ್ಯವನ್ನು ಓದು. ರಾಮನು ಯಾವಾಗ ಬಂದನು? ರಾಮನು ನಿನ್ನೆ ಬಂದನೆಂದು ತಿಳಿಯಬಹುದು. ಬಂದನು ಎಂಬ ಕ್ರಿಯಾಪದವು ಹೇಳುವ ಕ್ರಿಯೆಯು ಯಾವ ಕಾಲದಲ್ಲಿ ನಡೆಯಿತೆಂದು ತಿಳಿಸುವುದಕ್ಕೆ ನಿನ್ನೆ ಎಂಬ ಪದವು ವಾಕ್ಯದಲ್ಲಿದೆ.

ಎರಡನೆಯ ವಾಕ್ಯವನ್ನು ಓದು. ರಾಮನು ಚೆನ್ನಾಗಿ ಪಾಠವನ್ನು ಓದುತ್ತಾನೆ. ರಾಮನು ಹೇಗೆ ಓದುತ್ತಾನೆಂಬುದನ್ನು ಯಾವ ಪದದಿಂದ ತಿಳಿಯುತ್ತೇವೆ? ಅದನ್ನು ತಿಳಿದುಕೊಳ್ಳುವುದಕ್ಕೆ ವಾಕ್ಯದಲ್ಲಿ ಚೆನ್ನಾಗಿ ಎಂಬ ಪದವು ಬಂದಿದೆ. ಗಾಳಿಯು ಬಲವಾಗಿ ಬೀಸಿತು, ಮಳೆಯು ಗಟ್ಟಿಯಾಗಿ ಸುರಿಯಿತು, ಸಿಡಿಲು ಬಿರುಸಾಗಿ ಬಡಿಯಿತು — ಈ ವಾಕ್ಯಗಳಲ್ಲಿ ಬಲವಾಗಿ, ಗಟ್ಟಿಯಾಗಿ, ಬಿರುಸಾಗಿ ಎಂಬೀ ಪದಗಳು ಕ್ರಿಯಾಪದಗಳು ಹೇಳುವ ಪ್ರವೃತ್ತಿಗಳು ಯಾವ ರೀತಿಯಲ್ಲಿ ನಡೆದುವೆಂದು ತೋರಿಸುತ್ತವೆ.

ರಾಮನು ಪುಸ್ತಕವನ್ನು ಕೆಳಕ್ಕೆ ಇಟ್ಟನು. ಈ ವಾಕ್ಯದಲ್ಲಿ ಕೆಳಕ್ಕೆ ಎಂಬ ಪದವು ಯಾವ ಕ್ರಿಯಾಪದದೊಂದಿಗೆ ಸೇರಿದೆ? ಅದು ಇಟ್ಟನು ಎಂಬ ಪದಕ್ಕೆ ಸಂಬಂಧಿಸಿರುವುದರಿಂದ, ಇಟ್ಟದ್ದು ಯಾವ ಸ್ಥಳದಲ್ಲಿ ಎಂಬುದು ಸ್ಪಷ್ಟವಾಗುತ್ತದೆ. ಗಂಡಸರು ಮುಂದೆ ಹೋದರು; ಹೆಂಗಸರು ಹಿಂದೆ ಬಂದರು; ಮಕ್ಕಳು ನಡುವೆ ನಿಂತರು — ಈ ವಾಕ್ಯಗಳಲ್ಲಿರುವ ಮುಂದೆ, ಹಿಂದೆ, ನಡುವೆ ಎಂಬೀ ಪದಗಳು ಕ್ರಿಯೆಯು ಎಲ್ಲಿ ನಡೆಯಿತೆಂದು ತೋರಿಸುತ್ತವೆ.

ನಿನ್ನೆ, ಚೆನ್ನಾಗಿ, ಕೆಳಕ್ಕೆ ಎಂಬೀ ಪದಗಳು ಕ್ರಿಯೆಯು ಯಾವಾಗ ನಡೆಯಿತು, ಹೇಗೆ ನಡೆಯಿತು, ಎಲ್ಲಿ ನಡೆಯಿತು ಎಂಬ ಪ್ರಶ್ನೆಗಳಿಗೆ ಉತ್ತರವಾಗಿ ಬರುವುವು.

ಕ್ರಿಯಾಪದವು ಹೇಳುವ ಪ್ರವೃತ್ತಿಯು ಸಂಭವಿಸಿದ ಸ್ಥಳ, ಕಾಲ, ರೀತಿಗಳನ್ನು ಹೇಳುವ ಪದಗಳಿಗೆ ಕ್ರಿಯಾವಿಶೇಷಣಗಳೆಂದು ಹೆಸರು. ನಿನ್ನೆ, ಚೆನ್ನಾಗಿ, ಕೆಳಕ್ಕೆ, ಬಲವಾಗಿ, ಗಟ್ಟಿಯಾಗಿ, ಬಿರುಸಾಗಿ, ಹಿಂದೆ, ಮುಂದೆ, ನಡುವೆ ಮೊದಲಾದ ಪದಗಳು ಕ್ರಿಯಾವಿಶೇಷಣಗಳು.

6ನೆಯ ಪಾಠದಲ್ಲಿ ನೀನು ವಿಶೇಷಣಗಳನ್ನು ಕುರಿತು ಓದಿರುವೆಯಷ್ಟೆ. ಹಕ್ಕಿಯು ಚಿಕ್ಕ ಮೊಟ್ಟೆಗಳನ್ನು ಇಟ್ಟಿತು. ಈ ವಾಕ್ಯದಲ್ಲಿರುವ ಚಿಕ್ಕ ಎಂಬ ಪದವು ವಿಶೇಷಣವು. ಈ ವಿಶೇಷಣವು ನಾಮಪದಕ್ಕೆ ಸಂಬಂಧಿಸಿರುತ್ತದೆ. ಈ ಪಾಠದಲ್ಲಿ ಓದಿದ ವಿಶೇಷಣಗಳು ನಾಮಪದಗಳಿಗೆ ಸೇರುತ್ತವೆಯೇ? ಇಲ್ಲ; ಅವು ಕ್ರಿಯಾಪದಗಳಿಗೆ ಸಂಬಂಧಿಸಿರುವುದರಿಂದಲೇ ಅವುಗಳಿಗೆ ಕ್ರಿಯಾವಿಶೇಷಣಗಳೆಂದು ಹೆಸರಾಗಿದೆ.

12. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ಕ್ರಿಯಾವಿಶೇಷಣಗಳನ್ನು ತೋರಿಸಿ ಅವು ಯಾವ ಕ್ರಿಯಾಪದಗಳಿಗೆ ಸಂಬಂಧಿಸಿರುತ್ತವೆಂದು ಹೇಳಿರಿ:—

1. ಹುಲಿಯು ಥಟ್ಟನೆ ಠೇಗಿ ನಾಲ್ಕಾರು ಜನರನ್ನು ಕೊಲ್ಲುತ್ತದೆ. 2. ಕುಂದಲಿಗಳು ವೇಗವಾಗಿ ನೆಗೆದುಹೋಗುತ್ತವೆ. 3. ಹಕ್ಕಿಯು ಆಹಾರವನ್ನು ತರುವುದಕ್ಕೆ ಬೆಳಗ್ಗೆ ಹೊರಗೆ ಹೋಯಿತು. 4. ಸಿಂಹವು ಗಟ್ಟಿಯಾಗಿ ಗರ್ಜಿಸಿತು, ಇಲಿಯು ಬಹಳವಾಗಿ ಬೇಡಿಕೊಂಡಿತು. 5. ಕಾಗೆಯು ಹೊತ್ತಾರೆ ಎದ್ದು, ಅತ್ತಿತ್ತ ಕೂಗಾಡಿ, ಕೆಳಗೆ ಚೆಲ್ಲಿದ್ದ ಅನ್ನದ ಅಗುಳುಗಳನ್ನು ಳಕ್ಕನೆ ಎತ್ತಿಕೊಳ್ಳುತ್ತದೆ. 6. ಗೋದಿಯನ್ನು ಚೆನ್ನಾಗಿ ಬೀಸುವಾಗ ಸ್ವಲ್ಪ ಭಾಗವನ್ನು ದಪ್ಪವಾಗಿ ಒಡೆದು ರನೆ ಮಾಡುತ್ತಾರೆ. 7. ಜೋಳದ ಕಾಳುಗಳನ್ನು ಸರಾಗವಾಗಿ ಬಲಿಯುವುದಕ್ಕೆ ಬಿಟ್ಟರೆ, ಕಾಳುಗಳು ತೀರಾ ಬಣಗಿಹೋಗುತ್ತವೆ. 8. ಅತ್ತ ನೋಡಿದ, ಇತ್ತ ನೋಡಿದ, ಸುತ್ತ ನೋಡಿದ ಗೌಡನು. 9. ಮೊಸಳೆಯು ಯಾರಿಗೂ ಕಾಣಿಸದಂತೆ ಮೆಲ್ಲನೆ ಬಂದು, ಮೇಲೆ ಬಿದ್ದು ಜಂತುವನ್ನು ಬಿಗಿಯಾಗಿ ಹಿಡಿಯುತ್ತದೆ. 10. ನರಿಗಳು ಸುತ್ತಮುತ್ತಲೂ ಕೂಗುವುದನ್ನು ರಂಗನು ಕೇಳಿ ಜುಮ್ಮನೆ ಮೈದೆಗೆದು ಗಕ್ಕನೆ ಹಳ್ಳಿಗೆ ಓಡಿಹೋದನು. 11. ಆ ಸುಖವು ಅಂದು ಇದ್ದಿತು: ಈ ಸುಖವು ಇಂದು ಇದೆ; ಮುಂದೆ

ISRT

ಯಾವ ಸುಖವು ಬರುವುದೋ ಹೇಳಲಾರೆನು. 12. ಮನುಷ್ಯನು ಯಾವಾಗಲೂ ಸುಖಕಾಲ ಇದ್ದಾನೆ ಎಂದು ಖಂಡಿತವಾಗಿ ಹೇಳಬಹುದೇ?

ಪರೀಕ್ಷೆ.

ಕ್ರಿಯಾವಿಶೇಷಣವೆಂದರೇನು? ಕ್ರಿಯಾವಿಶೇಷಣವೆಂದು ಹೆಸರು ಹೇಗೆ ಬಂದಿತು? ಕ್ರಿಯಾವಿಶೇಷಣಕ್ಕೂ ಇತರ ವಿಶೇಷಣಗಳಿಗೂ ಭೇದವೇನು? ಕ್ರಿಯಾವಿಶೇಷಣಗಳನ್ನು ಕ್ರಿಯಾಪದಗಳೊಂದಿಗೆ ಏತಕ್ಕೆ ಸೇರಿಸುವರು? ವಾಕ್ಯದಲ್ಲಿರುವ ಕ್ರಿಯಾವಿಶೇಷಣಗಳನ್ನು ಹೇಗೆ ತಿಳಿದುಕೊಳ್ಳಬಹುದು? ಕ್ರಿಯಾವಿಶೇಷಣಗಳಿಗೆ ಕೆಲವು ಉದಾಹರಣೆಗಳನ್ನು ಕೊಡಿ.

8ನೆಯ ಪಾಠ.—ಸಮುಚ್ಚಯ. Conjunctions

ವಾಕ್ಯಗಳಲ್ಲಿನ ಪದಗಳನ್ನು ಕೂಡಿಸುವುದಕ್ಕೆ ಕೆಲವು ಶಬ್ದಗಳು ಆವಶ್ಯಕವಿವೆ. ಹುಡುಗನು ಕಾಗದವನ್ನು ಮತ್ತು ಪುಸ್ತಕವನ್ನು ತಂದನು. ಈ ವಾಕ್ಯದಲ್ಲಿ ಕಾಗದವನ್ನು, ಪುಸ್ತಕವನ್ನು ಎಂಬೀ ಪದಗಳನ್ನು ಕೂಡಿಸಲು ಮತ್ತು ಎಂಬ ಪದವು ಸೇರಿದೆ. ಎರಡು ವಾಕ್ಯಗಳನ್ನು ಕೂಡಿಸುವುದಕ್ಕೂ ಇಂಥ ಶಬ್ದಗಳನ್ನು ನಾವು ಪ್ರಯೋಗಮಾಡುತ್ತೇವೆ. ನಮ್ಮ ದೇಶದ ಒಕ್ಕಲಿಗರು ಹತ್ತಿ ಬೆಳಿಸಲಿಕ್ಕೆ ಬಲ್ಲರು, ಆದರೆ ಒಳ್ಳೆಯ ಹತ್ತಿಯಲ್ಲಿ ಕೀಳು ಹತ್ತಿಯನ್ನು ಬೆರಿಸುತ್ತಾರೆ. ಇಲ್ಲಿ ಎರಡು ವಾಕ್ಯಗಳಿವೆ; ಇವೆರಡನ್ನು ಕೂಡಿಸುವುದಕ್ಕೆ ಆದರೆ ಎಂಬ ಪದವು ಪ್ರಯೋಗವಾಗಿದೆ.

ಎರಡು ಅಥವಾ ಹೆಚ್ಚು ಪದಗಳನ್ನೂ, ಎರಡು ಅಥವಾ ಹೆಚ್ಚು ವಾಕ್ಯಗಳನ್ನೂ ಕೂಡಿಸುವ ಪದಗಳಿಗೆ ಸಮುಚ್ಚಯಗಳೆಂದು ಹೆಸರು.

ಕೆಳಗಿನ ವಾಕ್ಯಗಳಲ್ಲಿ ಸಮುಚ್ಚಯಗಳು ದೊಡ್ಡ ಅಕ್ಷರಗಳಿಂದ ಬರೆದಿವೆ. ವಾಕ್ಯಗಳನ್ನು ಓದಿ ಸಮುಚ್ಚಯಗಳು ಯಾವುವೆಂದು ತಿಳಿದುಕೊಳ್ಳುವುದು.

1. ನೀವು ಪಡಸಾಲೆಯೊಳಗೆ ಹೋಗಿರಿ; ಆದರೆ ಏನೂ ಗಡ್ಬಡ ಮಾಡಬೇಡಿರಿ. 2. ಕೇಸರವು ಬಹಳ ಬೆಳೆಯುವುದಿಲ್ಲ, ಹಾಗೂ ಅದು ಬಹಳ ಸ್ಥಳಗಳಲ್ಲಿ ಬೆಳೆಯುವುದಿಲ್ಲ. 3. ಅವನ ಗಂಟಿನೊಳಗೆ ಹಣ ಮತ್ತು ಆಭರಣ ಇದ್ದಿಲ್ಲ. 4. ಈ ಗಿಡಗಳ

ಹಣ್ಣುಗಳನ್ನು ಕೊಯ್ಯಬೇಡ, ಏಕೆಂದರೆ, ಅವು ನಮ್ಮವಲ್ಲ. 5. ಬಾವಿಯಿಂದ ನೀರು ಸೇದದರು, ಆದರೂ ನೀರು ಆರಲಿಲ್ಲ. 6. ಆ ಅಂಗಡಿಯಲ್ಲಿ ಮಾವು, ಹಲಸು, ಬಾಳೆ ಮತ್ತು ದ್ರಾಕ್ಷೇ ಹಣ್ಣುಗಳಿವೆ.

13. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ಸಮುಚ್ಚಯಗಳನ್ನು ತೋರಿಸಿರಿ; ಅವು ಯಾವುದನ್ನು ಕೂಡಿಸುತ್ತವೆಂದೂ ಹೇಳಿರಿ:—

1. ನನ್ನ ಬಾಲದಿಂದ ಸ್ವಲ್ಪ ಕೂದಲನ್ನು ಕೊಟ್ಟಿನು; ಆದರೆ ಪೊಟ್ಟಿಗಳನ್ನು ನಾನು ಕಳಲಿಲ್ಲ. 2. ನಾಯಿಯು ವಾಸನೆಯನ್ನು ಚೆನ್ನಾಗಿ ಹಿಡಿಯುತ್ತದೆ, ಮತ್ತು ಮೊಲವನ್ನು ಬೇಟೆಯಾಡುತ್ತದೆ. 3. ಹುಲಿಯು ಸಾಕುವವರ ಗುರುತನ್ನು ಚೆನ್ನಾಗಿ ತಿಳಿದುಕೊಳ್ಳುತ್ತದೆ, ಆದರೂ ಅದನ್ನು ಸಾಕುವುದು ಅಪಾಯಕರವು. 4. ನಾಯಿಯು ಯಜಮಾನನು ಹೋಗುವ ಕಡೆಗೆ ಹೋಗುತ್ತದೆ, ಆದ್ದರಿಂದಲೇ ನಾವು ನಾಯಿಯು ಒಳ್ಳೆಯದೆಂದು ಹೇಳುತ್ತೇವೆ. 5. ಹೊಲಿಗೆಕೆಲಸಕ್ಕೆ ಕತ್ತರಿ, ನೂಲು, ಮತ್ತು ಸೂಜಿಪತ್ತು ಬೇಕು. 6. ಎತ್ತುಗಳು ಒಂದೊಂದೇ ಸಿಂಹದೊಡನೆ ಕಾದುವುದಕ್ಕೆ ಆಗಲಿಲ್ಲ; ಪರಂತು ಅವು ಒಕ್ಕಟ್ಟಾಗಿರುವ ವರೆಗೂ ಸುರಕ್ಷಿತವಾಗಿದ್ದುವು. 7. ನೀವು ಆರೋಗ್ಯವಾಗಿ ಮತ್ತು ದೃಢವಾಗಿ ಇರುವಂತೆ ಪ್ರಯತ್ನಿಸಿರಿ. 8. ಒಂಟೆಯ ಡುಬ್ಬವು ಸಣ್ಣದಾಗುತ್ತಾ ಬರುತ್ತದೆ, ಏಕೆಂದರೆ ಆಹಾರಕ್ಕೆ ಪ್ರತಿಯಾಗಿ ಅದರಲ್ಲಿನ ಕೊಬ್ಬು ಸವೆಯುತ್ತದೆ. 9. ನಳರಾಜನೂ ಪುಷ್ಕರನೂ ಜೂಜಾಡಿದರು; ಪುಷ್ಕರನು ಗೆದ್ದನು, ಮತ್ತು ನಳನು ಸೋತನು; ಆದುದರಿಂದ ನಳನು ಕಾಡಿಗೆ ಹೋಗಬೇಕಾಯಿತು.

9ನೆಯ ಪಾಠ.—ಆಖ್ಯೆ, ಕರ್ತೃ. Subject

1. ಸೂರ್ಯನು ಉದಯಿಸುತ್ತಾನೆ. 2. ರಾಮನು ಮನೆಗೆ ಹೋದನು.

ಮೇಲಿನವುಗಳು ವಾಕ್ಯಗಳಾಗುವಂತೆ ಉದಯಿಸುತ್ತಾನೆ, ಹೋದನು ಎಂಬ ಪದಗಳ ಮುಂದೆ ಸೂರ್ಯನು, ರಾಮನು ಎಂಬ ಪದಗಳನ್ನು ಸೇರಿಸಿದ್ದೇವೆ. ಸಂಪೂರ್ಣ ವಾಕ್ಯಗಳಾಗಬೇಕಾದರೆ, ಆ ಕ್ರಿಯಾಪದಗಳೊಂದಿಗೆ ಸೂರ್ಯನು ಅಥವಾ ರಾಮನು ಮೊದಲಾದ ನಾಮಪದವನ್ನಾಗಲಿ ಸರ್ವನಾಮವನ್ನಾಗಲಿ ಸೇರಿಸಬೇಕಾಗುತ್ತದೆ.

ISRT

14. ಪ್ರಶ್ನೆಗಳು.

ಕೆಳಗಿನವುಗಳಲ್ಲಿ ಕ್ರಿಯಾಪದಗಳ ಹಿಂದುಗಡೆಯಲ್ಲಿ ತಕ್ಕದಾದ ನಾಮ ಪದವನ್ನಾಗಲಿ ಸರ್ವನಾಮವನ್ನಾಗಲಿ ಸೇರಿಸಿರಿ:—

1. .....ಬೀಸುತ್ತದೆ. 2. .....ಈಜುತ್ತದೆ. 3. ಮರದ ಮೇಲೆ .....ಹಾಡುತ್ತದೆ. 4. .....ಕುಣಿಯುತ್ತಾನೆ. 5. .....ಗರ್ಜಿಸುತ್ತವೆ. 6. ಕೊಟ್ಟಲಲ್ಲಿ.....ಮಲಗಿದೆ. 7. ಬೆಂಕಿಯ ಮೇಲಿಟ್ಟರೆ.....ಬೇಯುತ್ತದೆ. 8. ಆಕೆಯ ತರಗತಿಯಲ್ಲಿ.....ಮೊದಲಿನವಳು. 9. ಯಾವುದೊಂದು ಕಾರ್ಯವನ್ನು ಮಾಡುವ ಮುಂಚೆ.....ಚೆನ್ನಾಗಿ ಆಲೋಚನೆ ಮಾಡಬೇಕು. 10. ತಂದೆ ಸಾಯುವಾಗ.....ಚಿಕ್ಕವನಾಗಿದ್ದನು. 11. ನಮ್ಮನ್ನು.....ಕಾಪಾಡುತ್ತಾನೆ.

ಸೂರ್ಯನು ಉದಯಿಸುತ್ತಾನೆ— ಈ ವಾಕ್ಯದಲ್ಲಿ ನಾವು ಸೂರ್ಯನನ್ನು ಕುರಿತು ಅವನು ಉದಯಿಸುತ್ತಾನೆ ಎಂದು ಹೇಳಿದೆವು. ರಾಮನು ಮನೆಗೆ ಹೋದನು. ಈ ವಾಕ್ಯದಲ್ಲಿ ಯಾರ ಸಂಗತಿಯನ್ನು ಕುರಿತು ಹೇಳುತ್ತೇವೆ? ಯಾರು ಹೋದರೋ ಅವರ ವಿಷಯವಾಗಿ ಹೇಳುತ್ತೇವೆ. ನಾವು ಯಾವ ವಸ್ತುವನ್ನು ಅಥವಾ ಮನುಷ್ಯನನ್ನು ಕುರಿತು ಹೇಳುತ್ತೇವೋ ಆ ಪದಕ್ಕೆ ಆಖ್ಯೆ ಎಂದು ಹೆಸರು. ಮೇಲಿನ ವಾಕ್ಯಗಳಲ್ಲಿ ಸೂರ್ಯನು, ರಾಮ ಎಂಬಿವು ಆಖ್ಯೇಯಪದಗಳು. ಆಖ್ಯೇಯಪದಕ್ಕೆ ಕರ್ತೃವೆಂದೂ ಹೆಸರುಂಟು.

ವಾಕ್ಯದಲ್ಲಿ ನಾವು ಯಾರನ್ನು ಅಥವಾ ಯಾವುದನ್ನು ಕುರಿತು ಹೇಳುತ್ತೇವೋ ಆ ಪದಕ್ಕೆ ಆಖ್ಯೆಯೆಂದು ಹೆಸರು. ಕೆಳಗಿನ ವಾಕ್ಯಗಳಲ್ಲಿ ದಪ್ಪವಾದ ಅಕ್ಷರದಿಂದ ಬರೆದುವುಗಳು ಆಖ್ಯೇಯಪದಗಳಾಗಿವೆ.

1. ಈ ಸೀಮೆಯಲ್ಲಿ ಜೂಲುನಾಯಿ ಸಿಕ್ಕುವುದಿಲ್ಲ. 2. ಬೆಕ್ಕಿಗೆ ಮೃದುವಾದ ಚರ್ಮವು ಇದೆ. 3. ರಾಮನ ವನವಾಸವು ರಾಕ್ಷಸರನ್ನು ಕೆಡಿಸಿತು. 4. ಯಾರು ಹೇಳಿದರೂ ನಾನು ಕೇಳಲೊಲ್ಲೆನು.

ಕೆಲವು ವಾಕ್ಯಗಳಲ್ಲಿ ಆಖ್ಯೇಯಪದವನ್ನು ಸುಲಭವಾಗಿ ತಿಳಿದುಕೊಳ್ಳಬಹುದಾದ್ದರಿಂದ ಅದನ್ನು ಸೇರಿಸುವುದಿಲ್ಲ. ಬಂದೆನು ಎಂಬ ವಾಕ್ಯದಲ್ಲಿ ನಾನು ಎಂಬ ಆಖ್ಯೆಯನ್ನು ಹೇಳದಿದ್ದರೂ, ನಾವು ವಾಕ್ಯದ ಅರ್ಥದಿಂದ ಅದನ್ನು ತಿಳಿದುಕೊಳ್ಳಬಹುದು. ಹೀಗೆ ಅರ್ಥದಿಂದ ಸುಲಭವಾಗಿ ತಿಳಿಯಬಹುದಾದ ಪದಗಳನ್ನು ವಾಕ್ಯಗಳಲ್ಲಿ ಬಿಟ್ಟುಬಿಟ್ಟರೆ, ಅವುಗಳು ಅಧ್ಯಾಹಾರವಾಗಿವೆ

ಎಂದು ಹೇಳುತ್ತೇವೆ. ಯಾವ ಕೆಲಸವನ್ನೂ ಅವಸರದಲ್ಲಿ ಮಾಡಬೇಡ. ಯಾವಾಗಲೂ ದೇವರನ್ನು ಪ್ರಾರ್ಥಿಸು. ಈ ವಾಕ್ಯಗಳಲ್ಲಿ ನೀನು ಎಂಬ ಆಖ್ಯೇಯಪದವನ್ನು ಹೇಳದಿದ್ದರೂ, ಅದನ್ನು ಸುಲಭವಾಗಿ ತಿಳಿಯಬಹುದಾದ್ದರಿಂದ ಅದು ಅಧ್ಯಾಹಾರವಾಗಿದೆ. ಹಾಗೆಯೇ ಉಣ್ಣಿಯಿಂದ ಕಂಬಳಿಗಳನ್ನು ಮಾಡುತ್ತಾರೆ; ಮೈಯಲ್ಲಿ ಯಾವಾಗಲೂ ಸ್ವಚ್ಛವಾಗಿರಬೇಕು; ದುರ್ಮಾರ್ಗದಲ್ಲಿ ನಡೆಯಬೇಡ — ಈ ಮೊದಲಾದ ವಾಕ್ಯಗಳಲ್ಲಿ ಆಖ್ಯೇಯಪದಗಳು ಅಧ್ಯಾಹಾರವಾಗಿವೆ.

ವರ್ಣಿಸಲ್ಪಡುವ ವಸ್ತುವನ್ನು ಅಥವಾ ಸಂಗತಿಯನ್ನು ಕುರಿತು ಆಖ್ಯೇಯಪದವು ಹೇಳುತ್ತದೆ. ಆದುದರಿಂದಲೇ ವಾಕ್ಯದಲ್ಲಿ ಆಖ್ಯೆಯು ಯಾವಾಗಲೂ ನಾಮಪದವಾಗಿ ಅಥವಾ ಸರ್ವನಾಮವಾಗಿ ಇರುತ್ತದೆ.

1. ನಾವು ಮಾತುಮಾತಿಗೆ ಆಣೆ ಇಡುವುದು ಒಳ್ಳೆಯದಲ್ಲ. 2. ಹುಡುಗರು ಪ್ರಾತಃಕಾಲದಲ್ಲಿ ದೇವರ ಧ್ಯಾನ ಮಾಡುವುದು ಧರ್ಮವಾಗಿದೆ. 3. ಜನರು ಕಶ್ಮಲವಾದ ವಾಯುವನ್ನು ಸೇದುವುದು ಅಪಾಯಕರವು.

ಈ ವಾಕ್ಯಗಳಲ್ಲಿ ಆಖ್ಯೆಯು ಯಾವುದು? ಮೊದಲನೆಯ ವಾಕ್ಯದಲ್ಲಿ, ಯಾವುದು ಒಳ್ಳೆಯದಲ್ಲ? ಎಂಬ ಪ್ರಶ್ನೆಗೆ ನಾವು ಮಾತುಮಾತಿಗೆ ಆಣೆ ಇಡುವುದು — ಈ ಎಲ್ಲಾ ಪದಗಳು ಒಟ್ಟಾಗಿ ಉತ್ತರವಾಗುವುವು. ಇಲ್ಲಿ ನಾವು, ಮಾತು, ಮಾತಿಗೆ, ಆಣೆ, ಇಡುವುದು ಎಂಬ ಒಂದೊಂದೇ ಪದವು ಆಖ್ಯೆಯಲ್ಲ; ಏಕೆಂದರೆ ಯಾವುದು ಒಳ್ಳೆಯದಲ್ಲ? ಎಂಬ ಪ್ರಶ್ನೆಗೆ ನಾವು ಮಾತುಮಾತಿಗೆ ಆಣೆ ಇಡುವುದು ಎಂಬ ಎಲ್ಲಾ ಪದಗಳು ಉತ್ತರವಾಗಿ ಬರುತ್ತವಲ್ಲದೆ ಒಂದೊಂದೇ ಪದವು ಉತ್ತರವಾಗಿ ಬರುವುದಿಲ್ಲ. ಆದುದರಿಂದ ನಾವು ಮಾತುಮಾತಿಗೆ ಆಣೆ ಇಡುವುದು ಎಂಬ ಪದಗಳು ಒಟ್ಟಾಗಿ ಆಖ್ಯೆಯೆಂದೆನ್ನಿಸುತ್ತವೆ. ಹಾಗೆಯೇ ಎರಡನೆಯ ವಾಕ್ಯದಲ್ಲಿ ಹುಡುಗರು ಪ್ರಾತಃಕಾಲದಲ್ಲಿ ದೇವರ ಧ್ಯಾನ ಮಾಡುವುದು ಎಂಬ ಪದಗಳು ಒಟ್ಟಿಗೆ ಆಖ್ಯೆಯಾಗಿ ನಿಲ್ಲುತ್ತವೆ. ಮೂರನೆಯ ವಾಕ್ಯದಲ್ಲಿ, ಅಪಾಯಕರವು ಯಾವುದೆಂಬುದಕ್ಕೆ ಉತ್ತರವಾಗಿ ಜನರು ಕಶ್ಮಲವಾದ ವಾಯುವನ್ನು ಸೇದುವುದು ಎಂಬ ಪದಗಳು ಒಟ್ಟಾಗಿ ಬರುವುದರಿಂದ, ಅವೆಲ್ಲವು ಒಂದಾಗಿ ಕೂಡಿ ಆಖ್ಯೆಯಾಗುತ್ತವೆ.

ವಾಕ್ಯದಲ್ಲಿನ ಮೊದಲನೆಯ ಪದವು ಆಖ್ಯೆಯೆಂದು ಊಹಿಸುವುದು ತಪ್ಪಾಗಿದೆ. ಕಚ್ಚುವ ನಾಯಿ ಬಗುಳುವುದಿಲ್ಲ — ಎಂಬ ವಾಕ್ಯದಲ್ಲಿ ಮೊದಲ

ISRT

ನೆಯ ಪದವು ಕಚ್ಚುವ ಎಂಬ ಕ್ರಿಯಾಪದವು; ಕ್ರಿಯಾಪದವು ಅಖ್ಯೆಯಾಗಿ ನಿಲ್ಲುವುದಿಲ್ಲವೆಂದು ನಿನಗೆ ಮೊದಲೇ ಗೊತ್ತಾಗಿದೆ; ಈ ವಾಕ್ಯದಲ್ಲಿ ನಾಯಿ ಎಂಬ ಪದವು ಅಖ್ಯೆಯಲ್ಲದೆ ಕಚ್ಚುವ ಎಂಬ ಪದವು ಅಖ್ಯೆಯಲ್ಲ. ಹಾಗಾದರೆ ವಾಕ್ಯದಲ್ಲಿರುವ ಅಖ್ಯೆಯನ್ನು ಹೇಗೆ ಕಂಡುಹಿಡಿಯಬಹುದು? ವಾಕ್ಯದಲ್ಲಿರುವ ಕ್ರಿಯಾಪದಕ್ಕೆ ಯಾರು, ಏನು, ಯಾವುದು ಎಂಬೀ ಪ್ರಶ್ನೆಗಳನ್ನಿಟ್ಟರೆ, ಉತ್ತರವಾಗಿ ಬರುವ ಪದವೇ ಅಖ್ಯೇಯಪದವೆಂದು ಕಂಡುಹಿಡಿಯಬಹುದು.

15. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ಅಖ್ಯೇಯಪದಗಳನ್ನು ಹೆಕ್ಕಿ ತೆಗೆದು ಅವು ನಾಮಪದಗಳೋ ಸರ್ವನಾಮಗಳೋ ಎಂದು ಹೇಳಿರಿ; ಅಖ್ಯೇಯಪದಗಳು ಅಧ್ಯಾಹಾರವಾಗಿದ್ದರೆ, ಅಧ್ಯಾಹಾರವಾದ ಪದಗಳನ್ನು ಹೇಳಿಕೊಡಿರಿ:—

1. ಎತ್ತಿನ ಹಾಗೆಯೇ ಒಂಟಿಯು ಮೆಲುಕು ಹಾಕುತ್ತದೆ. 2. ಬತ್ತಿ ನೂಕಲಾರದ ಬಂಟ ದಳ ನಡಿಸ್ಯಾನೇ? 3. ಹುಟ್ಟಿಸಿದ ದೇವರು ಹುಲ್ಲು ಕೊಡಲಾರನೇ? 4. ಹಾವುಗಳಲ್ಲೆಲ್ಲಾ ನಾಗರಹಾವೇ ಬಹು ಕ್ರೂರವಾದುದು. 5. ಬೆಕ್ಕಿಲ್ಲದ ಮನೆಯಲ್ಲಿ ಇಲಿ ಲಾಗಾ ಹೊಡಿಯಿತು. 6. ಚಿಕ್ಕ ಹುಡುಗರಿರಾ, ಯಾವಾಗಲೂ ನಿಜ ಹೇಳಿ. 7. ಈ ದೇಶದಲ್ಲಿ ಅನೇಕರು ಕುದುರೆಗಳನ್ನು ಚೆನ್ನಾಗಿ ಸಾಕುವುದಿಲ್ಲ. 8. ನಾವು ಸುಳ್ಳಾಡಿದರೆ, ನಮಗೆ ನಿಜವಾಗಿ ಕಷ್ಟ ಬಂದಾಗ ಯಾರೂ ಸಹಾಯ ಮಾಡುವುದಿಲ್ಲ. 9. ಹೊತ್ತು ತಪ್ಪಿ ಊಟ ಮಾಡುವುದು ಒಳ್ಳೆಯದಲ್ಲ. 10. ಯಾವುದೊಂದು ಕೆಲಸವನ್ನು ಅವಸರದಲ್ಲಿ ಮಾಡಬಾರದು. 11. ಮಾತುಮಾತಿಗೆ ತಂದೆಯು ಹೆಸರೆತ್ತುವುದು ಒಳ್ಳೆಯದಲ್ಲ. 12. ಗಾಳಿ ಇಲ್ಲದೆ ಎಲೆ ಅಲ್ಲಾಡದು. 13. ಓದಿ ಓದಿ ಮರುಳಾದ ಕೋಡುಭಟ್ಟ. 14. ಮಕ್ಕಳು ಹಟಮಾಡದಿರುವುದು ತಾಯಿತಂದೆಗಳಿಗೆ ಸಂತೋಷಕಾರಕವು. 15. ನನ್ನ ತಂದೆಗೆ ತಿಂಗಳಿಗೆ 50 ರೂಪಾಯಿ ಸಂಬಳವುಂಟು. 16. ಕುರುಡರೊಳಗೆ ಎಳನೇ ಶ್ರೇಷ್ಠ. 17. ಸೋರುವ ಮನೆಯನ್ನೂ ನಾರುವ ಸ್ಥಳವನ್ನೂ ಜನರು ಬಿಟ್ಟುಬಿಡಬೇಕು. 18. ತಾಯಿಗೆ ಮಕ್ಕಳಲ್ಲಿ ಪ್ರೀತಿಯಿದೆ. 19. ಇರುಳು ನಿದ್ದೆಗೆಡುವುದು ದೇಹಕ್ಕೆ ಹಿತಕರವಲ್ಲ. 20. ಮಕ್ಕಳು ತಾಯಿತಂದೆಗಳು ಹೇಳಿದಂತೆ ನಡಕೊಳ್ಳುವುದು ಲೇಸು. 21. ಮುದುಕನೂ ಮಗನೂ ಕತ್ತೆಯೂ ಹೋದುವು. 22. ಕೊಡಬೇಕೈ ಕವಿಯನು ಎಲ್ಲರ ನುಡಿಗೆ.

ISRT

ಪರೀಕ್ಷೆ.

ಅಖ್ಯೆಯೆಂದರೇನು? ಅಖ್ಯೆಯು ಎಂಥ ಪದವಾಗುತ್ತದೆ? ಅಧ್ಯಾಹಾರವಾಗುತ್ತದೆ ಎಂದರೇನು? ಆಖ್ಯೆಯಿಲ್ಲದೆ ವಾಕ್ಯವಾಗುತ್ತದೆಯೇ? ಸರ್ವನಾಮವನ್ನು ಅಖ್ಯೇಯಪದವನ್ನಾಗಿ ಇಟ್ಟು ಐದು ವಾಕ್ಯಗಳನ್ನು ಮಾಡು. ನಾಮಪದವನ್ನು ಅಖ್ಯೇಯಪದವನ್ನಾಗಿ ಇಟ್ಟು ಐದು ವಾಕ್ಯಗಳನ್ನು ಮಾಡು. ವಾಕ್ಯದಲ್ಲಿರುವ ಅಖ್ಯೇಯಪದವನ್ನು ಹೇಗೆ ಕಂಡುಹಿಡಿಯಬಹುದು?

10ನೆಯ ಪಾಠ.—ಆಖ್ಯಾತ. Predicate.

1. ಸೂರ್ಯನು ಉದಯಿಸುತ್ತಾನೆ. 2. ರಾಮನು ಮನೆಗೆ ಹೋದನು.

ಈ ಎರಡು ವಾಕ್ಯಗಳಲ್ಲಿ ಅಖ್ಯೇಯಪದವು ಯಾವುದೆಂದು ಹೇಳಬಲ್ಲೆಯಾ? ಮೊದಲನೆಯ ವಾಕ್ಯದಲ್ಲಿ ಸೂರ್ಯನನ್ನು ಕುರಿತು ಉದಯಿಸುತ್ತಾನೆ ಎಂದು ಹೇಳಿದೆ. ಎರಡನೆಯ ವಾಕ್ಯದಲ್ಲಿ ರಾಮನು ಎಂಬ ಅಖ್ಯೇಯಪದವನ್ನು ಕುರಿತು ಹೋಪನು ಎಂದು ಹೇಳಿದೆ. ಉದಯಿಸುತ್ತಾನೆ, ಹೋದನು ಎಂಬೀ ಪದಗಳು ಅಖ್ಯೆಯ ಕ್ರಿಯೆಯನ್ನು ಹೇಳುತ್ತವೆ.

1. ರಾಮನು ಒಳ್ಳೆಯವನು. 2. ರಾಮನು ದಶರಥನ ಮಗನು.

ಈ ವಾಕ್ಯಗಳಲ್ಲಿ ಅಖ್ಯೆಯ ಪ್ರವೃತ್ತಿಯನ್ನು ಹೇಳುವ ಪದಗಳು ಅಧ್ಯಾಹಾರವಾಗಿವೆ. ರಾಮನು ಒಳ್ಳೆಯವನು ಆಗಿರುತ್ತಾನೆ ಎಂದು ಸಂಪೂರ್ಣವಾಗಿ ಬರೆದರೆ, ವಾಕ್ಯದಲ್ಲಿ ಅಡಗಿದ್ದ ಪದವು ತೋರಿಬರುತ್ತದೆ.

ಆಖ್ಯೆಯನ್ನು ಕುರಿತು ನಾವು ಯಾವುದನ್ನು ಹೇಳಬೇಕೋ ಅದನ್ನು ಹೇಳದಿದ್ದರೆ, ವಾಕ್ಯದ ಅರ್ಥವು ಸಂಪೂರ್ಣವಾಗುವುದಿಲ್ಲ. ಎತ್ತುಗಳು ಗದ್ದೆಗಳನ್ನು ಎಂದು ಹೇಳಿ ಅಲ್ಲೇ ನಿಲ್ಲಿಸಿಬಿಟ್ಟರೆ, ಎತ್ತುಗಳ ವಿಷಯವಾಗಿ ಹೇಳಬೇಕಾದ್ದನ್ನೆಲ್ಲಾ ಹೇಳಲಿಲ್ಲವೆಂಬ ಹಾಗೆ ತೋರುತ್ತದೆ. ಉಳುತ್ತವೆ ಎಂದು ಸೇರಿಸಿದರೆ, ವಾಕ್ಯದ ಅರ್ಥವು ಸಂಪೂರ್ಣವಾಗುತ್ತದೆ. (1ನೆಯ ಪಟದಲ್ಲಿನ ಪ್ರಶ್ನೆಗಳನ್ನು ಉತ್ತರಿಸು.)

ವಾಕ್ಯದ ಅರ್ಥವು ಪೂರ್ಣವಾಗುವಂತೆ ಆಖ್ಯೆಯನ್ನು ಕುರಿತು ನಾವು ಏನು ಹೇಳುತ್ತೇವೋ ಆ ಪದಕ್ಕೆ ಆಖ್ಯಾತವೆಂದು ಹೆಸರು. ಮೇಲಿನ ವಾಕ್ಯಗಳಲ್ಲಿ ಉದಯಿಸುತ್ತಾನೆ, ಹೋದನು ಎಂಬೀ ಪದಗಳು ಆಖ್ಯಾತಗಳು.

ISRT

ಆಖ್ಯಾತಪದವು ಆಖ್ಯೆಯ ಪ್ರವೃತ್ತಿಯನ್ನು ಹೇಳುವುದರಿಂದ ಯಾವಾಗಲೂ ಕ್ರಿಯಾಪದವಾಗಿಯೇ ಇರುತ್ತದೆ. ಕನ್ನಡಿ ಹೊಳೆಯುತ್ತದೆ; ಮಕ್ಕಳು ಸಕ್ಕಿದ್ದನ್ನು ತಿನ್ನಬಾರದು; ಬೆಳ್ಳುಳ್ಳಿಯು ನಾರುವುದು ಮೊದಲಾದ ವಾಕ್ಯಗಳಲ್ಲಿ ಆಖ್ಯಾತಗಳಾದ ಹೊಳೆಯುತ್ತದೆ, ತಿನ್ನಬಾರದು, ನಾರುವುದು ಎಂಬೀ ಪದಗಳು ಕ್ರಿಯಾಪದಗಳಾಗಿರುವುದನ್ನು ನೋಡು!

ಆಖ್ಯಾತಪದವು ಸಾಧಾರಣವಾಗಿ ವಾಕ್ಯದ ಕೊನೆಯಲ್ಲಿಯೇ ನಿಲ್ಲುತ್ತದೆ. ನೀರು ಯಾವಾಗಲೂ ಎತ್ತರದಿಂದ ಕೆಳಕ್ಕೆ ಹರಿಯುವುದು; ವಿದ್ಯೆಯಿಂದ ಜ್ಞಾನವೂ, ಜ್ಞಾನದಿಂದ ಮಾನವೂ ದೊರೆಯುತ್ತದೆ; ತಂದೆ ಹೇಳಿದ ಕೆಲಸವನ್ನು ಹುಡುಗನು ಮಾಡಿದನು. ಈ ವಾಕ್ಯಗಳಲ್ಲಿ ಆಖ್ಯಾತಗಳಾದ ಹರಿಯುವುದು, ದೊರೆಯುತ್ತದೆ, ಮಾಡಿದನು ಎಂಬೀ ಪದಗಳು ವಾಕ್ಯಗಳ ಅಂತ್ಯದಲ್ಲಿ ಬಂದಿರುವುದನ್ನು ನೋಡು!

ವಾಕ್ಯದಲ್ಲಿ ಆಖ್ಯಾತವನ್ನು ಅಧ್ಯಾಹಾರ ಮಾಡಬಹುದೆಂದು ಈಗ ಹೇಳಿದೆವು. ಕುದುರೆಯು ಉಪಯೋಗವಾದ ಪ್ರಾಣಿ; ಆರೋಗ್ಯವೇ ಭಾಗ್ಯವು; ಇರುವೆಗೆ ಜೀನುತುಪ್ಪದ ಮೇಲೆ ಆಸೆ; ಕಳವು ಮಾಡುವುದು ಪಾಪವು— ಈ ವಾಕ್ಯಗಳಲ್ಲಿ ಕ್ರಿಯಾಪದವು ಅಧ್ಯಾಹಾರವಾಗಿದೆ. ಅಧ್ಯಾಹಾರವಾಗಿದ್ದ ಪದಗಳನ್ನು ಸೇರಿಸಿ ಆ ವಾಕ್ಯಗಳನ್ನು ಬರೆಯೋಣ! ಕುದುರೆಯು ಉಪಯೋಗವಾದ ಪ್ರಾಣಿ ಆಗಿರುತ್ತದೆ; ಆರೋಗ್ಯವೇ ಭಾಗ್ಯವು ಆಗಿರುತ್ತದೆ. ಇರುವೆಗೆ ಜೀನುತುಪ್ಪದ ಮೇಲೆ ಆಸೆ ಇರುತ್ತದೆ; ಕಳವು ಮಾಡುವುದು ಪಾಪವು ಆಗಿರುತ್ತದೆ.

16. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ಆಖ್ಯಾತಪದಗಳನ್ನು ತೋರಿಸಿರಿ:—

1. ಹಸುಗಳಿಗೆ ಮೇವನ್ನು ಹಾಕಿದರೆ, ಅವು ಪುಷ್ಕಲವಾಗಿ ಹಾಲು ಕರೆಯುತ್ತವೆ. 2. ಕಾಲಿದಾಸನು ಶಾಕುಂತಲಾನಾಟಕವನ್ನು ಬರೆದನು. 3. ತುಂಟನಾದವನು ಕಡು ಮೂರ್ಖನು. 4. ಹಾವುಗಳಿಗೆ ಎರಡು ಪೊಳ್ಳು ಹಲ್ಲುಗಳಿವೆ. 5. ಅಂಕೆಯಿಲ್ಲದ ಈಪಿ ಲಂಕೆ ಸುಟ್ಟಿತು. 6. ಉಂಡ ಮನೆಗೆರಡನ್ನು ಬಗೆವಾತನೇ ಹೊಲೆಯು. 7. ಕುರಿಯ ಮೈಮೇಲಿನ ರೋಮವೇ ಉಣ್ಣೆ. 8. ದುಷ್ಟ ವ್ಯಾಘ್ರನ ಕೈಲಿ ಮುಟ್ಟಿ ಹಿಡಿತರಬಹುದು. 9. ತೆಂಗಿನ ನಾರು ಬಲು ಗಟ್ಟಿ. 10. ಎಣ್ಣೆಯನ್ನು ತೆಗೆದ ಬಳಿಕ ನಿಂತ ಕೊಬರಿಯೇ ಹಿಂಡಿ. 11. ಈ ಲೋಕದಲ್ಲಿ ದೇವರೇ ನಮಗೆ ಸಹಾಯಕನು. 12. ರಾಜನು ಬರುವ ಮೊದಲೇ ತೋರಣಗಳು ಕಟ್ಟಲ್ಪಟ್ಟುವು. 13. ನಿಮ್ಮನ್ನು ಬೆಳಗ್ಗೆ ಎಚ್ಚರಿಸುವ ನಾನು ಯಾರು? 14. ಬಧಿರ ಕೇಳುವನೆ ಸಂಗೀತವನು ಪಾಡಿದರೆ? 15. ನಿಮ್ಮ ಕಾಲಿಗೆ ಯಾವಾಗ ರಜೆ?

ISRT

ಪರೀಕ್ಷೆ.

ಆಖ್ಯಾತವೆಂದರೇನು? ಆಖ್ಯಾತವು ಯಾವ ಪದವಾಗಿರುವುದು? ವಾಕ್ಯದ ಅರ್ಥವು ಸಂಪೂರ್ಣವಾಗುವಂತೆ ಯಾವ ಪದವಿರಬೇಕು? ಅಬ್ಯೆಗೂ ಆಖ್ಯಾತಕ್ಕೂ ಭೇದವೇನು? ಆಖ್ಯಾತವು ಸಾಧಾರಣವಾಗಿ ವಾಕ್ಯದ ಯಾವ ಸ್ಥಳದಲ್ಲಿ ಬರುತ್ತದೆ? ಆಖ್ಯಾತವು ಅಧ್ಯಾಹಾರವಾಗುವುದಕ್ಕೆ ನಾಲ್ಕು ಉದಾಹರಣೆಗಳನ್ನೆ ಕೊಡು.

11ನೆಯ ಪಾಠ.—ಕರ್ಮಪದ. Object.

ರಾಮನು ಕಟ್ಟಿಗೆಯನ್ನು ಕಡಿಯುತ್ತಾನೆ. ಈ ವಾಕ್ಯದಲ್ಲಿ ರಾಮನು ಎಂಬ ನಾಮಪದವು ಅಖ್ಯೆ, ಕಡಿಯುತ್ತಾನೆ ಎಂಬ ಕ್ರಿಯಾಪದವು ಆಖ್ಯಾತವಾಗಿರುವುದು. ರಾಮನು ಕಡಿಯುತ್ತಾನೆ ಎಂದು ಇಷ್ಟೇ ಹೇಳಿಬಿಟ್ಟರೆ, ಕ್ರಿಯಾಪದದ ವಿಷಯವಾಗಿ ಯಾವುದನ್ನೋ ಇನ್ನೂ ಹೇಳಲು ಉಳಿದಿರುವಂತೆ ತೋರುತ್ತಿದೆ. ರಾಮನು ಏನನ್ನು ಕಡಿಯುತ್ತಾನೆ? ರಾಮನು ಯಾವುದನ್ನು ಕಡಿಯುತ್ತಾನೆ? ಎಂಬೀ ಪ್ರಶ್ನೆಗಳಿಗೆ ಉತ್ತರವು ಸರಿಯಾಗಿ ಬರುವುದಿಲ್ಲ. ಕೃಷ್ಣನು ಬರೆಯುತ್ತಾನೆ ಎಂದು ಹೇಳಿದರೆ, ಏನನ್ನು ಬರೆಯುತ್ತಾನೆಂದು ತಿಳಿಸುವ ಆವಶ್ಯಕತೆಯು ಇರುವುದು. ರಾಮನು ಹೋಗುತ್ತಾನೆ ಎಂಬ ವಾಕ್ಯದಲ್ಲಿ ಈ ಆವಶ್ಯಕತೆಯು ತೋರುವುದಿಲ್ಲ.

ಓದು, ಬರೆ, ಹೊಡೆ, ಮಾಡು, ಹೇಳು ಮೊದಲಾದ ಕ್ರಿಯಾಪದಗಳನ್ನು ಪ್ರಯೋಗಿಸುವಾಗ ಅವುಗಳ ಅರ್ಥವು ಇನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬೇರೆ ಪದಗಳನ್ನು ವಾಕ್ಯದಲ್ಲಿ ಇಡುವ ಆವಶ್ಯಕತೆಯುಂಟು. ರಾಮನು ಪುಸ್ತಕವನ್ನು ಓದುತ್ತಾನೆ; ಹುಡುಗನು ಕಾಗದವನ್ನು ಬರೆದನು; ಗಾಡಿಯಾಳು ಕುದುರೆಯನ್ನು ಹೊಡೆದನು; ಉಣ್ಣಿಯಿಂದ ಕಂಬಳಿಗಳನ್ನು ಮಾಡುವರು; ಕೃಷ್ಣನು ಕಥೆಯನ್ನು ಹೇಳಿದನು.

ನಿಲ್ಲು, ಹೋಗು, ಬರು, ಈಜು, ಏಳು ಮೊದಲಾದ ಕ್ರಿಯಾಪದಗಳನ್ನು ಪ್ರಯೋಗಿಸುವಾಗ ಇಂಥ ಆವಶ್ಯಕತೆಯು ಬೀಳುವುದಿಲ್ಲ. ಬಂಡಿಯು ನಿಂತಿತು; ಜನರು ಹೋಗುತ್ತಾರೆ; ನೀನು ಬರುತ್ತೀಯೇ; ಮಾನುಗಳು ಈಜುತ್ತವೆ; ಹುಡುಗರು ಏಳುತ್ತಾರೆ. ಈ ವಾಕ್ಯಗಳಲ್ಲಿ ಬೇರೆ ಪದವನ್ನು ಇಡದಿದ್ದರೂ, ಕ್ರಿಯಾಪದದ ಅರ್ಥವು ಸಂಪೂರ್ಣವಾಗಿದೆ.

ISRT

ರಾಮನು ಕಟ್ಟಿಗೆಯನ್ನು ಕಡಿಯುತ್ತಾನೆ. ಈ ವಾಕ್ಯದಲ್ಲಿ ಕಡಿ ಎಂಬ ಕ್ರಿಯಾಪದದ ವಿಷಯವಾಗಿ ಇನ್ನೂ ಸರಿಯಾಗಿ ತಿಳಿಯುವಂತೆ, ಕಟ್ಟಿಗೆಯನ್ನು ಎಂಬ ಪದವನ್ನು ಇಡುವ ಆವಶ್ಯಕತೆಯುಂಟು. ಕಡಿಯೋಣವೆಂಬುದು ಕ್ರಿಯೆಯು; ಈ ಕ್ರಿಯೆಯ ಫಲವು ಯಾವುದೆಂದರೆ ಪೆಟ್ಟು ತಿನ್ನೋಣ, ತುಂಡಾಗೋಣ; ಈ ಫಲವನ್ನು ಕಟ್ಟಿಗೆಯು ಹೊಂದುವುದು. ಉಪಾಧ್ಯಾಯನು ಹುಡುಗನನ್ನು ಹೊಡೆದನು. ಈ ವಾಕ್ಯದಲ್ಲಿ ಹೊಡೆ ಎಂಬ ಕ್ರಿಯಾಪದದ ಫಲವನ್ನು ಹುಡುಗನು ಹೊಂದಿದನು. ಕ್ರಿಯೆಯ ಫಲವನ್ನು ಅನುಭವಿಸುವ ಪದಕ್ಕೆ ಕರ್ಮಪದವೆಂದು ಹೆಸರು. ರಾಮನು ಕಟ್ಟಿಗೆಯನ್ನು ಕಡಿಯುತ್ತಾನೆ; ಉಪಾಧ್ಯಾಯನು ಹುಡುಗನನ್ನು ಹೊಡೆದನು ಎಂಬೀ ವಾಕ್ಯಗಳಲ್ಲಿ ಕಟ್ಟಿಗೆಯನ್ನು, ಹುಡುಗನನ್ನು ಎಂಬೀ ಪದಗಳು ಕರ್ಮಪದಗಳು.*

ಕ್ರಿಯೆಗೆ ವಿಷಯವಾದದ್ದು ಎಂದರೆ ಕ್ರಿಯೆಯ ಫಲವನ್ನು ಅನುಭವಿಸುವ ಪದಕ್ಕೆ ಕರ್ಮಪದವೆಂದು ಹೆಸರು. ನಾಮಪದಗಳು ಅಥವಾ ಸರ್ವನಾಮಗಳು ವಾಕ್ಯದಲ್ಲಿ ಕರ್ಮಪದಗಳಾಗಿ ಬರುತ್ತವೆ. ವಾಕ್ಯದಲ್ಲಿರುವ ಕ್ರಿಯಾಪದಗಳಿಗೆ ಯಾರನ್ನು, ಏನನ್ನು ಎಂಬೀ ಪ್ರಶ್ನೆಗಳನ್ನಿಟ್ಟರೆ, ಉತ್ತರವಾಗಿ ಕರ್ಮಪದಗಳು ಬರುತ್ತವೆ. ರಾಮನು ಏನನ್ನು ಕಡಿಯುತ್ತಾನೆ? ಕಟ್ಟಿಗೆಯನ್ನು. ಉಪಾಧ್ಯಾಯನು ಯಾರನ್ನು ಹೊಡೆದನು? ಹುಡುಗನನ್ನು.

17. ಪ್ರಶ್ನೆಗಳು.

ಕೆಳಗೆ ಎಡೆ ಬಿಟ್ಟಲ್ಲಿ ತಕ್ಕದಾದ ಶಬ್ದಗಳನ್ನು ಕರ್ಮಪದಗಳನ್ನಾಗಿ ಸೇರಿಸಿರಿ:—

1. ದೇವರು.....ಕಾಪಾಡುತ್ತಾನೆ. 2. ಎತ್ತುಗಳು.....ಎಳೆಯುತ್ತವೆ. 3. ಕುರಿಯು.....ಕೊಡುತ್ತದೆ. 4. ಹಕ್ಕಿಯು ಗೂಡಿನಲ್ಲಿ.....ಇಡುತ್ತದೆ. 5. ಕಾಗೆಯು ಪನಗಳನ್ನು ಪೀಡಿಸುವ.....ಕುಕ್ಕಿ ತೆಗೆದು ತಿನ್ನುತ್ತದೆ. 6. ದರ್ಜಿಯು ಯಂತ್ರದಿಂದ.....ಹೊಲಿಯುತ್ತಾನೆ. 7. ನಾವು.....ಎಂದೆಂದಿಗೂ ನಂಬಬಾರದು. 8. ರಾಜರು.....ರಕ್ಷಿಸುತ್ತಾರೆ. 9. ತೋಟಗಾರರು ತೋಟದಲ್ಲಿ.....ಬೆಳಿಸುತ್ತಾರೆ. 10. ಆಪತ್ಕಾಲದಲ್ಲಿ ನಮಗೆ.....ಮಾಡುವವನೇ ಸ್ನೇಹಿತನು.

---

* 'ನುಡಿಗಟ್ಟು' ಎಂಬ ವ್ಯಾಕರಣಪುಸ್ತಕವನ್ನು ಆವಲಂಬಿಸಿ ಬರೆದಿದೆ.

ISRT

Transitive ಯಾವ ಕ್ರಿಯಾಪದಗಳಿಗೆ ಕರ್ಮಪದವು ಆವಶ್ಯಕವಿರುವುದೋ ಆ ಕ್ರಿಯಾಪದಗಳೇ ಸಕರ್ಮಕಗಳು. ಕಲಿ, ಓದು, ಬರೆ ಎಂಬ ಕ್ರಿಯಾಪದಗಳಿಗೆ ಕರ್ಮಪದವು ಆವಶ್ಯಕವಾದ್ದರಿಂದ ಅವುಗಳಿಗೆ ಸಕರ್ಮಕಗಳೆಂದು ಹೆಸರು. ಮೇಲೆ ಕೊಟ್ಟ ಪ್ರಶ್ನೆಗಳಲ್ಲಿ ತೋರುವ ಕ್ರಿಯಾಪದಗಳೆಲ್ಲಾ ಸಕರ್ಮಕ ಕ್ರಿಯಾಪದಗಳು.

Intransitive ಯಾವ ಕ್ರಿಯಾಪದಗಳಿಗೆ ಕರ್ಮಪದವು ಅಗತ್ಯವಿಲ್ಲವೋ ಆ ಕ್ರಿಯಾಪದಗಳೇ ಅಕರ್ಮಕಗಳು. ಏಳು, ಹೋಗು, ನಿಲ್ಲು ಮೊದಲಾದ ಕ್ರಿಯಾಪದಗಳು ಅಕರ್ಮಕಕ್ರಿಯಾಪದಗಳು.

ಕ್ರಿಯಾಪದಗಳಿಗೆ ಯಾರನ್ನು, ಏನನ್ನು ಎಂಬ ಪ್ರಶ್ನೆಗಳನ್ನಿಟ್ಟರೆ, ಉತ್ತರವಾಗಿ ಕರ್ಮಪದಗಳು ಬರುತ್ತವೆಂದು ನಿನಗೆ ಗೊತ್ತಾಗಿದೆ. ಆದುದರಿಂದ ಕ್ರಿಯಾಪದಗಳು ಸಕರ್ಮಕಗಳೊ ಅಕರ್ಮಕಗಳೊ ಎಂದು ತಿಳಿಯುವ ಬಗೆ ಹೇಗೆ? ಕ್ರಿಯಾಪದಗಳಿಗೆ ಯಾರನ್ನು, ಏನನ್ನು ಎಂಬ ಪ್ರಶ್ನೆಗಳನ್ನು ಹಾಕಲು ಉತ್ತರವು ಬಂದರೆ ಅವುಗಳು ಸಕರ್ಮಕಗಳೆಂದೂ, ಉತ್ತರವು ಬಾರದಿದ್ದರೆ ಅಕರ್ಮಕಗಳೆಂದೂ ತಿಳಿಯಬೇಕು.

ಹುಡುಗರು ಪುಸ್ತಕಗಳನ್ನು ಓದುತ್ತಾರೆ, ನಾವು ಕಾಗದವನ್ನು ಬರೆಯುತ್ತೇವೆ – ಮುಂತಾದ ವಾಕ್ಯಗಳಲ್ಲಿರುವ ಓದು, ಬರೆ ಎಂಬ ಕ್ರಿಯಾಪದಗಳಿಗೆ ಏನನ್ನು ಓದುತ್ತಾರೆ? ಏನನ್ನು ಬರೆಯುತ್ತಾರೆ? ಎಂಬ ಪ್ರಶ್ನೆಗಳನ್ನಿಟ್ಟರೆ, ಪುಸ್ತಕಗಳನ್ನು ಓದುತ್ತಾರೆ, ಕಾಗದವನ್ನು ಬರೆಯುತ್ತಾರೆ ಎಂಬ ಉತ್ತರಗಳು ಹೊರಡುವುದರಿಂದ ಓದು, ಬರೆ ಎಂಬಿವು ಸಕರ್ಮಕಗಳು. ಕೆಲವು ಸಂದರ್ಭಗಳಲ್ಲಿ ಈ ಕರ್ಮಪದಗಳನ್ನು ಸೇರಿಸದೆ, ಹುಡುಗರು ಓದುತ್ತಾರೆ, ನಾವು ಬರೆಯುತ್ತೇವೆ ಎಂದು ವಾಕ್ಯಗಳನ್ನು ಹೇಳುವುದೂ ಉಂಟು. ಇಲ್ಲಿ ಕರ್ಮಪದಗಳು ಅಧ್ಯಾಹಾರವಾಗಿವೆ ಎಂದು ತಿಳಿಯಬೇಕು; ಕರ್ಮಪದಗಳು ಅಧ್ಯಾಹಾರವಾಗಿದ್ದರೂ, ಆ ಕ್ರಿಯಾಪದಗಳು ಸಕರ್ಮಕಗಳೆಂದೇ ತಿಳಿಯಬೇಕು.

ಕೆಲವು ವಾಕ್ಯಗಳಲ್ಲಿ ಕರ್ಮಪದವು ಒಂದೇ ಇರುವುದಿಲ್ಲ; ಹಲವು ಕರ್ಮಪದಗಳು ಒಂದೇ ಕ್ರಿಯಾಪದಕ್ಕೆ ಸೇರುತ್ತವೆ. ಬಿಕ್ಕು ಹಕ್ಕಿಗಳನ್ನೂ ಅಳಿಲುಗಳನ್ನೂ ಇಲಿಗಳನ್ನೂ ತಿನ್ನುತ್ತದೆ. ಇಲ್ಲಿ ತಿನುತ್ತದೆ ಎಂಬ ಕ್ರಿಯಾಪದಕ್ಕೆ ಹಕ್ಕಿಗಳನ್ನೂ, ಅಳಿಲುಗಳನ್ನೂ, ಇಲಿಗಳನ್ನೂ ಎಂಬೀ ಮೂರು ಪದಗಳು ಕರ್ಮಪದಗಳಾಗಿ ಬರುತ್ತವೆ.

ISRT

18. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ಕ್ರಿಯಾಪದಗಳು ಸಕರ್ಮಕಗಳೊ ಅಕರ್ಮಕಗಳೊ ಎಂದು ವಿಚಾರಿಸಿ ಹೇಳಿರಿ; ಸಕರ್ಮಕಗಳಾಗಿದ್ದರೆ, ಅವುಗಳಿಗೆ ಸೇರಿದ ಕರ್ಮಗಳನ್ನು ಕೊಡಿರಿ:—

1. ತಲೆಯ ಮೇಲೆ ನೀರನ್ನು ಸುರಿದರೆ, ಆ ನೀರು ಕಾಲಿಗೆ ಇಳಿಯುತ್ತದೆ. 2. ಒಂಟೆಯನ್ನು ಮರಳುಕಾಡಿನ ಹಡಗೆಂದು ಜನರು ಕರೆಯುತ್ತಾರೆ; ಮನುಷ್ಯರು ಅದರ ಮೇಲೆ ಕೂತುಕೊಳ್ಳುತ್ತಾರೆ. 3. ಉತ್ತರ ಹಿಂದುಸ್ಥಾನದಲ್ಲಿ ಜೋಳದ ಕಾಳನ್ನು ಪುಡಿಮಾಡಿ, ಹಿಟ್ಟನ್ನು ನೀರಲ್ಲಿ ಹಾಕಿ, ಗಂಜಿಯನ್ನು ಬೇಯಿಸಿ, ಅದನ್ನು ಕುಡಿಯುತ್ತಾರೆ. 4. ಕಪಿಗಳು ಮನುಷ್ಯರನ್ನು ಹೋಲುತ್ತವೆ; ಅವು ಮರಗಳನ್ನು ಹತ್ತಿ, ಹಣ್ಣುಗಳನ್ನು ತಿಂದು ಬದುಕುತ್ತವೆ. 5. ನಮ್ಮ ಉಡುಪುಗಳನ್ನು ಹತ್ತಿಯಿಂದ ನೇಯುದು ಇಂಗ್ಲಾಂಡಿನಿಂದ ಅವುಗಳನ್ನು ಇಲ್ಲಿಗೆ ಕಳುಹಿಸುತ್ತಾರೆ. 6. ಬೇಟಿಗಾರನನ್ನು ನೋಡುತ್ತಲೆ ಹುಲಿಯು ಅಡಗಿಕೊಳ್ಳುವುದು; ಬೇಟಿಗಾರನು ಅದು ತಪ್ಪಿಸಿಕೊಳ್ಳುವ ಮುಂಚೆಯೇ ಅದನ್ನು ತುವಾಕದಿಂದ ಸುಡುತ್ತಾನೆ. 7. "ಅಯ್ಯೋ, ನಾನು ನೀರಿನಲ್ಲಿ ಮುಳುಗಿದೆನು! ನನ್ನನ್ನು ಯಾರು ಕಾಯುವರು?" ಎಂದು ಹುಡುಗನು ಕೂಗಿದನು. 8. ಮೋಡಗಳು ಆಕಾಶವನ್ನು ಮುಚ್ಚಿದುವು; ಸುಡುಗು ಗರ್ಜಿಸಿತು; ಮಳೆಯು ಧಾರಾಳವಾಗಿ ಸುರಿಯಿತು; ಹುಡುಗನು ಹೆದರದೆ ನೆಟ್ಟನೆ ಮುಂದರಿಸಿದನು. 9. ಅಟ್ಟಿ ಬಹ ಮದಕರಿಯ ಕಟ್ಟಬಹುದು; ದುಷ್ಟಾತ್ಮರಾದವರ ಬಿಟ್ಟು ಕಳೆ ಮನವೇ. 10. ಕೆಲವಂ ಬಲ್ಲವರಿಂದ ಕಲ್ತು, ಕೆಲವಂ ಕಾಸ್ತ್ರಂಗಳಂ ಕೇಳುತಂ. 11. ಹುಡುಗರು ಬೈಲಿನಲ್ಲಿ ಆಡುವುದನ್ನು ನಾನು ಕಂಡೆನು.

ಪರೀಕ್ಷೆ.

ಕರ್ಮ ಎಂದರೇನು? ಯಾವ ಪದಗಳು ಕರ್ಮಗಳಾಗಿ ಬರುತ್ತವೆ? ಕರ್ಮವಿರುವ ಕ್ರಿಯಾಪದಗಳಿಗೆ ಹೆಸರೇನು? ಅಕರ್ಮಕಕ್ರಿಯಾಪದಗಳೆಂದರೇನು? ಕ್ರಿಯಾಪದಗಳಲ್ಲಿ ಎಷ್ಟು ವಿಧಗಳು? ಕರ್ಮಪದಗಳು ಯಾವ ಕ್ರಿಯಾಪದಗಳೊಡನೆ ಸೇರುತ್ತವೆ? ವಾಕ್ಯದಲ್ಲಿದ್ದ ಕರ್ಮಪದಗಳನ್ನು ಹೇಗೆ ಕಂಡುಹಿಡಿಯಬಹುದು? ಕರ್ಮಪದಗಳುಳ್ಳ ಐದು ವಾಕ್ಯಗಳನ್ನು ಮಾಡಿ. ಸಕರ್ಮಕಕ್ರಿಯೆಗಳಿಗೂ ಅಕರ್ಮಕಕ್ರಿಯೆಗಳಿಗೂ ಭೇದವೇನು? ಕ್ರಿಯಾಪದವು ಸಕರ್ಮಕವೋ ಅಕರ್ಮಕವೋ ಎಂದು ಹೇಗೆ ತಿಳಿಯಬಹುದು? ಸಕರ್ಮಕಕ್ರಿಯಾಪದಗಳಿಗೂ ಅಕರ್ಮಕಕ್ರಿಯಾಪದಗಳಿಗೂ ಐದೈದು ಉದಾಹರಣೆಗಳನ್ನು ಕೊಡಿರಿ.

ISRT

Proper nouns.

12ನೆಯ ಪಾಠ.—ಅಂಕಿತನಾಮಗಳು.

ಮನುಷ್ಯರ ಹೆಸರುಗಳೂ ಪ್ರಾಣಿಗಳ ಹೆಸರುಗಳೂ ಸ್ಥಳಗಳ ಹೆಸರುಗಳೂ ವಸ್ತುಗಳ ಹೆಸರುಗಳೂ ನಾಮಪದಗಳೆಂದು ನೀನು 2ನೆಯ ಪಾಠದಲ್ಲಿ ಓದಿದ್ದೀಯೇ. ನಾಮಪದಗಳಲ್ಲಿ ಅನೇಕ ವಿಧಗಳುಂಟು; ಈ ವಿಧಗಳನ್ನು ಕುರಿತು ನಾವು ವಿಚಾರಿಸೋಣ. ಕೆಳಗೆ ಬರೆದ ವಾಕ್ಯಗಳನ್ನು ಓದು:—

1. ಕೃಷ್ಣನು ಇಪ್ಪತ್ತು ವರ್ಷಗಳಿಂದ ಬಳೆಗಳನ್ನು ಮಾರುತ್ತಾನೆ. 2. ಪಾಠಕಾಲೆಗೆ ಹೋಗುವ ಬದಲಾಗಿ ರಂಗನು ಬಯಲಿಗೆ ಹೋದನು. 3. ನನ್ನ ತಂಗಿ ಲಕ್ಷ್ಮಮ್ಮ ಪಾಠಶಾಲೆಗೆ ಹೋಗುತ್ತಾಳೆ. 4. ಮಂಗಳೂರಿಂದ ಮದ್ರಾಸಿಗೆ ಹೋಗಲು ಕಬ್ಬಿಣದ ಪಟ್ಟಿಯ ಹಾದಿಯುಂಟು. 5. ಬಂಗಾಳಸಮುದ್ರಕ್ಕೆ ಅನೇಕ ನದಿಗಳು ಹರಿಯುತ್ತವೆ. 6. ನೇತ್ರಾವತಿ ಹೊಳೆಯು ಘಟ್ಟಗಳಿಂದ ಹರಿದುಬರುತ್ತದೆ. 7. ಲಂಕಾದ್ವೀಪಕ್ಕೆ ಸಿಲೋನ್ ಎಂದು ಹೆಸರುಂಟು. 8. ಪ್ರಭವ ಸಂವತ್ಸರವು ಹಿಂದೂ ಜನರ ವರ್ಷಗಳಲ್ಲಿ ಮೊದಲನೆಯದು. 9. ಆಷಾಢ ಮಾಸದಲ್ಲಿ ಮಳೆ ಹೆಚ್ಚಾಗಿ ಸುರಿಯುತ್ತದೆ. 10. ಆದಿತ್ಯವಾರ ನಾವು ಪಾಠಶಾಲೆಗೆ ಹೋಗುವುದಿಲ್ಲ. 11. ರಾಮಾಯಣವನ್ನು ವಾಲ್ಮೀಕಿಯು ಬರೆದನು. 12. ರೋಹಿಣಿ ನಕ್ಷತ್ರವು ಅಂದವಾಗಿ ಮಿನುಗುತ್ತದೆ.

ಮೇಲಿನ ವಾಕ್ಯಗಳಲ್ಲಿ ಕೆಲವು ಹೆಸರುಗಳು ದೊಡ್ಡವಾಗಿ ಬರೆಯಲ್ಪಟ್ಟಿವೆ. ಕೃಷ್ಣ, ರಂಗ—ಇವು ಯಾರ ಹೆಸರುಗಳು? ಇವು ಪುರುಷರ ಹೆಸರುಗಳು. ಲಕ್ಷ್ಮಮ್ಮ—ಇದು ಸ್ತ್ರೀಯ ಹೆಸರು. ಮಂಗಳೂರು, ಮದ್ರಾಸು—ಇವು ಪಟ್ಟಣಗಳ ಹೆಸರುಗಳು. ಹಾಗೆಯೇ ಹೊಳೆಗಳಿಗೂ ದ್ವೀಪಗಳಿಗೂ ವರ್ಷಗಳಿಗೂ ಬೇರೆ ಬೇರೆ ಹೆಸರುಗಳುಂಟು. ನೇತ್ರಾವತಿ, ಲಂಕೆ, ಸಿಲೋನ್, ಪ್ರಭವ—ಇವು ಸಹ ಹೆಸರುಗಳೇ. ಕೆಲವು ತಿಂಗಳುಗಳ ಹೆಸರುಗಳನ್ನು ಹೇಳುವೆಯಾ? ನಾನು ಹೇಳುವೆನು—ಜನವರಿ, ಜುಲಾಯಿ, ಸುಗ್ಗಿ, ಚೈತ್ರ. ಗಂಡಸರಿಗೂ ಹೆಂಗುಸರಿಗೂ ಪ್ರತ್ಯೇಕ ಹೆಸರುಗಳು ಇರುವಂತೆ ಭೂಖಂಡ, ದೇಶ, ಪಟ್ಟಣ, ಸಮುದ್ರ, ಸರೋವರ, ನದಿ, ದ್ವೀಪ, ಪರ್ವತ, ವರ್ಷ, ಮಾಸ, ದಿವಸ, ನಕ್ಷತ್ರ, ಪುಸ್ತಕ ಮೊದಲಾದುವುಗಳನ್ನು ಬೇರೆಯಾಗಿ ಕರೆಯುವುದಕ್ಕೆ ನಾವು ಹೆಸರುಗಳನ್ನು ಇಡುತ್ತೇವೆ.

ISRT

19. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ಪ್ರತ್ಯೇಕವಾದ ಹೆಸರುಗಳನ್ನು ಹೆಕ್ಕಿ ತೆಗೆಯಿರಿ:—

1. ಅರಬಿಸ್ಥಾನದಿಂದ ಖಿರ್ಜೂರವು ಹಿಂದುಸ್ಥಾನಕ್ಕೆ ಬರುತ್ತದೆ. 2. ಕೈದಿಗಳನ್ನು ಅಂದಮಾನ್ ಎಂಬಲ್ಲಿಗೆ ಕಳುಹಿಸುತ್ತಾರೆ. 3. ಒಂದು ಕಾಲದಲ್ಲಿ ನೂರ್ಜಿಹಾನ್ ರಾಣಿಯಿದ್ದಳು. 4. ಉಡುಪಿಯಲ್ಲಿ ಎಂಟು ಮಠಗಳಿವೆ. 5. ಎಡ್ವರ್ಡ್ ಮಹಾರಾಜರು ಇಂಗ್ಲೆಂಡಿನಲ್ಲಿ ಇರುತ್ತಾರೆ. 6. ಬಿಳಿಯ ಜನರು ಎಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಕುದುರೆ ಮುಖಕ್ಕೆ ಹೋಗುವುದುಂಟು. 7. ಕ್ರೈಸ್ತರು ಬೈಬಲನ್ನೂ, ಹಿಂದುಗಳು ವೇದವನ್ನೂ, ಮಹಮ್ಮದೀಯರು ಕುರಾನನ್ನೂ ಪರಿಶುದ್ಧ ಗ್ರಂಥಗಳೆಂದು ಭಾವಿಸುತ್ತಾರೆ. 8. ಎಣ್ಣೆ ಸಿಕ್ಕಿದ್ದೇ ಶನಿವಾರ, ಮನೆಯಲ್ಲಿ ನಿಂತದ್ದೇ ಆದಿತ್ಯವಾರ. 9. ನಾವಿಕರು ಧ್ರುವನಕ್ಷತ್ರದ ಸಹಾಯದಿಂದ ಕಡಲಿನಲ್ಲಿ ಹಾದಿಯನ್ನು ತಿಳಿಯುತ್ತಾರೆ. 10. ಹುಮಾಯುನನ ಮಗನಾದ ಅಕ್ಬರು ದಿಲ್ಲಿಯಲ್ಲಿ ರಾಜ್ಯಭಾರ ಮಾಡಿದನು. 11. ಕಾವೇರಿನದಿಯು ಕೊಡಗಿನಲ್ಲಿ ಹುಟ್ಟಿ, ಮೈಸೂರಿನಲ್ಲಿ ಹರಿದು, ತಂಜಾವೂರಿನಲ್ಲಿ ಹಾದುಹೋಗಿ, ಬಂಗಾಲಸಮುದ್ರಕ್ಕೆ ಬೀಳುತ್ತದೆ. 12. ವೇದವ್ಯಾಸನು ಮಹಾಭಾರತವನ್ನು ಬರೆದನು. 13. ಶುದ್ಧೋದನನ ಪುತ್ರನಾದ ಗೌತಮನು ಯಶೋದರೆಯನ್ನೂ ರಾಹುಲನನ್ನೂ ಮನೆಯಲ್ಲಿ ಬಿಟ್ಟು ಉರ್ವೇಲ ಎಂಬ ಅರಣ್ಯಕ್ಕೆ ಹೋದನು. 14. ಹೌದಪ್ಪನ ಮನೆಯಲ್ಲಿ ಹೌದಪ್ಪ, ಅಲ್ಲಪ್ಪನ ಮನೆಯಲ್ಲಿ ಅಲ್ಲಪ್ಪ.

ಅನೇಕ ಪುರುಷರ ಸಮೂಹದಿಂದ ಒಬ್ಬನನ್ನು ಮಾತ್ರ ಕುರಿತು ಮಾತಾಡುವುದಾದರೆ, ಅವನನ್ನು ಉಳಿದವರಿಂದ ಬೇರೆಯಾಗಿ ಕರೆಯುವುದಕ್ಕೆ ಪ್ರತ್ಯೇಕವಾದ ಒಂದು ಹೆಸರು ಅವಶ್ಯವಿದೆ. ನಾವು ಯಾರನ್ನು ಕುರಿತು ಮಾತಾಡುತ್ತೇವೋ ಆ ಪುರುಷನನ್ನು ಕೃಷ್ಣ ಎಂದು ಕರೆಯುವುದಾದರೆ, ಕೃಷ್ಣ ಎಂಬುದು ಆ ಹೆಸರಾಗಿದೆ. ಕೃಷ್ಣನನ್ನು ಇತರ ಜನರಿಂದ ವಿಂಗಡಿಸಿ ಕರೆಯಲು ಅವನಿಗಿಟ್ಟ ಗುರುತು ಕೃಷ್ಣ ಎಂಬುದೇ. ಪ್ರತಿಯೊಬ್ಬನನ್ನು ಅಥವಾ ಪ್ರತಿಯೊಬ್ಬಳನ್ನು ಕುರಿತು ಮಾತಾಡುವಾಗ ಅವರಿಗೆ ಪ್ರತ್ಯೇಕವಾದ ಒಂದೊಂದು ಗುರುತು ಇದೆ. ಗೋವಿಂದ, ಶಂಕರ, ಅಚ್ಚಬ್ಬಿ, ದಾವೀದ, ಕಣ್ಣಪ್ಪ, ಇಂದಿರಾ, ಲ್ಯೂಸಿ ಮೊದಲಾದ ಪದಗಳು ಆಯಾ ಜನರನ್ನು ಇತರರಿಂದ ವಿಂಗಡಿಸಿ ಕರೆಯಲು ಇಟ್ಟ ಗುರುತುಗಳು. ಇಂಥ ಗುರುತುಗಳೇಕೆ? ಈ ಗುರುತುಗಳು ಇಲ್ಲದಿದ್ದರೆ, ನಾವು ಯಾರ ವಿಷಯವಾಗಿ ಮಾತಾಡುತ್ತೇವೆಂದು ಮತ್ತೊಬ್ಬರು ತಿಳಿಯಲಾರರು; ನಮ್ಮ ಸಂಭಾಷಣೆಯು ನಡೆಯುವುದಕ್ಕೆ ಬಹಳ ತೊಡಕುಂಟಾಗುವುದು.

ISRT

ಮೇಲೆ ಹೇಳಿದಂತೆಯೇ ಅನೇಕ ಪಟ್ಟಣಗಳಿಂದ ಒಂದು ಪಟ್ಟಣವನ್ನು ಬೇರೆಯಾಗಿ ತಿಳಿಯುವುದಕ್ಕೆ ಪ್ರತ್ಯೇಕವಾದ ಒಂದು ಗುರುತು ಇದೆ. ಮಡಿಕೇರಿ, ಮಂಗಳೂರು, ಮೈಸೂರು, ಧಾರವಾಡ ಎಂಬ ಹೆಸರುಗಳು ಇಂಥ ಗುರುತುಗಳು. ಅದೇ ರೀತಿಯಲ್ಲಿ ದೇಶ, ಜಿಲ್ಲೆ, ನದಿ, ದಿನ, ತಿಂಗಳು, ವರ್ಷ ಮೊದಲಾದುವುಗಳಿಗೆ ಪ್ರತ್ಯೇಕವಾದ ಗುರುತುಗಳಿವೆ.

ಈ ಗುರುತು ಇದ್ದರೆ, ಒಂದು ವಸ್ತುವನ್ನು ಅದರ ಹಾಗಿರುವ ಅನೇಕ ವಸ್ತುಗಳಿಂದ ಬೇರೆಯಾಗಿ ಆಯ್ದುಕೊಳ್ಳಬಹುದು. ಇಂಥಾ ಗುರುತಿಗೆ ವ್ಯಾಕರಣದಲ್ಲಿ ಅಂಕ ಎನ್ನುವರು; ಅಂಕ ಎಂದರೆ ಗುರುತು. ಅಂಕವನ್ನು ತೋರಿಸುವ ನಾಮಪದಗಳೇ ಅಂಕಿತನಾಮಗಳು.

ಒಂದೇ ಬಗೆಯ ಹಲವು ವಸ್ತುಗಳಲ್ಲಿ ಒಂದನ್ನೇ ಬೇರೆಯಾಗಿ ತೋರಿಸುವುದಕ್ಕಿಟ್ಟ ಹೆಸರನ್ನು ವ್ಯಾಕರಣದಲ್ಲಿ ಅಂಕಿತನಾಮವೆನ್ನುವರು.

ಗೋವಿಂದ, ಲಕ್ಷ್ಮಿ, ಅಸ್ಯ, ಹಿಂದುಸ್ಥಾನ, ಮೈಸೂರು, ಧಾರವಾಡ, ಕಾವೇರಿ, ಲಂಕೆ, ಬುಧವಾರ ಮೊದಲಾದ ಪದಗಳು ವ್ಯಾಕರಣದಲ್ಲಿ ಅಂಕಿತನಾಮಗಳೆಂದು ಕರೆಯಲ್ಪಡುತ್ತವೆ.

20. ಪ್ರಶ್ನೆಗಳು.

ಕೆಳಗಿನವುಗಳಲ್ಲಿ ಅಂಕಿತನಾಮಗಳನ್ನು ತೋರಿಸಿಕೊಡಿರಿ:—

1. ಕೆಲವು ಮತಸ್ಥರು ಕಾಶೀ ಎಂಬಲ್ಲಿಗೂ, ಕೆಲವರು ಮಕ್ಕಾವಿಗೂ, ಕೆಲವರು ಯೆರೂಸಲೇಮಿಗೂ ಯಾತ್ರೆ ಮಾಡುತ್ತಾರೆ. 2. ಟಾಮರಾಜರ ಪುತ್ರರಾದ ಕೃಷ್ಣರಾಜರಿಗೆ ಫ್ರೇಸರ್ ಸಾಹೇಬರವರಿಂದ ವಿದ್ಯಾಭ್ಯಾಸವು ನಡೆಯಿತು. 3. ಯಮುನಾ ತೀರದ ಮೇಲಿರುವ ಆಗ್ರಾ ನಗರದಲ್ಲಿ ಕಹಜಿಹಾನನು ತಾಜಮಹಲನ್ನು ಕಟ್ಟಿಸಿದನು. 4. ವಿಕ್ರಮಾದಿತ್ಯನು ಸಿಥಿಯ ಜನರನ್ನು ಕಾರೋರಿನಲ್ಲಿ ಸೋಲಿಸಿ ಉಜ್ಜಯನಿಯಲ್ಲಿ ರಾಜ್ಯವಾಳಿದನು. 5. ಮದ್ರ ದೇಶದ ಅರಸನಾದ ಅಶ್ವಪತಿಯು ತನ್ನ ಮಗಳಾದ ಸಾವಿತ್ರಿಯನ್ನು ಸತ್ಯವಂತನಿಗೆ ಕೊಟ್ಟು ಮದುವೆ ಮಾಡಿದನು. 6. ಕಾಯಿನನು ಆಬೇಲನನ್ನು ಕೊಂದನೆಂದು ಬೈಬಲಿನಲ್ಲಿದೆ. 7. ಹಿಮಾಲಯವು ಹಿಂದುಸ್ಥಾನಕ್ಕೂ ಚೀನಕ್ಕೂ ಮಧ್ಯದಲ್ಲಿದೆ. 8. ಬಂದದ್ದೆಲ್ಲಾ ಬರಲಿ ಗೋವಿಂದನ ದಯೆ ಎಮಗಿರಲಿ. 9. ದಕ್ಷಿಣ ಕನ್ನಡದಲ್ಲಿ ಚಳಿಯು ದಕ್ಷಂಬರದಲ್ಲಿ ಬಲವಾಗಿದ್ದು ಜನವರಿಯಲ್ಲಿ ತಗ್ಗುತ್ತದೆ. 10. ರಾಮನ ತಪ್ಪಿಗೆ ಶ್ಯಾಮನ ತಲೆ ಬಡಿಯುವುದು ಸರಿಯಲ್ಲ.

11. ಶ್ರೀನಿವಾಸನೆ ನೀನು ದಯೆದೋರದಿರ್ದಡೆ | ನಾನಾರಿಗುಸುರುವೆನು ಮನದ ಹೊಲ್ಲೆ?

12. ಭಾವಿಸುವೆ ಸಂಜೀವಿ ನಿನ್ನನು — ಕನ್ಯಾಕುಮಾರಿ
ದೇವಿ ಕೃಪೆಯೊಳು ಕಾವುದೆನ್ನನು.

ISRT

13. ಬಿಸುಟನೈ . . . . ದಮ-
ರಿಸಿಯು ದೆಸೆಯಿಂದಾದ ದಮಯೆಂತಿಯನು ಎಪಿನದಲಿ ॥
ನುಸುಳಿದನು ಬಳಿಕೊಬ್ಬನೇ ಸಂ- ।
ಧಿಸಿದ ಕರ್ಕೋಟಕನ ದೆಸೆಯಿಂ-
ದಸುವ ನೀಗದೆ ಸಾರಿದನು ಋತುಪರ್ಣ ಭೂಪತಿಯಾ ॥

ಪರೀಕ್ಷೆ.

ನಿಮ್ಮ ವರ್ಗದ 10 ಮಂದಿ ಹುಡುಗರ ಹೆಸರುಗಳನ್ನು ಹೇಳು. ವ್ಯಾಕರಣದಲ್ಲಿ ಅಂಕ ವೆಂದರೇನು? ಅಂಕಿತನಾಮವೆಂದರೇನು? ವಸ್ತುಗಳಿಗೆ ಪ್ರತ್ಯೇಕವಾದ ಹೆಸರುಗಳಿಲ್ಲದಿದ್ದರೆ, ಹೇಗೆ ತೊಡಕುಂಟಾಗಬಹುದು? ಅಂಕಿತನಾಮಗಳಿಂದ ಪ್ರಯೋಜನವೇನು? ಅಂಕಿತನಾಮ ಗಳಿಗೆ ಕೆಲವು ಉದಾಹರಣೆಗಳನ್ನು ಕೊಡು.

Common nouns.

13ನೆಯ ಪಾಠ.—ಸಾಮಾನ್ಯನಾಮಗಳು.*

ಲೋಕದಲ್ಲಿ ದನ, ಕುರಿ, ಗಿಳಿ, ಗಿಡುಗ ಮೊದಲಾದ ಅನೇಕ ಪ್ರಾಣಿಗಳಿವೆ. ಇವುಗಳಲ್ಲಿ ಕೆಲವುಗಳಿಗೆ ಸ್ವಲ್ಪ ವಿಷಯಗಳಲ್ಲಿ ಭೇದವೂ ಸ್ವಲ್ಪ ವಿಷಯಗಳಲ್ಲಿ ಹೋಲಿಕೆಯೂ ಉಂಟು. ಕುರಿ ಮತ್ತು ದನ ಇವುಗಳಲ್ಲಿ ಭೇದವೇನು? ದನವು ಕುರಿಗಿಂತ ದೊಡ್ಡದಾಗಿಯೂ ಎತ್ತರವಾಗಿಯೂ ಇದೆ; ದನದ ಕೊಂಬುಗಳು ಕುರಿಯ ಕೊಂಬುಗಳ ಹಾಗೆ ನುಲುಕೊಂಡಿಲ್ಲ; ದನದ ಬಾಲವು ಬಲು ಉದ್ದವಾಗಿದೆ. ಆದರೂ ದನಕ್ಕೆ ಇರುವಂತೆಯೇ ಕುರಿಗೂ ನಾಲ್ಕು ಕಾಲುಗಳೂ, ಮೈಯಲ್ಲಿ ರೋಮವೂ ಹಿಂದುಗಡೆಯಲ್ಲಿ ಬಾಲವೂ ಉಂಟು. ಈ ಹೋಲಿಕೆಯು ಇರುವುದರಿಂದಲೇ ದನವನ್ನೂ ಕುರಿಯನ್ನೂ ಮೃಗವೆಂದು ನಾವು ರೂಢಿಯಾಗಿ ಕರೆಯುತ್ತೇವೆ. ದನವು ಮೃಗವಾಗಿದೆ; ಕುರಿಯೂ ಮೃಗವಾಗಿದೆ; ಕುದುರೆಯೂ ಮೃಗವಾಗಿದೆ. ಚರ್ಮದಲ್ಲಿ ರೋಮವೂ, ನಾಲ್ಕು ಕಾಲುಗಳೂ, ಹಿಂದುಗಡೆ ಬಾಲವೂ ಯಾವ ಪ್ರಾಣಿಯಲ್ಲಿ ಇರುವುವೋ ಆ ಪ್ರಾಣಿಯನ್ನು ನಾವು ಮೃಗವೆಂದು ಕರೆಯುತ್ತೇವೆ. ಎರಡು ಕಾಲುಗಳೂ, ಗರಿಗಳೂ, ಹಾರುವ ಶಕ್ತಿಯೂ ಯಾವ ಪ್ರಾಣಿಗಳಲ್ಲಿ ಸಾಮಾನ್ಯವಾಗಿರುವುವೋ ಅವುಗಳನ್ನು ನಾವು ಪಕ್ಷಿಗಳೆಂದು ಕರೆಯು

* ಇವುಗಳಿಗೆ ರೂಢನಾಮಗಳೆಂದು ವಾಡಿಕೆಯಾಗಿ ಹೆಸರುಂಟು.

ISRT

ತ್ತೇವೆ. ಈ ಸಮಾನತ್ವವು ಇರುವುದರಿಂದ ಮೃಗ, ಪಕ್ಷಿ ಎಂಬೀ ಪದಗಳಿಗೆ ವ್ಯಾಕರಣದಲ್ಲಿ ಸಾಮಾನ್ಯನಾಮವೆಂಬ ಹೆಸರು ಬರುತ್ತದೆ.

ಇದರಂತೆಯೇ ವಿಚಾರಿಸಿದರೆ, ಮನುಷ್ಯ, ಹುಡುಗ, ಮಾನು, ಹುಳು ಮೊದಲಾದ ಶಬ್ದಗಳು ವ್ಯಾಕರಣದಲ್ಲಿ ಸಾಮಾನ್ಯನಾಮಗಳು ಎನ್ನಿಸುವುವು.

ತೆಂಗಿನ ಮರ, ಮಾವಿನ ಮರ, ಆಲದ ಮರ ಮುಂತಾದ ಅನೇಕ ಮರಗಳಿವೆ. ಮರವೆಂದು ಕರೆಯಬೇಕಾದರೆ, ಪ್ರತಿಯೊಂದರಲ್ಲಿಯೂ ಗೆಲ್ಲುಗಳೂ ಎಲೆಗಳೂ ಕಟ್ಟಿಗೆಯೂ ಇರಬೇಕು. ಈ ಸಮಾನತ್ವವು ಇಲ್ಲದಿದ್ದರೆ, ಅವುಗಳನ್ನು ಮರವೆಂದು ಕರೆಯುತ್ತಿರಲಿಲ್ಲ. ಆದುದರಿಂದ ಮರ ಎಂಬ ಪದವು ವ್ಯಾಕರಣದಲ್ಲಿ ಸಾಮಾನ್ಯನಾಮವೆನ್ನಿಸುತ್ತದೆ.

ಹೀಗೆಯೇ ವಿಚಾರಿಸಿದರೆ, ಗಿಡ, ಬಳ್ಳಿ, ಸಸಿ, ಹೂ ಮೊದಲಾದ ಪದಗಳು ವ್ಯಾಕರಣದಲ್ಲಿ ಸಾಮಾನ್ಯನಾಮಗಳಾಗುವುವು.

21. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ಸಾಮಾನ್ಯನಾಮಗಳನ್ನು ತೋರಿಸಿರಿ:—

1. ಕೆಲವು ಪಕ್ಷಿಗಳು ಮನುಷ್ಯರಲ್ಲಿ ಬಹಳವಾಗಿ ಬಗ್ಗಿರುತ್ತವೆ; ಅವುಗಳು ಮರಗಳಲ್ಲಿಯೂ ಜೀವಿಸುತ್ತವೆ. 2. ತೋಟದಲ್ಲಿರುವ ಗಿಡಗಳಲ್ಲಿ ಹೂಗಳು ಎಷ್ಟು ಅಂದವಾಗಿ ತೋರುತ್ತಿವೆ! 3. ಬೆಸ್ತರು ಮೀನುಗಳನ್ನು ಹಿಡಿದು ತಂದು ಕ್ರಯಕ್ಕೆ ಮಾರಿ ಹೊಟ್ಟೆಹೊರ ಕೊಳ್ಳುತ್ತಾರೆ. 4. ನೊಳಗಳನ್ನು ಭಕ್ಷಿಸುವ ಪ್ರಾಣಿಗಳನ್ನು ನೋಡಿದ್ದಿಯೇ? 5. ಸಣ್ಣ ಕ್ರಿಮಿಗಳಿಗೆ ಒಂದೇ ದಿನದ ಬಾಳಿಕೆಯೆಂದು ಹೇಳುತ್ತಾರೆ. 6. ಕಿತ್ತಾನಾರು ಗಿಡದ ಒಳನಾರನ್ನು ಬಟ್ಟೆಗಳಿಗೆ ಉಪಯೋಗಿಸುತ್ತಾರೆ.

ದನ, ಕುರಿ, ಆಡು, ಕುದುರೆ, ಇವುಗಳನ್ನು ಮೃಗಗಳೆಂದು ಏತಕ್ಕೆ ಕರೆಯುತ್ತಾರೆ? ಪ್ರತಿಯೊಂದಕ್ಕೂ ನಾಲ್ಕು ಕಾಲುಗಳೂ, ಮೈಯಲ್ಲಿ ರೋಮವೂ, ಹಿಂದುಗಡೆ ಬಾಲವೂ ಉಂಟು. ಈ ಸಮಾನತ್ವದಿಂದ ಅವುಗಳನ್ನು ಮೃಗದ ವರ್ಗದಲ್ಲಿ ಸೇರಿಸುತ್ತಾರೆ. ದನವು ಪಕ್ಷಿವರ್ಗದಲ್ಲಿ ಏತಕ್ಕೆ ಸೇರುವುದಿಲ್ಲ? ದನಕ್ಕೆ ಹಕ್ಕಿಯಂತೆ ಗರಿಗಳಿಲ್ಲ. ತೆಂಗು, ಮಾವು, ಹಲಸು, ಆಲ, ಇವುಗಳನ್ನು ಯಾವ ವರ್ಗದಲ್ಲಿ ಸೇರಿಸಬಹುದು? ಇವನ್ನು ಮರವೆಂಬ ವರ್ಗದಲ್ಲಿ ಸೇರಿಸಬಹುದೆಂದು ನೀನು ಹೇಳಬಲ್ಲೆ. ಕೆಲವು ವಸ್ತುಗಳನ್ನು ಒಂದು ವರ್ಗದಲ್ಲಿ ಸೇರಿಸಬೇಕಾದರೆ, ಅವುಗಳಲ್ಲಿ ಸ್ವಲ್ಪ ಮಟ್ಟಿಗೆ ಹೋಲಿಕೆ

ISRT

ಯಿರಬೇಕು; ಇಂಥ ಸಮಾನತ್ವವಿಲ್ಲದಿದ್ದರೆ, ಅನೇಕ ವಸ್ತುಗಳನ್ನು ಒಂದು ವರ್ಗದಲ್ಲಿ ಸೇರಿಸಲಾಗುವುದಿಲ್ಲ.

ಸಮಾನತ್ವವಿರುವುದರಿಂದ ಅನೇಕ ವಸ್ತುಗಳನ್ನು ಒಂದು ವರ್ಗದಲ್ಲಿ ಸೇರಿಸಿದರೆ, ಆ ವರ್ಗಕ್ಕೆ ವ್ಯಾಕರಣದಲ್ಲಿ ಜಾತಿಯೆಂದು ಹೆಸರು. ಮನುಷ್ಯ ಎಂಬುದು ಜಾತಿಯ ಹೆಸರು; ಏಕೆಂದರೆ ಮನುಷ್ಯವರ್ಗದಲ್ಲಿ ಶ್ರೀನಿವಾಸ, ಗೋವಿಂದ, ರಹಮತ್, ಜಾರಪ್ಪ, ದಾವೀದ ಮೊದಲಾದವರು ಸೇರುತ್ತಾರೆ. ಮಾಧವಿ, ಫ್ರಾನ್ಸಿಸ್ಕಕ್ಕೆ, ಲ್ಯೂಸಿ, ಸುಂದರಿ, ಇವನ್ನು ಹುಡುಗಿ ಎಂಬ ವರ್ಗದಲ್ಲಿ ಸೇರಿಸಬಹುದು. ಆದ್ದರಿಂದಲೇ ಹುಡುಗಿ ಎಂಬುದು ಜಾತಿಯ ಹೆಸರು.

ಜಾತಿಯಲ್ಲಿ ಸೇರಿರುವ ಪ್ರತಿಯೊಂದಕ್ಕೆ ವ್ಯಕ್ತಿ ಎಂದು ಹೆಸರು. ಮರ ಎಂಬುದು ಜಾತಿಯ ಹೆಸರಾದರೆ, ಆಲ, ಹಲಸು, ಮಾವು ಎಂಬಿವು ಆ ಜಾತಿಯಲ್ಲಿ ಸೇರಿದ್ದ ವ್ಯಕ್ತಿಗಳು. ಪಟ್ಟಣ ಎಂಬುದು ಜಾತಿಯ ಹೆಸರಾದರೆ, ಮಂಗಳೂರು, ಮಡಿಕೇರಿ, ಮೈಸೂರು, ಇವೇ ಆ ಜಾತಿಗೆ ಸೇರಿದ್ದ ಬೇರೆ ಬೇರೆ ವ್ಯಕ್ತಿಗಳು. ಮೃಗ ಎಂಬುದು ಜಾತಿಯ ಹೆಸರಾದರೆ, ದನ, ಕುರಿ, ಎತ್ತು, ಕುದುರೆ, ಇವುಗಳು ವ್ಯಕ್ತಿಗಳ ಹೆಸರುಗಳು. ದನ ಎಂಬುದು ಜಾತಿಯ ಹೆಸರಾದರೆ, ಪ್ರತಿಯೊಂದು ದನವೂ ವ್ಯಕ್ತಿಯಾಗಿದೆ. ಆಡು ಎಂಬ ಜಾತಿಯಲ್ಲಿ ಪ್ರತಿಯೊಂದು ಆಡು ಒಂದೊಂದು ವ್ಯಕ್ತಿಯಾಗಿದೆ.

ಜಾತಿಯ ಹೆಸರುಗಳೂ ವ್ಯಕ್ತಿಯ ಹೆಸರುಗಳೂ ವ್ಯಾಕರಣದಲ್ಲಿ ಸಾಮಾನ್ಯನಾಮಗಳೆನ್ನಿಸುತ್ತವೆ. ಹಕ್ಕಿ ಎಂಬ ಜಾತಿಯಲ್ಲಿ ಸೇರಿದ ಗಿಳಿ, ಗುಬ್ಬಿ, ಕಾಗೆ ಎಂಬ ವ್ಯಕ್ತಿಗಳ ಹೆಸರುಗಳು ಸಾಮಾನ್ಯನಾಮಗಳು. ಗಿಳಿ ಎಂಬ ಜಾತಿಯಲ್ಲಿ ಸೇರುವ ಪ್ರತಿಯೊಂದು ಗಿಳಿಯೂ ವ್ಯಕ್ತಿಯಾಗಿದೆ. ಈ ವ್ಯಕ್ತಿಗೆ ಪ್ರತ್ಯೇಕವಾದ ಹೆಸರಿಲ್ಲದೆ, ಪ್ರತಿಯೊಂದು ವ್ಯಕ್ತಿಯನ್ನು ಗಿಳಿ ಎಂಬ ಹೆಸರಿನಿಂದಲೇ ಕರೆಯುವುದರಿಂದ ಗಿಳಿ ಎಂಬ ಪದವು ಸಾಮಾನ್ಯನಾಮವೆನ್ನಿಸುತ್ತದೆ.

• ಈಗ ಸಾಮಾನ್ಯನಾಮಗಳೆಂದರೆ ಏನೆಂದು ಹೇಳಬಲ್ಲೆಯಾ? ವಸ್ತುವಿನ ಜಾತಿಯನ್ನು ತೋರಿಸುವುದಕ್ಕೆ ಸಾಮಾನ್ಯವಾಗಿ ಇಟ್ಟ ಹೆಸರುಗಳು ಸಾಮಾನ್ಯನಾಮಗಳು.

ಹುಡುಗ ಎಂಬ ಜಾತಿಯಲ್ಲಿ ಸೇರಿದ ಪ್ರತಿಯೊಬ್ಬ ಹುಡುಗನು ವ್ಯಕ್ತಿಯಷ್ಟೆ. ಈ ವ್ಯಕ್ತಿಗಳಿಗೆ ರಾಮ, ಗೋವಿಂದ, ಅಚ್ಚಬ್ಬ, ದಾವೀದ ಎಂಬ ಪ್ರತ್ಯೇಕ

ಹೆಸರುಗಳಿರುವುದರಿಂದ, ರಾಮ, ಗೋವಿಂದ, ಅಚ್ಚಬ್ಬ, ದಾವೀದ ಎಂಬೀ ಪದಗಳು ಅಂಕಿತನಾಮಗಳೆನ್ನಿಸುತ್ತವೆ.

ವ್ಯಾಕರಣದಲ್ಲಿ ಜಾತಿಯ ಹೆಸರುಗಳೂ ವ್ಯಕ್ತಿಯ ಹೆಸರುಗಳೂ ಸಾಮಾನ್ಯನಾಮಗಳು; ಆದರೆ ವ್ಯಕ್ತಿಗೆ ಪ್ರತ್ಯೇಕವಾಗಿರುವ ಹೆಸರು ಅಂಕಿತನಾಮವೆಂದು ತಿಳಿಯಬೇಕು. ಮೃಗ ಎಂಬ ಜಾತಿಯಲ್ಲಿ ದನ, ಕುರಿ ಎಂಬಿವು ವ್ಯಕ್ತಿಗಳು. ದನ ಎಂಬ ಜಾತಿಯಲ್ಲಿರುವ ಪ್ರತಿಯೊಂದು ದನಕ್ಕೆ ಗಂಗೆ, ಶಿಲ್ಪಿ, ಕುರ್ಕೆ ಮೊದಲಾದ ಪ್ರತ್ಯೇಕ ಹೆಸರುಗಳನ್ನಿಟ್ಟರೆ, ಆ ಹೆಸರುಗಳು ಅಂಕಿತನಾಮಗಳು. ಇದರಂತೆಯೇ ವಿಚಾರಿಸಿದರೆ, ಪಟ್ಟಣ, ಹೊಳೆ, ಗುಡ್ಡ ಮೊದಲಾದುವುಗಳು ಜಾತಿಯ ಹೆಸರುಗಳೆಂದು ತಿಳಿದುಕೊಳ್ಳಬಹುದು. ಪಟ್ಟಣಕ್ಕಾಗಲಿ ಹೊಳೆಗಾಗಲಿ ಪ್ರತ್ಯೇಕವಾದ ಹೆಸರನ್ನಿಟ್ಟರೆ, ಆ ಹೆಸರು ಅಂಕಿತನಾಮವೆನ್ನಿಸುತ್ತದೆ. ಮಂಗಳೂರು, ಮಡಿಕೇರಿ, ಮೈಸೂರು, ನೇತ್ರಾವತಿ, ಕಾವೇರಿ, ಪಾಪನಾಶಿನಿ, ಸಹ್ಯಾದ್ರಿ, ನೀಲಗಿರಿ, ಇವು ಅಂಕಿತನಾಮಗಳು.

22. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ಸಾಮಾನ್ಯನಾಮಗಳನ್ನು ತೋರಿಸಿರಿ:—

1. ತೋಳನು ದೊಡ್ಡ ನಾಯಿಯ ಹಾಗೆ ಇರುತ್ತದೆ. 2. ಕೋಣನು ಎತ್ತಿಗಿಂತ ದೊಡ್ಡದು, ಗದ್ದೆಯನ್ನು ಉಳುತ್ತದೆ, ಬಂಡಿಯನ್ನು ಎಳೆಯುತ್ತದೆ. 3. ಕೊಕ್ಕರೆಯು ಕೆರೆಗಳ ಕಟ್ಟಿಯ ಹತ್ತಿರ ನಿಂತಿರುವುದನ್ನು ನಾವು ನೋಡುತ್ತೇವೆ. 4. ಕಾಗೆಗಳು ಇಲಿಗಳನ್ನೂ ಹಲ್ಲಿಗಳನ್ನೂ ಕಪ್ಪೆಗಳನ್ನೂ ಹುಳುಗಳನ್ನೂ ತಿನ್ನುವುವು. 5. ಆನೆಯು ಮೂಗನ್ನು ಸೊಂಡಲಂದು ಕರೆಯುತ್ತಾರೆ; ಅದರ ತುದಿಯಲ್ಲಿ ಬೆರಳಿನ ಹಾಗಿರುವ ಒಂದು ಭಾಗವಿದೆ. 6. ಹುಂಜಗಳು ಅಂಗಳದಲ್ಲಿ ದೊರೆಗಳ ಹಾಗೆ ಅಧಿಕಾರ ಮಾಡುತ್ತಿದ್ದುವು. 7. ಗ್ರಾಮಕ್ಕೆ ಹೋಗುವ ದಾರಿಯಲ್ಲಿ ನಾಯಿಯು ಹೊಳೆಯ ಮೇಲಿನ ಸೇತುವೆಯನ್ನು ದಾಟಬೇಕಾಗಿತ್ತು. 8. ಅಡವಿಯಲ್ಲಿ ಅಲೆಯುತ್ತಿದ್ದ ನರಿಯು ಬಾಲವು ಒಂದು ಜೋನಿನಲ್ಲಿ ಸಿಕ್ಕಿಕೊಂಡಿತು. 9. ಆ ಚಿತ್ರದಲ್ಲಿ ಕೊಂಬೆಗೆ ಅಂಟಿಕೊಂಡಿರುವ ಮೊಟ್ಟೆಗಳೂ ಎಲೆಯನ್ನು ತಿನ್ನುವ ಕ್ರಿಮಿಯೂ ಕೆಂಬೆಗೆ ತಗಲಿಕೊಂಡಿರುವ ಕೋಶವಾಸಿಯೂ ರೆಕ್ಕೆಗಳನ್ನು ಬಿಚ್ಚಿಕೊಂಡಿರುವ ಚಿಟ್ಟೆಯೂ ಕಾಣುತ್ತವೆ. 10. ಹುಂಜವೂ ಹೇಂಟೆಯೂ ಅವುಗಳ ಮರಿಗಳೂ ಇದ್ದ ಕಣಕ್ಕೆ ಒಂದು ಬೆಕ್ಕು ಹೋಯಿತು.

ಪರೀಕ್ಷೆ.

ಗೋಪಾಲ, ಚಕ್ರಪಾಣಿ, ಪದ್ಮನಾಭ, ಇವು ಎಂಥ ನಾಮಗಳು? ಮನುಷ್ಯ, ಮೃಗ, ಪಕ್ಷಿ, ಇವು ಎಂಥಾ ನಾಮಗಳು? ಸಾಮಾನ್ಯನಾಮವೆಂದರೇನು? ಸಾಮಾನ್ಯನಾಮಕ್ಕೂ ಅಂಕಿತನಾಮಕ್ಕೂ

ISRT

ಭೇದವೇನು? ವ್ಯಕ್ತಿ ಎಂದರೇನು? ಜಾತಿ ಎಂದರೇನು? ವ್ಯಕ್ತಿಗೂ ಜಾತಿಗೂ ಭೇದವೇನು? ಗಿಡವೆಂಬ ಜಾತಿಯಲ್ಲಿ ಸೇರುವ ಕೆಲವು ವ್ಯಕ್ತಿಗಳನ್ನು ಹೇಳಿರಿ. ವ್ಯಕ್ತಿಗಳಲ್ಲಿ ಪ್ರತಿಯೊಂದಕ್ಕೆ ಇರುವ ಪ್ರತ್ಯೇಕವಾದ ಹೆಸರಿಗೆ ವ್ಯಾಕರಣದಲ್ಲಿ ಏನನ್ನುವರು? ಪುಸ್ತಕ ಎಂಬುದು ಜಾತಿಯ ಹೆಸರಾದರೆ, ವ್ಯಕ್ತಿಗಳು ಯಾವುವು? ಆ ವ್ಯಕ್ತಿಗಳಿಗೆ ಪ್ರತ್ಯೇಕ ಹೆಸರುಗಳನ್ನು ಕೊಡಿರಿ. ತಂಬಿಗೆ, ತಪ್ಪಲೆ, ಮಡಕೆ, ತಟ್ಟೆ, ಇವನ್ನು ಯಾವ ಜಾತಿಗೆ ಸೇರಿಸಬಹುದು? ಬೆಂಡು, ಕುರ್ಚಿ, ಇವನ್ನು ಯಾವ ಜಾತಿಗೆ ಸೇರಿಸಬಹುದು?

Collective nouns.

14ನೆಯ ಪಾಠ.—ಸಂಘನಾಮಗಳು.

1. ಕುರುಬನು ಮಂದೆಯನ್ನು ಮೇಯಿಸುವುದಕ್ಕೆ ಹುಲ್ಲುಗಾವಲಿಗೆ ಹೋಗುತ್ತಾನೆ. 2. ಅಲ್ಲಿ ನೋಡು! ಮಾವಿನ ಮರಗಳ ತೋಪು ಕಾಣಿಸುತ್ತದೆ.

ಮೊದಲನೆಯ ವಾಕ್ಯದಲ್ಲಿ ಮಂದೆ ಎಂದರೇನು? ಅನೇಕ ಕುರಿಗಳ ಸಮೂಹಕ್ಕೆ ಮಂದೆ ಎಂದು ಹೆಸರು. ಗುಂಪಿನಲ್ಲಿರುವ ಪ್ರತಿಯೊಂದು ಕುರಿಯನ್ನು ಮಂದೆ ಎಂದು ಕರೆಯುವುದಿಲ್ಲ. ಹಾಗೆಯೇ ಅನೇಕ ಮರಗಳು ಕೂಡಿ ಬೆಳೆದಿರುವ ಸ್ಥಳಕ್ಕೆ ತೋಪು ಎಂದು ಹೆಸರು. ಅದರಲ್ಲಿದ್ದ ಒಂದೊಂದು ಮರವು ತೋಪು ಎಂದು ಕರೆಯಲ್ಪಡುವುದಿಲ್ಲ. ಮಂದೆ, ತೋಪು ಎಂಬ ಶಬ್ದಗಳು ಸಹ ಹೆಸರುಗಳೇ.

ಗುಂಪು ಎಂಬ ಅರ್ಥವನ್ನು ಹೇಳುವ ಹೆಸರುಗಳೆಲ್ಲಾ ಸಂಘನಾಮಗಳೆನ್ನಿಸುತ್ತವೆ. ಸಂಘ ಎಂದರೆ ಗುಂಪು ಎಂದು ಅರ್ಥ. ಮಂದೆ, ತೋಪು, ಸೊಂಚಲು, ಕೂಟ ಮೊದಲಾದ ಪದಗಳು ವ್ಯಾಕರಣದಲ್ಲಿ ಸಂಘನಾಮಗಳೆಂದೆನ್ನಿಸುತ್ತವೆ.

23. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ಸಂಘನಾಮಗಳನ್ನು ತೋರಿಸಿರಿ:—

1. ನರಿಗಳು ಹಗಲಲ್ಲಿ ಹೊರಬರುವುದಿಲ್ಲ; ಕತ್ತಲಾಗುತ್ತಲೇ ಅವುಗಳ ಹಿಂಡುಗಳು ಕೂಗಾಡ ತೊಡಗುತ್ತಿವೆ. 2. ನೀನು ಕಲಿಯುವ ವರ್ಗದಲ್ಲಿ ಎಷ್ಟು ಹುಡುಗರಿದ್ದಾರೆ? 3. ಆ ಹೇಂಟೆಗೆ ಮರಿಗಳ ಒಂದು ದೊಡ್ಡ ಬಳಗವು ಇದೆ. 4. ಬಾಳೆಯ ಗಿಡದ ಒಂದೊಂದು ಗೊನೆಯಲ್ಲಿ 150ರಿಂದ 200ರ ವರೆಗೆ ಹಣ್ಣುಗಳಿವೆ. 5. ಟಪ್ಪಾಲಿನವನು ಬಲಗೈಯಲ್ಲಿ ಕಾಗದವನ್ನು ಎಡಗೈಯಲ್ಲಿ ಕಟ್ಟನ್ನು ಹಿಡಿದು ಬರುತ್ತಾನೆ. 6. ಬಳೆಗಾರನು ಮಲ್ಲಾರವನ್ನು ಹೆಗಲ ಮೇಲಿರಿಸಿ ಮಾರುವುದಕ್ಕೆ ಹೋಗುವುದುಂಟು. 7. ಯುದ್ಧಕ್ಕೆ ಒಟ್ಟುಸೂಡುವ ಸಿಪಾಯರಿಗೆ ಒಂದಾಗಿ ಸೈನ್ಯವೆಂದು ಹೆಸರು. 8. ಕೊತ್ತಳಿಯಲ್ಲಿದ್ದ ಒಂದು ಕಾಸೆಯು

ಕೂಸುತ್ತಲೇ ಎಲ್ಲಾ ಕಾಗೆಗಳು ಕೂಗಾಡುವುವು. 9. ನಮ್ಮ ಜಿಲ್ಲೆಯಲ್ಲಿ ಮಿಕನೆರಿಯುವರು ಒಂದು ಸಂಘವನ್ನು ಸ್ಥಾಪಿಸಿದ್ದಾರೆ. 10. ಕೆಲವು ಯಾತ್ರಸ್ಥರ ಪರಿಕೆಯು ಪ್ರತಿವರ್ಷವು ತಿರುಪತಿಗೆ ಹೋಗುವುದುಂಟು. 11. ಕವಿ ಆಸ್ಥಾನಕೆ ಭೂಷಣಂ.

Abstract nouns.

15ನೆಯ ಪಾಠ.—ಭಾವನಾಮಗಳು.

ಬಾಳೆಯ ಮರಕ್ಕೆ ಕೊಂಬೆಗಳಿಲ್ಲ; ತುದಿಯಲ್ಲಿ ಎಲೆಗಳಿವೆ. ಎಲೆಗಳು ಹಸುರಾಗಿವೆ; ಹೂ ಕಂದುಬಣ್ಣದ್ದು. ಬಾಳೆಯ ಗೊನೆಯಲ್ಲಿ ಹಣ್ಣುಗಳಿವೆ; ಹಣ್ಣುಗಳು ತಿನ್ನುವುದಕ್ಕೆ ರುಚಿಯಾಗಿವೆ.

ತಾಳು, ಬುಡ, ಎಲೆ, ಹೂ, ಹಣ್ಣು, ಇವು ಬಾಳೆಯ ಗಿಡದ ಅಂಶಗಳಾಗಿವೆ. ಇವುಗಳಲ್ಲಿ ಒಂದೊಂದನ್ನು ಕೈಯಿಂದಾಗಲಿ ಕತ್ತಿಯಿಂದಾಗಲಿ ಗಿಡದಿಂದ ಈಚೆಗೆ ಕಡಿದು ತೆಗೆಯಬಹುದು.

ಬಾಳೆಯ ಮರವು ಆರು ಅಡಿ ಉದ್ದವಾಗಿದೆ; ತಾಳು ನುಣುಪು; ಎಲೆಗಳ ಬಣ್ಣವು ಹಸುರು; ಹಣ್ಣುಗಳ ಸಿಪ್ಪೆಯು ಹಳದಿ; ಹಣ್ಣುಗಳು ಸಿಹಿಯಾಗಿವೆ; ಅವು ಹುಳಿಯಲ್ಲ.

ಬಾಳೆಯ ಮರವನ್ನು ಕಡಿಯಬಹುದು; ಆದರೆ ಅದರ ಉದ್ದವನ್ನಾಗಲಿ ಅಗಲವನ್ನಾಗಲಿ ಕೈಯಿಂದ ಕಿತ್ತು ಹಿಡಿಯಲು ಬರುವುದಿಲ್ಲ. ಎಲೆಗಳನ್ನು ಕೊಯ್ದು ತೆಗೆಯಬಹುದಾದರೂ, ಅವುಗಳ ಹಸುರನ್ನು ಬೇರೆ ಹಿಡಿಯಲಾಗುವುದಿಲ್ಲ. ಹಣ್ಣುಗಳ ರುಚಿಯು ಸಿಹಿಯೆಂದು ಹೇಳಿದರೂ, ರುಚಿಯು ಕೈಯಿಂದ ಮುಟ್ಟಬರುವುದಿಲ್ಲ. ಬಾಳೆಯ ಮರದಿಂದ ತಾಳು, ಎಲೆ, ಹಣ್ಣು, ದಿಂಡು ಮೊದಲಾದ ಭಾಗಗಳನ್ನು ನಾವು ಕೈಯಿಂದಾಗಲಿ ಚೂರಿಯಿಂದಾಗಲಿ ಈಚೆಗೆ ತೆಗೆಯಬಹುದಾದರೂ, ಅದರ ಉದ್ದ, ಅಗಲ, ಭಾರ, ಬಣ್ಣ, ರುಚಿ ಮೊದಲಾದುವನ್ನು ಹಾಗೆ ತೆಗೆದು ಹಿಡಿಯಲು ಬರುವುದಿಲ್ಲ. ಬಾಳೆಯ ಹಣ್ಣು ಬೇರೆ, ಅದರ ಬಣ್ಣ ಬೇರೆ, ತಾಳು ಬೇರೆ, ಅದರ ಎತ್ತರ ಬೇರೆ ಎಂದು ನಾವು ಗ್ರಹಿಸಬಲ್ಲೆವು. ಬಾಳೆಯ ಮರದ ಉದ್ದ, ಅಗಲ, ಎತ್ತರ, ಭಾರ ಮೊದಲಾದುವನ್ನು ಕೈಯಿಂದ ಬೇರೆಯಾಗಿ ಹಿಡಿಯಲಾರದೆ ಹೋದರೂ, ಅವನ್ನು ನಾವು ಮನಸ್ಸಿನಲ್ಲಿ ತಿಳಿದುಕೊಳ್ಳಬಲ್ಲೆವು; ಇವು ಕೂಡಾ ಆ ಮರದ ಭಾಗಗಳೇ.

ISRT

ಕೈಯಿಂದಾಗಲಿ ಕತ್ತಿಯಿಂದಾಗಲಿ ಏಂಗಡಿಸಲಿಕ್ಕೆ ಆಗದೆ, ಮನಸ್ಸಿನಿಂದ ಮಾತ್ರವೇ ಗ್ರಹಿಸಲು ಬರುವ ವಸ್ತುವಿಭಾಗಗಳಿಗೆ ಗುಣಗಳೆಂದು ಹೆಸರು. ಬಾಳೆಯ ಮರದಲ್ಲಿ ಮನಸ್ಸಿನಿಂದ ಮಾತ್ರವೇ ಭಾವಿಸಲು ಬರುವ ಅನೇಕ ಗುಣಗಳಿರುತ್ತವೆ. ಉದ್ದ, ಅಗಲ, ಎತ್ತರ, ರುಚಿ, ಇವುಗಳು ಆ ಗುಣಗಳ ಹೆಸರುಗಳು. ಇಂಥ ಗುಣಗಳ ಹೆಸರುಗಳನ್ನು ವ್ಯಾಕರಣದಲ್ಲಿ ಭಾವನಾಮಗಳೆಂದು ಕರೆಯುತ್ತೇವೆ. ಈ ಗುಣಗಳನ್ನು ನಾವು ಮನಸ್ಸಿನಿಂದ ಮಾತ್ರವೇ ಭಾವಿಸಬೇಕಾದ್ದರಿಂದ ಅವುಗಳಿಗೆ ಭಾವನಾಮಗಳೆಂದು ಹೆಸರು ಬಂದಿದೆ.

ವಸ್ತುಗಳ ಗುಣ ಕ್ರಿಯೆ ಮೊದಲಾದುವುಗಳ ಹೆಸರುಗಳು ಭಾವನಾಮಗಳು. ಉದ್ದ, ಅಗಲ, ಎತ್ತರ, ಭಾರ, ರುಚಿ ಮೊದಲಾದ ಶಬ್ದಗಳು ವ್ಯಾಕರಣದಲ್ಲಿ ಭಾವನಾಮಗಳೆಂದೆನ್ನಿಸುತ್ತವೆ.

ಇದರಂತೆಯೇ ವಿಚಾರಿಸಿದರೆ, ದಯೆ, ಕೋಪ, ನ್ಯಾಯ, ಪ್ರೀತಿ, ಬಲ, ಮಾನ, ನಿದ್ರೆ, ಕ್ರಾಂತಿ ಮೊದಲಾದ ಶಬ್ದಗಳು ಭಾವನಾಮಗಳೆಂದು ತಿಳಿಯಬೇಕು.

24. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ಭಾವನಾಮಗಳನ್ನು ತೋರಿಸಿರಿ:—

1. ನಮ್ಮ ಬಾವಿಯ ಆಳವು ಮೂವತ್ತು ಅಡಿ. 2. ಎತ್ತಿನವನಿಗೆ ಎತ್ತುಗಳಲ್ಲಿ ಪ್ರೀತಿ ಇರಬೇಕು. 3. ತಾಯಿತಂದೆಗಳು ನಮ್ಮನ್ನು ಅಕ್ಕರೆಯಿಂದ ಕಾಪಾಡುತ್ತಾರೆ. 4. ಹುಡುಗನಿಗೆ ವಿದ್ಯೆ, ಗಿಡಕ್ಕೆ ಸೌಂದರ್ಯ ಎರಡೂ ಸರಿಯಾಗಿವೆ. 5. ಮಿತಿಮೀರಿದ ಆಟವು ಆರೋಗ್ಯವನ್ನು ಕೆಡಿಸುತ್ತಿದೆ. 6. ಸಿಂಹಕ್ಕೆ ಬಲ, ಹುಲಿಗೆ ಕ್ರೂರತ್ವ, ನರಿಗೆ ತಂತ್ರ ವಿಶೇಷವಾಗಿದೆ. 7. ಹಕ್ಕಿಗಳು ಇಂಪಾದ ಸ್ವರದಿಂದ ನಮಗೆ ಸುಖವನ್ನು ಉಂಟುಮಾಡುತ್ತವೆ. 8. ಚಿಂತೆಯೇ ಮುಪ್ಪು, ಸಂತೋಷವೇ ಯೌವನ. 9. ಹೇನು ಬಲ್ಲುದೆ ಮುಡಿದ ಹೂವಿನ ಪರಿಮಳವ?

10. ಬೇಡಿಕೊಂಬೆವು ನಮ್ಮ ದೇಹಕೆ ಸೌಖ್ಯವಂ ಬಲಪುಷ್ಟಿಯುಂ
ನೀಡು ನಿನ್ನಯ ಪಾದಭಕ್ತಿಯ ಎಂದಿಗೂ ಬಿಡಲಾಕೆವ್ಯೆ.

ನಾಮಪದಗಳಲ್ಲಿ ನಾಲ್ಕು ವಿಧಗಳಿರುತ್ತವೆಂದು ಈಗ ನಿನಗೆ ಗೊತ್ತಾಯಿತು. ನಾವು ಅವನ್ನು ಇನ್ನೊಮ್ಮೆ ಹೇಳೋಣ! ಒಂದೇ ಜಾತಿಯ ಹಲವು ವಸ್ತುಗಳಲ್ಲಿ ಒಂದೊಂದಕ್ಕೆ ಪ್ರತ್ಯೇಕವಾಗಿರುವ ಹೆಸರುಗಳು ಅಂಕಿತನಾಮಗಳು; ವಸ್ತುಗಳಲ್ಲಿ ಸಮಾನತ್ವವಿರುವುದರಿಂದ ಅವುಗಳಿಗೆ ಬರುವ ಹೆಸರುಗಳು

ISRT

ಸಾಮಾನ್ಯನಾಮಗಳು; ವಸ್ತುಗಳ ಸಮೂಹಗಳ ಹೆಸರುಗಳು ಸಂಘನಾಮಗಳು; ವಸ್ತುಗಳ ಗುಣಕ್ರಿಯಾದಿಗಳ ಹೆಸರುಗಳು ಭಾವನಾಮಗಳು.

ಪರೀಕ್ಷೆ.

ಸಂಘನಾಮಗಳೆಂದರೇನು? ಸಂಘನಾಮಗಳಿಗೆ ಕೆಲವು ಉದಾಹರಣೆಗಳನ್ನು ಕೊಡಿರಿ. ಗುಣಗಳೆಂದರೇನು? ಧಾವನಾಮಗಳೆಂದರೇನು? ನಾಮಪದಗಳಲ್ಲಿ ಎಷ್ಟು ವಿಧಗಳು? ಒಂದೊಂದಕ್ಕೆ ಐದೈದು ಉದಾಹರಣೆಗಳನ್ನು ಕೊಡಿರಿ. ನೆಲ, ಭೂಮಿ, ಎಣ್ಣೆ, ಪೀತರ್, ಗುರುನಾಥ, ಆನೆ, ಕುಟಿ, ಪುಸ್ತಕ, ಪಂಗಡ, ಉಪಕಾರ, ಮರ್ಯಾದೆ, ಬಹುಮಾನ, ಕಾಗದ, ಲೇಖಣಿ—ಇವೆ ಯಾವ ವಿಧದ ನಾಮಪದಗಳೆಂದು ಹೇಳಿರಿ.

Stem. affix. inflected word.

16ನೆಯ ಪಾಠ.—ಶಬ್ದ, ಪ್ರತ್ಯಯ, ಪ್ರಕೃತಿ, ಧಾತು.

ನಾವು ಮಾತಾಡುವ ನುಡಿಗಳಿಗೆ ಅರ್ಥವಿರುತ್ತದೆ; ಅರ್ಥವಿಲ್ಲದುಬುಗಳೂ ಉಂಟು. ಬಾ, ಹೋಗು, ನೀನು, ನೆಲ, ಮೇಲೆ ಎಂಬೀ ಮಾತುಗಳಿಗೆ ಅರ್ಥವಿದೆ. ಡುಸು, ಳುತ ಮೊದಲಾದುವುಗಳಿಗೆ ಕನ್ನಡದಲ್ಲಿ ಅರ್ಥವಿಲ್ಲ. ಅರ್ಥವುಳ್ಳ ಅಕ್ಷರಕ್ಕಾಗಲಿ ಅಕ್ಷರಗಳಿಗಾಗಲಿ ಶಬ್ದವೆಂದು ಹೆಸರು. ಬಾ, ಹೋಗು, ನೀನು ಮೊದಲಾದ ಮಾತುಗಳಿಗೆ ಅರ್ಥವಿರುವುದರಿಂದ ಅವುಗಳನ್ನು ಶಬ್ದಗಳೆಂದು ಕರೆಯುತ್ತಾರೆ. ಡುಸು, ಳುತ ಎಂಬಿವುಗಳಿಗೆ ಅರ್ಥವಿಲ್ಲದ್ದರಿಂದ ಅವನ್ನು ಕನ್ನಡದಲ್ಲಿ ಶಬ್ದಗಳೆಂದು ಕರೆಯುವುದಿಲ್ಲ.

ರಾಮನು ಹೋದನು; ರಾಮನೇ ಹೋದನು; ರಾಮನೂ ಹೋದನು.

ಈ ವಾಕ್ಯಗಳಲ್ಲಿ ಅರ್ಥಭೇದವು ಹೇಗೆ ಉಂಟಾಗುತ್ತದೆ? ರಾಮನು, ರಾಮನೇ, ರಾಮನೂ ಎಂಬೀ ಪದಗಳಿಂದ. ರಾಮನು ಎಂಬ ಪದದ ಕೊನೆಯಲ್ಲಿ ಏ ಎಂದು ಸೇರಿಸಿದ್ದರಿಂದ ರಾಮನೇ ಎಂದಾಗಿ ಅರ್ಥವು ಬೇರೆಯಾಯಿತು; ಹಾಗೆಯೇ ರಾಮನು ಎಂಬ ಪದದ ಅಂತ್ಯದಲ್ಲಿ ಊ ಎಂಬುದನ್ನು ಸೇರಿಸಿದ್ದರಿಂದ ರಾಮನೂ ಎಂಬ ಪದವಾಗಿ ಅರ್ಥಭೇದವಾಯಿತು. ಏ, ಊ ಎಂಬೀ ಅಕ್ಷರಗಳು ಶಬ್ದಗಳ ಅಂತ್ಯದಲ್ಲಿ ಸೇರಿ ಅವುಗಳ ಅರ್ಥವನ್ನು ಬೇರೆ ಮಾಡುತ್ತವೆ. ರಾಮನು ನೋಡಿದನು; ರಾಮನನ್ನು ನೋಡಿದನು; ರಾಮನಿಂದ ನೋಡಿದನು. ಇಲ್ಲಿ ಅರ್ಥಭೇದವನ್ನು ತೋರಿಸುವುದಕ್ಕೆ ರಾಮ ಎಂಬ ಶಬ್ದದ ಕೊನೆಯಲ್ಲಿ ಬರೆದ ಅಕ್ಷರಗಳು

ISRT

ಯಾವುವು? ಅನು, ಅನ್ನು, ಇಂದ ಎಂಬಿವೇ. ಮಾಡುತ್ತಾರೆ, ಮಾಡುತ್ತೇವೆ, ಮಾಡುತ್ತೇನೆ. ಈ ಶಬ್ದಗಳಲ್ಲಿ ಕೂಡಾ ಅರ್ಥಭೇದವನ್ನು ತೋರಿಸುವುದಕ್ಕೆ ಆರೆ, ಏವೆ, ಏನೆ ಎಂಬೀ ಅಕ್ಷರಗಳು ಬಂದಿವೆ.

ಅರ್ಥವಿಶೇಷವನ್ನು ತೋರಿಸುವುದಕ್ಕೆ ಶಬ್ದಗಳ ತುದಿಯಲ್ಲಿ ಸೇರುವ ಅಕ್ಷರಕ್ಕೆ ಅಥವಾ ಅಕ್ಷರಗಳಿಗೆ ಪ್ರತ್ಯಯಗಳೆಂದು ಹೆಸರು. ಏ, ಊ, ಅನ್ನು, ಇಂದ, ಅಲ್ಲಿ, ಗೆ, ಆಳೆ, ಏವೆ, ಇಕೆ ಮೊದಲಾದುವುಗಳು ಪ್ರತ್ಯಯಗಳು.

ಪ್ರತ್ಯಯಗಳನ್ನು ಹಚ್ಚದೆ ಶಬ್ದವನ್ನು ಬರೆದರೆ, ಅಂಥ ಶಬ್ದಕ್ಕೆ ಪ್ರಕೃತಿ ಎನ್ನುತ್ತಾರೆ. ರಾಮ ಎಂಬುದು ಪ್ರಕೃತಿ, ಏಕೆಂದರೆ ಇದರ ಕೊನೆಯಲ್ಲಿ ಯಾವುದೊಂದು ಪ್ರತ್ಯಯವನ್ನು ಹಚ್ಚಲಿಲ್ಲ. ರಾಮನೋ, ರಾಮನೇ, ರಾಮನೂ, ರಾಮನನ್ನು, ರಾಮನಿಂದ, ರಾಮನಿಗೆ, ರಾಮನ, ರಾಮನಲ್ಲಿ ಎಂಬಲ್ಲಿ ಪ್ರತ್ಯಯಗಳು ಹಚ್ಚಿವೆ. ಮಾಡು ಎಂಬ ಶಬ್ದವು ಪ್ರಕೃತಿ; ಮಾಡುತ್ತೇನೆ, ಮಾಡುತ್ತೀ, ಮಾಡುತ್ತಾನೆ, ಮಾಡುತ್ತಾಳೆ, ಮಾಡುತ್ತದೆ, ಮಾಡುತ್ತೇವೆ, ಮಾಡುತ್ತೀರಿ, ಮಾಡುತ್ತಾರೆ, ಮಾಡಿ, ಮಾಡುವ, ಮಾಡುವುದು, ಮಾಡಿದ್ದು ಮೊದಲಾದುವುಗಳಲ್ಲಿ ಪ್ರತ್ಯಯಗಳು ಸೇರಿವೆ. ತಾಳು ಎಂಬುದು ಪ್ರಕೃತಿ; ತಾಳುವವ, ತಾಳುವವಳು, ತಾಳ್ಮೆ, ತಾಳದೆ ಎಂಬೀ ಶಬ್ದಗಳಲ್ಲಿ ಪ್ರತ್ಯಯಗಳು ಸೇರಿವೆ.

ಪ್ರತ್ಯಯಗಳನ್ನು ಸೇರಿಸಿದ ಶಬ್ದಕ್ಕೆ ಪದವೆಂದು ಹೆಸರು. ಹಣ ಎಂಬುದು ಪ್ರಕೃತಿ, ಗಾರ ಎಂಬುದು ಪ್ರತ್ಯಯ, ಹಣಗಾರ ಎಂಬುದು ಪದ. ಹೇಳು ಎಂಬುದು ಪ್ರಕೃತಿ, ಇಕೆ ಎಂಬುದು ಪ್ರತ್ಯಯ, ಹೇಳಿಕೆ ಎಂಬುದು ಪದ. ಕೇಳು ಎಂಬುದು ಪ್ರಕೃತಿ, ಉತ್ತ ಎಂಬುದು ಪ್ರತ್ಯಯ, ಕೇಳುತ್ತ ಎಂಬುದು ಪದ. ಮನುಷ್ಯ ಎಂಬುದು ಪ್ರಕೃತಿ, ಅರು ಎಂಬುದು ಪ್ರತ್ಯಯ, ಮನುಷ್ಯರು ಎಂಬುದು ಪದ. ಹುಡುಗ ಎಂಬುದು ಪ್ರಕೃತಿ, ಇ ಎಂಬುದು ಪ್ರತ್ಯಯ, ಹುಡುಗಿ ಎಂಬುದು ಪದ.

ಕ್ರಿಯಾಪದಗಳ ಕೊನೆಯಲ್ಲಿ ಪ್ರತ್ಯಯಗಳನ್ನು ಹಚ್ಚದೆ ಪ್ರಕೃತಿಯನ್ನೇ ಇಟ್ಟರೆ, ಆ ಪ್ರಕೃತಿಗೆ ಧಾತು ಎಂದು ಹೆಸರು. ಮಾಡುತ್ತಾನೆ – ಈ ಕ್ರಿಯಾಪದದಲ್ಲಿ ಪ್ರತ್ಯಯಗಳನ್ನು ಬಿಟ್ಟರೆ, ಉಳಿಯುವ ಮಾಡು ಎಂಬುದೇ ಧಾತು. ಕ್ರಿಯಾಪದದ ಮೂಲರೂಪಕ್ಕೆ ಧಾತು ಎಂದು ಹೆಸರು. ಹೋದನು, ಬರುವನು, ಬಾಳುವವನು, ಈ ಕ್ರಿಯಾಪದಗಳಲ್ಲಿ ಹೋಗು, ಬರು, ಬಾಳು ಎಂಬಿವೇ ಧಾತುಗಳು.

ISRT

25. ಪ್ರಶ್ನೆಗಳು.

ಕೆಳಗಿನ ವಾಕ್ಯಗಳ ಪ್ರತಿಯೊಂದು ಪದದಲ್ಲಿ ಪ್ರತ್ಯಯಗಳನ್ನು ತೋರಿಸಿರಿ; ಪ್ರಕೃತಿರೂಪವನ್ನು ಹೇಳಿರಿ; ಕ್ರಿಯಾಪದಗಳಿದ್ದರೆ, ಧಾತುವನ್ನು ಹೇಳಿರಿ:—

1. ಬಳೆಗಾರ ಕೃಷ್ಣನು ಬಳೆಗಳನ್ನು ಮಾರುತ್ತಾನೆ. 2. ಹೆಂಗಸರು ಕೊಡಗಳಿಂದ ನೀರನ್ನು ಸೇದುವರು. 3. ಗಾಡಿಗಾರರು ಎತ್ತುಗಳನ್ನು ದಯೆಯಿಂದ ನೋಡುವರು. 4. ಬೇಟೆಗಾರರು ಕಾಡಿನಲ್ಲಿ ಹುಲಿಗಳನ್ನೂ ಸಿಂಹಗಳನ್ನೂ ಕೊಲ್ಲುತ್ತಾರೆ. 5. ಪ್ರಜೆಗಳು ಅರಸರನ್ನು ನೋಡಲು ಕಾಣಿಕೆಯನ್ನು ಕೊಂಡುಹೋಗುತ್ತಾರೆ. 6. ವೈದ ಬಾಯಿಗೆ ಹೊಯ್ದು ಪೆಟ್ಟೀ? 7. ತಂದೆಯು ಮಗನನ್ನೂ ಮಗಳನ್ನೂ ಶಾಲೆಗೆ ಕಳುಹಿಸಿದನು. 8. ಉಪಾಧ್ಯಾಯರು ಹುಡುಗರಿಂದ ಪಾಠವನ್ನು ಬರೆಯಿಸಿದರು.

ಪರೀಕ್ಷೆ.

ಶಬ್ದವೆಂದರೇನು? ಪ್ರಕೃತಿಯೆಂದರೇನು? ಪ್ರತ್ಯಯವೆಂದರೇನು? ಹೇಳು, ಬರು, ಹುಡುಗ, ಜನ, ತುಂಬು—ಈ ಶಬ್ದಗಳ ಮೇಲೆ ಯಾವುದಾದರೂ ಪ್ರತ್ಯಯಗಳನ್ನು ಹಚ್ಚಿರಿ. ತಾಳ್ಮೆ, ನಗೆ, ಬೆಳಿಸು, ಉಣ್ಣಿಸು, ದಾರಿಗ, ತಿಳಿವು, ಯಜಮಾನಿ—ಇಲ್ಲಿ ತೋರುವ ಪ್ರತ್ಯಯಗಳು ಯಾವುವು? ಪದವೆಂದರೇನು? ಪದಗಳನ್ನು ಹೇಗೆ ಮಾಡುವರು? ಧಾತು ಎಂದರೇನು? ಕೆಲವು ಧಾತುಗಳನ್ನು ಹೇಳು. ಕೆಲವು ಪ್ರತ್ಯಯಗಳನ್ನು ಹೇಳು. ಪ್ರಕೃತಿಗೆ ಉದಾಹರಣೆಯನ್ನು ಕೊಡು. ಪ್ರಕೃತಿಗೂ ಧಾತುವಿಗೂ ಭೇದವೇನು? ಪದಕ್ಕೂ ಶಬ್ದಕ್ಕೂ ಭೇದವೇನು?

Gender

17ನೆಯ ಪಾಠ.—ಲಿಂಗ.

1. ರಾಮನು ಪಾಠಶಾಲೆಗೆ ಹೋಗುತ್ತಾನೆ; ಅವನು ಒಳ್ಳೆಯ ಹುಡುಗನು. 2. ಸೀತೆಯು ಜನಕರಾಯನ ಮಗಳು; ಅವಳು ರಾಮನೊಡನೆ ವನಕ್ಕೆ ಹೋದಳು. 3. ಕುದುರೆಯು ಉಪಯೋಗವಾದ ಪ್ರಾಣಿ; ಅದು ಬಂಡಿಯನ್ನು ಎಳೆಯುತ್ತದೆ.

ಮೇಲಿನ ವಾಕ್ಯಗಳಲ್ಲಿರುವ ಅವನು, ಅವಳು, ಅದು ಎಂಬೀ ಸರ್ವನಾಮಗಳು ಯಾವ ನಾಮಪದಗಳ ಬದಲಾಗಿ ಪ್ರಯೋಗವಾಗಿವೆ? ಅವನು ಎಂಬುದು ರಾಮನೆಂದು ಹೇಳುವುದಕ್ಕೂ, ಅವಳು ಎಂಬುದು ಸೀತೆಯೆಂದು ಹೇಳುವುದಕ್ಕೂ, ಅದು ಎಂಬುದು ಕುದುರೆಯೆಂದು ಹೇಳುವುದಕ್ಕೂ ಪ್ರಯೋಗವಾಗಿವೆ. ಯಾವ ನಾಮಪದವನ್ನು ಕುರಿತು ಅವನು ಎಂದು ನಾವು

ISRT

ಪ್ರಯೋಗಿಸುತ್ತೇವೋ ಆ ನಾಮಪದವು ಪುಲ್ಲಿಂಗವಾಗಿದೆ ಎಂದು ಹೇಳುತ್ತೇವೆ. ಅವನು ಹುಡುಗನು, ಅವನು ರಾಮನ ತಂದೆ ಮೊದಲಾದ ವಾಕ್ಯಗಳಲ್ಲಿ ಹುಡುಗ, ತಂದೆ ಎಂಬ ಪದಗಳ ಬದಲಾಗಿ ಅವನು ಎಂಬ ಪದವನ್ನು ನಾವು ಇಡಬಹುದು. ಆದ್ದರಿಂದ ಹುಡುಗ, ತಂದೆ ಎಂಬ ಪದಗಳು ಪುಲ್ಲಿಂಗವೆಂದು ತಿಳಿಯಬೇಕು.

ಕನ್ನಡದಲ್ಲಿ ಪುರುಷರನ್ನು ಹೇಳುವ ಹೆಸರುಗಳೆಲ್ಲಾ ಪುಲ್ಲಿಂಗಗಳು— ತಂದೆ, ರಾಮು, ಅಚ್ಚಬ್ಬು, ದಾವೀದ, ಉಪಾಧ್ಯಾಯ, ಗಾಡಿಗಾರ ಮೊದಲಾದ ಹೆಸರುಗಳು ಪುಲ್ಲಿಂಗವಾಗಿವೆ.

ಯಾವ ನಾಮಪದವನ್ನು ಕುರಿತು ಅವಳು ಎಂದು ಹೇಳುವೆವೋ ಆ ನಾಮಪದವು ಸ್ತ್ರೀಲಿಂಗವಾಗಿದೆ. ಸೀತೆ, ತಾಯಿ, ತಂಗಿ, ಅಕ್ಕ, ಯಜಮಾನಿ, ಕುಮಾರಿ ಮೊದಲಾದ ಪದಗಳು ಸ್ತ್ರೀಲಿಂಗವಾಗಿವೆ. ಸ್ತ್ರೀಯರನ್ನು ಹೇಳುವ ಹೆಸರುಗಳೆಲ್ಲಾ ಕನ್ನಡದಲ್ಲಿ ಸ್ತ್ರೀಲಿಂಗವಾಗಿವೆ.

ಯಾವ ನಾಮಪದವನ್ನು ಕುರಿತು ಅದು ಎಂದು ಹೇಳುತ್ತೇವೋ ಆ ನಾಮಪದವು ನಪುಂಸಕಲಿಂಗವಾಗಿದೆ. ಕಲ್ಲು, ಮಣ್ಣು, ಮನೆ, ಕಾಲೆ, ಕುದುರೆ, ಮರ, ಹಾವು, ದಯೆ ಮೊದಲಾದ ನಾಮಪದಗಳು ನಪುಂಸಕಲಿಂಗವಾಗಿವೆ. ಗಂಡೂ ಅಲ್ಲದ ಹೆಣ್ಣೂ ಅಲ್ಲದ ವಸ್ತುಗಳ ಹೆಸರುಗಳು ಕನ್ನಡದಲ್ಲಿ ನಪುಂಸಕಲಿಂಗವಾಗಿವೆ.

26. ಪ್ರಶ್ನೆಗಳು.

ಕೆಳಗಿನ ನಾಮಪದಗಳ ಲಿಂಗಗಳನ್ನು ಹೇಳಿರಿ; ನೀವು ಹೇಳುವುದಕ್ಕೆ ಕಾರಣವನ್ನೂ ಕೊಡಿರಿ:—

ಮುದುಕಿ, ಬಾಲಕ, ತಂಗಿ, ಕಾಗದ, ತೋಟ, ತಮ್ಮ, ಬ್ರಾಹ್ಮಣ, ಸುಂದರಿ, ಪುಸ್ತಕ, ಬೆಣ್ಣೆ, ಅಗಸಗಿತಿ, ಹೆಗ್ಗಡೆ, ಹೆಡ್ಡ, ಅರಸು, ಎಮ್ಮೆ, ಹುಂಜ, ಅಣ್ಣ, ಅಜ್ಜಿ, ಮುದ್ದಣ್ಣ, ಗದ್ದೆ, ಹೆಡ್ಡಿ, ಎತ್ತು, ಬಳೆಗಾರ, ಚಕ್ರವರ್ತಿನಿ, ಬೀಗ, ದೇವಿ, ಮಾವ, ಹೊಲತಿ, ಮನೆ, ನ್ಯಾಯ, ನೀರು, ಗೃಹಸ್ಥ, ರಾಣಿ, ಸಿಂಹ, ಮಂಗ, ಲ್ಯೂಸಿ, ರಾಧೆ, ನೂರ್ಜಿಹಾನ್.

ನಾನು, ನಾವು, ನೀನು, ನೀವು, ತಾನು, ತಾವು ಎಂಬೀ ಸರ್ವನಾಮಗಳು ಎಲ್ಲರ ಹೆಸರುಗಳ ಬದಲಾಗಿ ಬರುತ್ತವೆ. ರಾಮನು ಹೇಳುತ್ತಾನೆ—"ಅಯ್ಯಾ, ನಾನು ಬಂಡಿಯನ್ನು ಎಳೆಯುತ್ತೇನೆ." ಇಲ್ಲಿ ನಾನು ಎಂಬುದು ರಾಮನು ಎಂಬ ಹೆಸರಿನ

ISRT

ಬದಲಾಗಿ ಪ್ರಯೋಗವಾಗಿದೆ. ಸುಂದರಿಯು ಹೇಳುತ್ತಾಳೆ—"ಅಯ್ಯಾ, ನಾನು ಬಂಡಿಯನ್ನು ಎಳೆಯುತ್ತೇನೆ." ಇಲ್ಲಿ ನಾನು ಎಂಬುದು ಸುಂದರಿ ಎಂಬ ಹೆಸರನ್ನು ಕುರಿತು ಹೇಳಿದ್ದಾಗಿದೆ. ಕುದುರೆಯು ಹೇಳುತ್ತದೆ—"ಅಯ್ಯಾ, ನಾನು ಬಂಡಿಯನ್ನು ಎಳೆಯುತ್ತೇನೆ." ಇಲ್ಲಿ ನಾನು ಎಂಬುದು ಕುದುರೆಯನ್ನು ಕುರಿತು ಹೇಳಿದ್ದಾಗಿದೆ.

ಮೇಲೆ ಹೇಳಿದ ಹಾಗೆ ವಿಚಾರಿಸಿದರೆ, ನಾನು, ನೀನು, ನಾವು, ನೀವು ಎಂಬೀ ಸರ್ವನಾಮಗಳು ಗಂಡಸರ ವಿಷಯವಾಗಿಯೂ ಹೆಂಗಸರ ವಿಷಯವಾಗಿಯೂ, ಗಂಡೂ ಹೆಣ್ಣೂ ಅಲ್ಲದ ವಸ್ತುಗಳ ವಿಷಯವಾಗಿಯೂ ಪ್ರಯೋಗವಾಗುವುದರಿಂದ ಅವಕ್ಕೆ ಲಿಂಗವಿಲ್ಲವೆಂದು ಹೇಳಬಹುದು. ಇದರಂತೆಯೇ ಆಕಾರು ಎಂಬುದಕ್ಕೆ ಲಿಂಗವಿಲ್ಲವೆಂದು ಹೇಳಬೇಕು. ಅವನು, ಅವಳು, ಅದು, ಅವರು, ಅವುಗಳು ಎಂಬಿವುಗಳಿಗೆ ಮಾತ್ರವೇ ಲಿಂಗಭೇದವಿರುವುದು.

ವಸ್ತುಗಳಲ್ಲಿ ಗಂಡು ಪುಲ್ಲಿಂಗವೆಂದೂ, ಹೆಣ್ಣು ಸ್ತ್ರೀಲಿಂಗವೆಂದೂ ಹೇಳುವುದು ಸರಿಯಲ್ಲ. ಕೋಣನು ಗಂಡಾದರೂ ಕೋಣ ಎಂಬ ಹೆಸರು ಕನ್ನಡದಲ್ಲಿ ನಪುಂಸಕಲಿಂಗವೇ ಆಗಿದೆ. ಹಾಗೆಯೇ ದನ ಎಂಬುದು ಹೆಣ್ಣಾದರೂ ದನ ಎಂಬ ನಾಮಪದವು ಕನ್ನಡದಲ್ಲಿ ನಪುಂಸಕಲಿಂಗವೆನ್ನಬೇಕು. ಇದು ಏತಕ್ಕೆಂದು ನಿಮಗೆ ಹೇಳುವೆನು. ಯಾವ ನಾಮಪದವನ್ನು ಕುರಿತು ಅವನು ಎಂದು ಹೇಳುತ್ತೇವೋ ಆ ನಾಮಪದವು ಪುಲ್ಲಿಂಗವಾಗಿದೆ. ಕೋಣನು ಗದ್ದೆಯನ್ನು ಉಳುತ್ತದೆ; ಅದು ಹುಲ್ಲನ್ನು ತಿನ್ನುತ್ತದೆ. ಇಲ್ಲಿ ಎರಡನೆಯ ವಾಕ್ಯದಲ್ಲಿ ಕೋಣವನ್ನು ಕುರಿತು ಅವನು ಎಂದು ನಾವು ಹೇಳುವುದೇ ಇಲ್ಲ. ಅದೇ ಪ್ರಕಾರ ವಿಚಾರಿಸಿದರೆ, ಕುರಿ, ಬೆಕ್ಕು, ಎಮ್ಮೆ, ಆಕಳು, ಆಡು, ಈ ಪ್ರಾಣಿಗಳು ಹೆಣ್ಣಾಗಿದ್ದರೂ ಆ ಹೆಸರುಗಳು ಕನ್ನಡ ವ್ಯಾಕರಣದಲ್ಲಿ ನಪುಂಸಕಲಿಂಗಗಳಾಗುವುವು.

ಆದರೆ ಸೂರ್ಯನು ಉದಯಿಸುತ್ತಾನೆ ಎಂಬಲ್ಲಿ ಸೂರ್ಯನನ್ನು ಕುರಿತು ಅವನು ಎಂದು ಉಪಯೋಗಿಸುವುದಾದರೆ, ಸೂರ್ಯನು ಎಂಬ ನಾಮಪದವು ಪುಲ್ಲಿಂಗವೆಂದು ತಿಳಿಯಬೇಕು. ಮಗು ಅಳುತ್ತದೆ ಎಂಬಲ್ಲಿ ಮಗುವನ್ನು ಕುರಿತು ಅದು ಎಂದು ಹೇಳುವುದಾದರೆ, ಮಗು ಎಂಬ ಪದವು ನಪುಂಸಕಲಿಂಗವೆಂದೂ, ಅವನು ಎಂದು ಹೇಳುವುದಾದರೆ ಪುಲ್ಲಿಂಗವೆಂದೂ, ಅವಳು ಎಂದು ಹೇಳುವುದಾದರೆ ಸ್ತ್ರೀಲಿಂಗವೆಂದೂ ತಿಳಿಯಬೇಕು.

ISRT

ಪರೀಕ್ಷೆ.

ಲಿಂಗಗಳು ಎಷ್ಟು ವಿಧ? ಪುಲ್ಲಿಂಗವೆಂದರೇನು? ಸ್ತ್ರೀಲಿಂಗವೆಂದರೇನು? ನಾಮಪದವು ಯಾವ ಲಿಂಗದಲ್ಲಿದೆ ಎಂದು ಹೇಗೆ ತಿಳಿಯಬಹುದು? ಪುಲ್ಲಿಂಗವಾಗಿರುವ ಕೆಲವು ನಾಮಗಳಿಗೆ ಉದಾಹರಣೆಗಳನ್ನು ಕೊಡು. ನಾನು, ನೀನು ಎಂಬ ಸರ್ವನಾಮಗಳಿಗೆ ಏಕೆ ಲಿಂಗಭೇದವಿಲ್ಲ? ಕೋಣ, ಎತ್ತು, ಟಗರು, ಈ ಪದಗಳು ಸೂಚಿಸುವ ವಸ್ತುಗಳು ಗಂಡಾಗಿದ್ದರೂ, ಅವುಗಳಿಗೆ ಪುಲ್ಲಿಂಗವು ಏಕೆ ಬರುವುದಿಲ್ಲ? ಸೂರ್ಯ, ಚಂದ್ರ, ಆಳು, ಮಗು, ದೇವಿ, ತೊತ್ತು, ಇವು ಯಾವ ಲಿಂಗದಲ್ಲಿವೆ ಎಂದು ಹೇಳಿರಿ; ಇದಕ್ಕೆ ಕಾರಣವನ್ನೂ ಕೊಡಿರಿ.

Number.

18ನೆಯ ಪಾಠ.—ವಚನ.

1. ಆ ಕುದುರೆಯನ್ನು ನೋಡು. 2. ಆ ಕುದುರೆಗಳನ್ನು ನೋಡು.

ಮೇಲಿನ ಎರಡು ವಾಕ್ಯಗಳಲ್ಲಿ ಭೇದವೇನು? ಮೊದಲನೆಯ ವಾಕ್ಯದಲ್ಲಿ ಒಂದೇ ಕುದುರೆಯೆಂದೂ, ಇನ್ನೊಂದು ವಾಕ್ಯದಲ್ಲಿ ಒಂದಕ್ಕಿಂತ ಹೆಚ್ಚು ಕುದುರೆಗಳೆಂದೂ ಹೇಳಬರುತ್ತದೆ. ವಸ್ತುಗಳ ಸಂಖ್ಯೆಗೆ ವಚನವೆಂದು ಹೇಳುತ್ತಾರೆ. ವಸ್ತುವು ಒಂದೇಯಾಗಿದ್ದರೆ, ಅದನ್ನು ಹೇಳುವ ನಾಮವು ಏಕವಚನದಲ್ಲಿ ಇರುತ್ತದೆಂದೂ, ವಸ್ತುವು ಒಂದಕ್ಕಿಂತ ಹೆಚ್ಚಿದ್ದರೆ, ಅದನ್ನು ಹೇಳುವ ನಾಮವು ಬಹುವಚನದಲ್ಲಿ ಇರುತ್ತದೆಂದೂ ನಾವು ಹೇಳುತ್ತೇವೆ. ಮೊದಲನೆಯ ವಾಕ್ಯದಲ್ಲಿ ಕುದುರೆ ಎಂಬ ಪದವು ಏಕವಚನದಲ್ಲಿದೆ; ಎರಡನೆಯದರಲ್ಲಿ ಕುದುರೆಗಳು ಎಂಬ ಪದವು ಬಹುವಚನದಲ್ಲಿದೆ.

ಏಕವಚನವು ಒಂದೇ ವಸ್ತುವನ್ನು ಹೇಳುತ್ತದೆ, ಬಹುವಚನವು ಅನೇಕ ವಸ್ತುಗಳನ್ನು ಹೇಳುತ್ತದೆ.

ಏಕವಚನ:	ಬಹುವಚನ:
ಮರ	ಮರಗಳು
ಹುಡುಗ	ಹುಡುಗರು
ಅಣ್ಣ	ಅಣ್ಣಂದಿರು
ಜನ	ಜನರು

ISRT

ಮೇಲಿನ ಉದಾಹರಣೆಗಳಲ್ಲಿ ನಾವು ಏಕವಚನದಿಂದ ಬಹುವಚನವನ್ನು ಹೇಗೆ ಮಾಡಿದೆವು? ಮರ ಎಂಬ ಏಕವಚನದಿಂದ ಮರಗಳು ಎಂಬ ಬಹುವಚನವು ಗಳು ಎಂಬ ಅಕ್ಷರಗಳನ್ನು ಹಚ್ಚುವುದರಿಂದಾಯಿತು. ಪ್ರತ್ಯಯವೆಂದರೆ ಏನೆಂದು ನೀನು 16ನೆಯ ಪಾಠದಲ್ಲಿ ಓದಿದ್ದೀಯೆ. ಗಳು ಎಂಬುದು ಬಹುವಚನದ ಪ್ರತ್ಯಯ. ಹೀಗೆಯೇ ಹುಡುಗ ಎಂಬುದಕ್ಕೆ ಅರು ಪ್ರತ್ಯಯವನ್ನು ಹಚ್ಚಿ, ಹುಡುಗರು ಎಂಬ ಬಹುವಚನಪದವಾಯಿತು. ಅಣ್ಣ ಎಂಬ ಶಬ್ದಕ್ಕೆ ಅಂದಿರು ಎಂಬ ಪ್ರತ್ಯಯವನ್ನು ಅಂತ್ಯದಲ್ಲಿ ಸೇರಿಸಿ, ಅಣ್ಣಂದಿರು ಎಂಬ ಬಹುವಚನವಾಯಿತು. ಏಕವಚನದಿಂದ ಬಹುವಚನ ಮಾಡುವುದಕ್ಕೆ ಕೆಲವು ಪ್ರತ್ಯಯಗಳು ಆವಶ್ಯಕವಾಗಿರುವುವು. ಇವುಗಳಿಗೆ ಬಹುವಚನ ಪ್ರತ್ಯಯಗಳೆಂದು ಹೆಸರು. ಕನ್ನಡದಲ್ಲಿ ಗಳು, ಅರು, ಅಂದಿರು, ಅವರು, ಅವರುಗಳು ಎಂಬಿವು ಬಹುವಚನಪ್ರತ್ಯಯಗಳು. ಇವನ್ನು ಏಕವಚನಪದಗಳ ಕೊನೆಯಲ್ಲಿ ಸೇರಿಸಿದರೆ, ಆ ಪದಗಳು ಬಹುವಚನಗಳಾಗುವುದರಿಂದಲೇ ಅವುಗಳಿಗೆ ಬಹುವಚನಪ್ರತ್ಯಯಗಳೆಂದು ಹೆಸರು ಬಂದಿದೆ.

ಗಳು ಎಂಬ ಪ್ರತ್ಯಯ.

ಏಕವಚನ:	ಬಹುವಚನ:
ಗಿಡ	ಗಿಡಗಳು.
ಮನೆ	ಮನೆಗಳು.
ಕುದುರೆ	ಕುದುರೆಗಳು.
ದೇಶ	ದೇಶಗಳು.
ಬಟ್ಟೆ	ಬಟ್ಟೆಗಳು.

ಅರು ಎಂಬ ಪ್ರತ್ಯಯ.

ಏಕವಚನ:	ಬಹುವಚನ:
ದೇವಿ	ದೇವಿಯರು.
ಅರಸು	ಅರಸರು.
ಹುಡುಗ	ಹುಡುಗರು.
ಹೆಂಗಸು	ಹೆಂಗಸರು.
ಅತ್ತೆ	ಅತ್ತೆಯರು.

ಸರ್ವನಾಮಗಳಿಗೂ ಏಕವಚನ ಬಹುವಚನಗಳೆಂಬ ಭೇದವುಂಟು. ನಾನು ಎಂದು ಹೇಳುವಾಗ ಮಾತಾಡುವವನು ಒಬ್ಬನನ್ನೇ ಕುರಿತು ಹೇಳುವುದರಿಂದ ಏಕವಚನವಾಗುವುದು; ನಾವು ಎಂದು ಹೇಳಲು ಬಹುವಚನವಾಗುವುದು; ಹೀಗೆಯೇ ನೀನು—ನೀವು, ಅವನು—ಅವರು, ಅವಳು—ಅವರು, ಅದು—ಅವು, ಅವುಗಳು; ತಾನು—ತಾವು ಮೊದಲಾದ ಪದಗಳಲ್ಲಿ ಏಕವಚನ ಬಹುವಚನ

ISRT

ಭೇದವನ್ನು ತಿಳಿಯಬೇಕು. ಯಾರು ಎಂಬ ಸರ್ವನಾಮವು ಯಾವಾಗಲೂ ಬಹುವಚನದಲ್ಲೇ ಇರುವುದು.

27. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ಏಕವಚನಪದಗಳಿದ್ದರೆ, ಅವುಗಳ ಬಹುವಚನಗಳನ್ನು ಹೇಳಿರಿ; ಬಹುವಚನಪದಗಳಿದ್ದರೆ, ಏಕವಚನಗಳನ್ನು ಹೇಳಿರಿ:—

1. ನಾಯಿಗೆ ಮನುಷ್ಯನ ಸೇವಕನೆಂದು ಹೆಸರು. 2. ನನ್ನ ಅಣ್ಣನು ಮನೆಗೆ ತಿಂಗಳಿಗೆ ಒಂದು ಸರ್ತಿ ಬರುತ್ತಾನೆ. 3. ಜನರು ಮಕ್ಕಳನ್ನು ಪಾಠಕಾಲೆಗೆ ಕಳುಹಿಸುವುದು ಒಳ್ಳೆಯದು. 4. ಮನೆಯನ್ನು ಕಟ್ಟುವಾಗ ಇಟ್ಟಿಗೆ, ಕಲ್ಲು, ಕದಗಳು, ಕಿಟಿಕಿಗಳು, ಉಪ್ಪಾರರು, ಬಡಗಿಯವರು, ಕಲ್ಲುಕುಟ್ಟಿಗರು ಬೇಕಾಗುವರು. 5. ಅರಸನ ಹೆಂಡತಿಗೆ ರಾಣಿ ಎನ್ನುವರು; ಅರಸಿ ಎಂದೂ ಹೇಳುವುದುಂಟು. 6. ಗದ್ದೆಯಲ್ಲಿ ಕಳೆಗಳು ಎದ್ದರೆ, ಒಕ್ಕಲಿಗನು ಅವುಗಳನ್ನು ಕಿತ್ತುಬಿಡುತ್ತಾನೆ. 7. ಗುಲಾಬಿಯು ಹೂ ಶೀತ ದೇಶಗಳಲ್ಲಿ ವಾಸಮಾಡುವ ಮಕ್ಕಳ ಕೆನ್ನೆಗಳಲ್ಲಿ ಕಾಣುವ ಬಣ್ಣದ್ದು. 8. ಹಂಸವು ಜಲಪಕ್ಷಿಗಳಲ್ಲೆಲ್ಲಾ ದೊಡ್ಡದು.

ಪರೀಕ್ಷೆ.

ವಚನವೆಂದರೇನು? ವಚನಗಳು ಎಷ್ಟು ವಿಧ? ಏಕವಚನವು ಏನನ್ನು ಹೇಳುತ್ತದೆ? ಬಹುವಚನವು ಏನನ್ನು ಹೇಳುತ್ತದೆ? ನಾಮಪದವು ಏಕವಚನದಲ್ಲಿ ಇದೆಯೋ ಬಹುವಚನದಲ್ಲಿ ಇದೆಯೋ ಎಂದು ಹೇಗೆ ತಿಳಿಯಬಹುದು? ಏಕವಚನದಿಂದ ಬಹುವಚನವನ್ನು ಹೇಗೆ ಮಾಡುವುದು? ಬಹುವಚನಪ್ರತ್ಯಯಗಳು ಯಾವುವು? ಕೆರೆ, ಬೀಗ, ಮಂತ್ರಿ, ಮಗು, ರಾಣಿ, ತಾನು, ಹುಡುಗ, ಪುಸ್ತಕ, ಇವುಗಳ ಬಹುವಚನಗಳನ್ನು ಹೇಳು.

Case.

19ನೆಯ ಪಾಠ.—ವಿಭಕ್ತಿ.

ವಾಕ್ಯವನ್ನು ಹೇಳುವಾಗ ಅದರಲ್ಲಿರುವ ಪದಗಳಿಗೆ ಪರಸ್ಪರ ಸಂಬಂಧವಿರಬೇಕು. ರಾಮನು ಕೃಷ್ಣನ ಪುಸ್ತಕವನ್ನು ಕೃಷ್ಣನಿಗೆ ಕೊಟ್ಟನು. ಈ ವಾಕ್ಯದಲ್ಲಿ ರಾಮನು ಎಂಬ ನಾಮಪದವು ಆಖ್ಯೆಯಾಗಿದ್ದು ಕೊಟ್ಟನು ಎಂಬ ಆಖ್ಯಾತಕ್ಕೆ ಸೇರಿರುತ್ತದೆ. ಕೃಷ್ಣನ ಎಂಬ ಪದದ ಅರ್ಥವು ಪೂರ್ಣವಾಗಬೇಕಾದರೆ, ಅದು ಪುಸ್ತಕವನ್ನು ಎಂಬ ಪದಕ್ಕೆ ಸೇರಿರುತ್ತದೆ ಎಂದು ತಿಳಿಯಬೇಕು. ಪುಸ್ತಕವನ್ನು

ISRT

ಮತ್ತು ಕೃಷ್ಣನಿಗೆ ಎಂಬೀ ಪದಗಳು ಕೊಟ್ಟನು ಎಂಬ ಪದಕ್ಕೆ ಸಂಬಂಧಿಸುತ್ತವೆ. ಈ ವಾಕ್ಯದಲ್ಲಿ ಕೃಷ್ಣನ ಎಂಬ ನಾಮಪದವು ಪುಸ್ತಕವನ್ನು ಎಂಬ ನಾಮಪದಕ್ಕೆ ಸಂಬಂಧಿಸುತ್ತದೆಂದೂ, ಕೃಷ್ಣನಿಗೆ ಎಂಬ ನಾಮಪದವು ಕೊಟ್ಟನು ಎಂಬ ಕ್ರಿಯಾಪದಕ್ಕೆ ಅನ್ವಯಿಸುವುದೆಂದೂ ನಾವು ತಿಳಿಯುತ್ತೇವೆ.

ವಾಕ್ಯದಲ್ಲಿರುವ ನಾಮಪದವು ಮತ್ತೊಂದು ನಾಮಪದಕ್ಕೂ ಅಥವಾ ಕ್ರಿಯಾಪದಕ್ಕೂ ಸೇರುತ್ತದೆಂದು ಮೇಲಿನ ಉದಾಹರಣೆಯಿಂದ ನೀವು ತಿಳಿದಿರಷ್ಟೆ. ಇಂಥ ಸಂಬಂಧವನ್ನು ತೋರಿಸುವುದಕ್ಕೆ ರಾಮ ಎಂಬ ನಾಮಪದದಲ್ಲಿ ರಾಮನು, ರಾಮನನ್ನು, ರಾಮನಿಂದ, ರಾಮನಿಗೆ, ರಾಮನ, ರಾಮನಲ್ಲಿ ಎಂಬ ನಾನಾ ರೂಪಭೇದಗಳಾಗುವುವು. ವಾಕ್ಯದಲ್ಲಿರುವ ನಾಮಪದವಾಗಲಿ ಸರ್ವನಾಮವಾಗಲಿ ಮತ್ತೊಂದು ನಾಮಪದಕ್ಕೆ ಅಥವಾ ಕ್ರಿಯಾಪದಕ್ಕೆ ಸಂಬಂಧಿಸಿರುತ್ತದೆಂದು ತೋರಿಸುವುದಕ್ಕೆ ಅವುಗಳಲ್ಲಿ ಆಗುವ ರೂಪಭೇದಕ್ಕೆ ವಿಭಕ್ತಿಯೆಂದು ಹೆಸರು.

ಈ ರೂಪಭೇದಗಳನ್ನು ನಾವು ಹೇಗೆ ತೋರಿಸುತ್ತೇವೆ? ನಾಮಗಳ ಪ್ರಕೃತಿಯ ಕೊನೆಯಲ್ಲಿ ಪ್ರತ್ಯಯಗಳನ್ನು ಹಚ್ಚಿ ಈ ರೂಪಭೇದಗಳನ್ನು ತೋರಿಸುತ್ತೇವೆ: ರಾಮನು ಬಂದನು; ರಾಮನನ್ನು ಕರೆದನು; ರಾಮನಿಂದ ಪುಸ್ತಕವನ್ನು ಕೊಂಡನು; ರಾಮನಿಗೆ ಪುಸ್ತಕವನ್ನು ಕೊಟ್ಟನು; ರಾಮನ ಪುಸ್ತಕವನ್ನು ಕೊಟ್ಟೆನು; ರಾಮನಲ್ಲಿ ನನಗೆ ಪ್ರೀತಿಯುಂಟು; ರಾಮನೇ, ಇಲ್ಲಿ ಬಾ!

ಕನ್ನಡದಲ್ಲಿ ಈ ರೂಪಭೇದಗಳು ಏಳು ವಿಧವಾಗಿವೆ. ಇವು ಕ್ರಮ ಪ್ರಕಾರವಾಗಿ ಒಂದರಿಂದ ಏಳರ ವರೆಗೆ ಇರುವುದರಿಂದ ಇವುಗಳಿಗೆ ಪ್ರಥಮೆ (ಒಂದನೆಯ), ದ್ವಿತೀಯೆ (ಎರಡನೆಯ), ತೃತೀಯೆ (ಮೂರನೆಯ), ಚತುರ್ಥಿ (ನಾಲ್ಕನೆಯ), ಪಂಚಮಿ (ಐದನೆಯ), ಷಷ್ಠಿ (ಆರನೆಯ), ಸಪ್ತಮಿ (ಏಳನೆಯ) ಎಂಬ ಹೆಸರುಗಳಿವೆ. ಇವು ಏಳು ವಿಭಕ್ತಿಗಳು ಅಲ್ಲದೆ ಯಾರೊಬ್ಬರನ್ನು ಕರೆಯುವುದರಲ್ಲಿ ಪ್ರಯೋಗಿಸುವ ವಿಭಕ್ತಿಯೊಂದುಂಟು. ರಾಮನೇ ಬಾ! ಹುಡುಗನೇ ಹೋಗು! ಮಗುವೇ ಕಲಿ! ಈ ವಿಭಕ್ತಿಯು ಮತ್ತೊಬ್ಬರನ್ನು ಕರೆಯುವುದರಲ್ಲಿ ಪ್ರಯೋಗಿಸಲ್ಪಡುವುದರಿಂದ ಇದಕ್ಕೆ ಸಂಬೋಧನೆಯೆಂದು ಹೆಸರು. ವಿಭಕ್ತಿಗಳ ಹೆಸರುಗಳನ್ನೂ ಅವುಗಳ ಪ್ರತ್ಯಯಗಳನ್ನೂ ಕೆಳಗೆ ತೋರಿಸಿದ ಪಟ್ಟಿಯದಿಂದ ಕಲಿತುಕೊಳ್ಳಿರಿ:—

ISRT

ಪ್ರಕೃತಿ—ರಾಮ.

ಅರ್ಥ	ವಿಭಕ್ತಿಗಳ ಹೆಸರು	ಪ್ರತ್ಯಯಗಳು	ವಿಭಕ್ತಿಮಾಲೆ •
1	ಪ್ರಥಮೆ	ಉ	ರಾಮನು
2	ದ್ವಿತೀಯೆ	ಅನ್ನು	ರಾಮನನ್ನು
3	ತೃತೀಯೆ	ಇಂದ	ರಾಮನಿಂದ
4	ಚತುರ್ಥಿ	ಗೆ, ಕ್ಕೆ	ರಾಮನಿಗೆ
5	ಪಂಚಮಿ	ದೆಸೆಯಿಂದ	ರಾಮನ ದೆಸೆಯಿಂದ
6	ಷಷ್ಠಿ	ಅ	ರಾಮನ
7	ಸಪ್ತಮಿ	ಅಲ್ಲಿ	ರಾಮನಲ್ಲಿ
	ಸಂಬೋಧನೆ	ಆ, ಏ	ರಾಮಾ, ರಾಮನೇ

ಮೇಲಿನ ಪಟ್ಟಿಯವನ್ನು ಓದಿದರೆ, "ರಾಮನ ದೆಸೆಯಿಂದ" ಎಂಬ ವಿಭಕ್ತಿಯು ಕನ್ನಡದಲ್ಲಿ ಪ್ರತ್ಯಯವನ್ನು ಹಚ್ಚಿ ಆಗುವುದಿಲ್ಲ, ಅದರಲ್ಲಿ ಎರಡು ಪದಗಳು ಸೇರುತ್ತವೆಂದು ತಿಳಿಯಬಹುದು. ಕನ್ನಡದಲ್ಲಿ ಪಂಚಮಿವಿಭಕ್ತಿಯ ಅರ್ಥವನ್ನು ತೃತೀಯಾವಿಭಕ್ತಿಯು ಹೇಳುವುದರಿಂದ ಅದನ್ನು ವಾಡಿಕೆಯಾಗಿ ಬಿಟ್ಟುಬಿಡುತ್ತಾರೆ.

ರಾಮ ಎಂಬ ಪ್ರಕೃತಿಯ ಮೇಲೆ ಅನ್ನು ಪ್ರತ್ಯಯವನ್ನು ಹಚ್ಚಿದರೆ, ರಾಮನನ್ನು ಎಂದು ಹೇಗಾಗುತ್ತದೆಂದು ನೀನು ಮುಂದೆ ತಿಳಿಯುವೆ. ಹಾಗೆಯೇ ಮರ ಎಂಬುದಕ್ಕೆ ಅನ್ನು ಪ್ರತ್ಯಯವನ್ನು ಹಚ್ಚಿದರೆ, ಮರವನ್ನು ಎಂದು ಆಗುವುದಲ್ಲದೆ ಮರನ್ನು ಎಂದು ಹೇಳಲಾಗದು. ಈ ವಿಷಯವು ಇಲ್ಲಿ ವಿಸ್ತಾರವಾಗಿ ಹೇಳಬರುವುದಿಲ್ಲ. ನೀನು ಇನ್ನೂ ಚಿಕ್ಕವನಾದ್ದರಿಂದ ಅದನ್ನು ಸರಿಯಾಗಿ ತಿಳಿಯಲಾರೆ; ಅದನ್ನು ಮುಂದಿನ ಪುಸ್ತಕದಿಂದ ತಿಳಿಯಬಹುದು.

23. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ದೊಡ್ಡ ಅಕ್ಷರದಿಂದ ಬರೆದ ನಾಮಪದಗಳು ಯಾವ ವಿಭಕ್ತಿಯಲ್ಲಿವೆ ಎಂದು ಹೇಳಿರಿ:—

1. ಕೆಲವು ವರ್ಷಗಳ ಹಿಂದೆ ಟೀಯನ್ನು ಸಿಲೋನಿನಲ್ಲಿ ಫೈರು ಮಾಡಿದರು. 2. ಹಣ್ಣು, ಗೆಣಸು, ಇವೇ ಕಪಿಗಳ ಮುಖ್ಯವಾದ ಆಹಾರವು. 3. ಶತ್ರುವು ಮೇಲೆ ಬಿದ್ದರೆ, ಕರಡಿಯು ಕಾಲುಗಳ ಮೇಲೆ ನಿಂತು ಶತ್ರುವನ್ನು ಎದೆಗೆ ಅಪ್ಪಿಕೊಂಡು ಮೂಳೆಗಳನ್ನು ಮುರಿದುಬಿಡುತ್ತದೆ. 4. ಅಕ್ಕನು ತಂಗಿಯನ್ನು ಪ್ರೀತಿಸಿ ಅಣ್ಣನಿಗೆ ಪಾಠವನ್ನು ಹೇಳಿಕೊಡುತ್ತಾಳೆ. 5. ಸಮುದ್ರಕ್ಕೆ ಹೋಗುವ ಹಡಗುಗಳು ಗಾಳಿಯ ಸಹಾಯವಿಲ್ಲದೆ ಹೋಗುವುದೂ ಉಂಟು. 6. ಎಮ್ಮೆಯ ಬೆನ್ನ ಮೇಲಿದ್ದ ಹುಳುಗಳನ್ನು ಕುಕ್ಕೆ ತೆಗೆಯುವುದರಲ್ಲಿ ಕಾಗೆಗೆ ಬಹಳ ಆಸೆ ಉಂಟು.

ಪರೀಕ್ಷೆ.

ವಿಭಕ್ತಿ ಎಂದರೇನು? ವಿಭಕ್ತಿರೂಪಗಳನ್ನು ನಾವು ಹೇಗೆ ತೋರಿಸುತ್ತೇವೆ? ಕನ್ನಡದಲ್ಲಿ ಎಷ್ಟು ವಿಭಕ್ತಿಗಳು? ಪಂಚಮಿವಿಭಕ್ತಿಯನ್ನು ಏಕೆ ಬಿಟ್ಟುಬಿಡುತ್ತಾರೆ? ಸಂಬೋಧನೆ ವಿಭಕ್ತಿಯ ಪ್ರಯೋಜನವೇನು? ಮರ, ಮಂಗ, ಹುಡುಗಿ, ನೂರ್ಜಹಾನ್, ಕಾಗೆ, ಹಲ್ಲಿ, ಕುಕ್ಕೆ—ಇವುಗಳ ವಿಭಕ್ತಿಮಾಲೆಯನ್ನು ಹೇಳು. ದೇವರೇ, ಶಾಲೆಗೆ, ಉಪಾಧ್ಯಾಯರು, ಜಲ್ಲಾವನ್ನು, ಗಂಡಂದಿರಲ್ಲಿ, ಚಿತ್ರಕ್ಕೆ, ಮನೆಗೆ, ಕನ್ನಡಿ, ಊರಿಂದ, ನೀರು — ಈ ನಾಮಪದಗಳು ಯಾವ ವಿಭಕ್ತಿಯಲ್ಲಿವೆ?

Personal pronouns.

20ನೆಯ ಪಾಠ.—ಪುರುಷಾರ್ಥಕ ಸರ್ವನಾಮಗಳು.

ಸರ್ವನಾಮವೆಂದರೆ ಏನೆಂದು ನೀನು 4ನೆಯ ಪಾಠದಲ್ಲಿ ಓದಿದ್ದೀಯೆ. ವಾಕ್ಯದಲ್ಲಿ ಸ್ವತಃ ಅರ್ಥವಿಲ್ಲದೆ ನಾಮಪದದ ಸ್ಥಳದಲ್ಲಿ ಅದಕ್ಕೆ ಬದಲಾಗಿ ಬರುವ ಶಬ್ದವು ಸರ್ವನಾಮವೆಂದೆನ್ನಿಸುತ್ತದೆ. ನಾಮಪದಗಳಲ್ಲಿ ಇರುವಂತೆಯೇ ಸರ್ವನಾಮಗಳಲ್ಲಿಯೂ ಕೆಲವು ವಿಧಗಳುಂಟು. ಈ ವಿಧಗಳು ಯಾವುವೆಂದು ಈಗ ನಾವು ವಿಚಾರಿಸೋಣ.

ರಾಮನು ಸೀತೆಯೊಡನೆ ದಶರಥರಾಯನ ವಿಷಯವಾಗಿ ಹೀಗೆ ಹೇಳುತ್ತಾನೆ: "ನಾನು ಅವನು ಹೇಳಿದ ಅಪ್ಪಣೆಗೆ ಅನುಸಾರವಾಗಿ ವನಕ್ಕೆ ಹೋಗುತ್ತೇನೆ; ನೀನು ನನ್ನೊಡನೆ ಬಾರದೆ ನಿನ್ನ ತಂದೆಯ ಮನೆಗೆ ನಡೆ."

ISRT

ಈ ವಾಕ್ಯವನ್ನು ಮಾತಾಡುವ ಮನುಷ್ಯನು ಯಾರು? ರಾಮನು. ವಾಕ್ಯದಲ್ಲಿರುವ ನಾನು, ನನ್ನ ಎಂಬೀ ಪದಗಳು ಯಾರನ್ನು ಕುರಿತು ಹೇಳಿವೆ? ರಾಮನನ್ನು. ರಾಮನು ಮಾತಾಡುವುದರಿಂದ ತನ್ನ ವಿಷಯವಾಗಿ ಹೇಳುವಾಗ ನಾನು, ನನ್ನನ್ನು, ನನ್ನ ಮೊದಲಾಗಿ ಹೇಳುತ್ತಾನೆ. ವಾಕ್ಯದಲ್ಲಿದ್ದ ನೀನು, ನಿನ್ನ ಎಂಬ ಪದಗಳು ಯಾರನ್ನು ಕುರಿತು ಹೇಳಿವೆ? ಸೀತೆಯನ್ನು. ರಾಮನು ಸೀತೆಯೊಡನೆ ಮಾತಾಡುವಾಗ ಅವಳನ್ನು ಕುರಿತು ನೀನು, ನಿನ್ನ ಎಂದು ಮೊದಲಾಗಿ ಹೇಳುತ್ತಾನೆ. ರಾಮನು ಯಾರ ವಿಷಯವಾಗಿ ಈ ವಾಕ್ಯವನ್ನು ಹೇಳುತ್ತಾನೆ? ದಶರಥನ ವಿಷಯವಾಗಿ. ಆದ್ದರಿಂದಲೇ ದಶರಥನನ್ನು ಕುರಿತು ರಾಮನು ಅವನು, ಅವನನ್ನು ಎಂಬೀ ಪದಗಳನ್ನು ಹೇಳುತ್ತಾನೆ.

ಸಂಭಾಷಣೆಯು ನಡೆಯುತ್ತಿರುವಾಗ ಮಾತಾಡುವ ಪುರುಷನು ತನ್ನನ್ನು ಕುರಿತು, ನಾನು, ನನ್ನನ್ನು, ನಾವು, ನಮ್ಮನ್ನು ಮೊದಲಾದ ಸರ್ವನಾಮಗಳನ್ನು ಪ್ರಯೋಗಿಸುವನು. ಸಂಭಾಷಣೆಯಲ್ಲಿ ಮಾತಾಡುವಂಥವನು ಯಾರೊಡನೆ ಮಾತಾಡುತ್ತಾನೋ ಅವನನ್ನು ಕುರಿತು, ನೀನು, ನಿನ್ನನ್ನು, ನೀವು, ನಿಮ್ಮನ್ನು ಮೊದಲಾದ ಪದಗಳನ್ನು ಹೇಳುವನು. ಸಂಭಾಷಣೆಯಲ್ಲಿ ನಾವು ಯಾರ ವಿಷಯವಾಗಿ ಮಾತಾಡುತ್ತೇವೋ ಅವರನ್ನು ಕುರಿತು, ಅವನು, ಅವಳು, ಅದು, ಅವರು, ಅವನನ್ನು, ಅವು, ಅವರನ್ನು, ಅವುಗಳನ್ನು ಮೊದಲಾದ ಪದಗಳನ್ನು ಇಡಬೇಕಾಗುತ್ತದೆ.

ಮಾತಾಡುವ ಪುರುಷನಿಗೆ **ಉತ್ತಮಪುರುಷನು** ಎಂದು ಹೆಸರು— ನಾನು, ನನ್ನನ್ನು, ನನ್ನಿಂದ, ನನ್ನ, ನನ್ನಲ್ಲಿ; ನಾವು, ನಮ್ಮನ್ನು, ನಮ್ಮಿಂದ, ನಮಗೆ, ನಮ್ಮ, ನಮ್ಮಲ್ಲಿ ಮೊದಲಾದ ಸರ್ವನಾಮಗಳು ಉತ್ತಮಪುರುಷವಾಗಿವೆ.

ಯಾರೊಡನೆ ಮಾತಾಡುತ್ತೇವೋ ಆ ಮನುಷ್ಯನು **ಮಧ್ಯಮಪುರುಷನು**—ನೀನು, ನಿನ್ನನ್ನು, ನಿನ್ನಿಂದ, ನಿನಗೆ, ನಿನ್ನ, ನಿನ್ನಲ್ಲಿ; ನೀವು, ನಿಮ್ಮನ್ನು, ನಿಮ್ಮಿಂದ, ನಿಮಗೆ, ನಿಮ್ಮ, ನಿಮ್ಮಲ್ಲಿ ಮೊದಲಾದ ಸರ್ವನಾಮಗಳು ಮಧ್ಯಮಪುರುಷವಾಗಿವೆ.

ಯಾರ ವಿಷಯವಾಗಿ ಮಾತಾಡುತ್ತೇವೋ ಆ ಮನುಷ್ಯನು **ಪ್ರಥಮಪುರುಷನು**—ಅವನು (ಅವಳು), ಅವನನ್ನು, ಅವನಿಂದ, ಅವನಿಗೆ, ಅವನ, ಅವನಲ್ಲಿ, ಅವರು, ಅವರನ್ನು, ಅವರಿಂದ, ಅವರಿಗೆ, ಅವರ, ಅವರಲ್ಲಿ ಮೊದಲಾದ ಸರ್ವನಾಮಗಳು ಪ್ರಥಮಪುರುಷವಾಗಿವೆ.

ISRT

ಮೇಲೆ ಹೇಳಿದ ಸರ್ವನಾಮಗಳೆಲ್ಲಾ ಪುರುಷರನ್ನು ಕುರಿತು ಹೇಳುವ ಪದಗಳಾಗಿರುವುದರಿಂದ ಪುರುಷಾರ್ಥಕ ಸರ್ವನಾಮಗಳೆಂದು ಕರೆಯಲ್ಪಡುತ್ತವೆ; ನಾನು, ನಾವು, ನೀನು, ನೀವು, ಅವನು, ಅವಳು, ಅವರು ಎಂಬಿವು ಪುರುಷಾರ್ಥಕ ಸರ್ವನಾಮಗಳು.

29. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ಪುರುಷಾರ್ಥಕ ಸರ್ವನಾಮಗಳನ್ನು ತೆಗೆದು, ಅವು ಯಾವ ಪುರುಷವೆಂದು ಹೇಳಿರಿ:—

1. ನನ್ನ ದುಃಖವನ್ನು ನಾನು ಯಾರಿಗೆ ಹೇಳಲಿ? ದೇವರೇ, ನನ್ನನ್ನು ಸಹಾಯ ಮಾಡು. 2. ನೀನು ತಪ್ಪುಮಾಡಿದ್ದರೂ ಸರಿಯೆ, ಸುಳ್ಳಾಡಬೇಡ; ಅದು ನಿನ್ನ ತಪ್ಪನ್ನು ಹೆಚ್ಚಿಸುತ್ತದೆ. 3. ನೀನು ಪರರಿಗೆ ಮಾತುಕೊಡುವಾಗ ಆತುರಪಡಬೇಡ; ಕೊಟ್ಟ ಮೇಲೆ ಮಾತ್ರ ನಿನ್ನ ಮಾತನ್ನು ನೀನು ನಡಿಸಿಕೊಡು. 4. ನಾನೇ ಮಾಡಬಲ್ಲೆನು, ನನಗಿಂತಲು ಬುದ್ಧಿವಂತರು ಯಾರೂ ಇಲ್ಲ ಎಂಬ ಗರ್ವವನ್ನು ನೀನು ಬಿಟ್ಟುಬಿಡು. 5. ನಾವು ಕ್ಷೇಮದಲ್ಲಿದ್ದೇವೆ; ನಿಮ್ಮ ಕ್ಷೇಮಕ್ಕೂ ನಾನು ನಡಕೊಳ್ಳತಕ್ಕ ಬುದ್ಧಿಮಾರ್ಗಕ್ಕೂ ಅಪ್ಪಣೆಯಾಗಬೇಕು. 6. ನಾನು ಬಡವ, ಸ್ವಾಮಿ, ನಿಮ್ಮ ಸೇವೆಯನ್ನು ಮಾಡುವೆನು. ಪರಂತು ನಿಮ್ಮಲ್ಲಿ ಅವನೂ ಅವಳೂ ಇದ್ದರೆ, ನಾನು ನಿಮ್ಮನ್ನು ಸೇರಲಾರೆನು. 7. ನೀನು ಅವರ ಕುಂದಕಗಳನ್ನು ಹುಡುಕುವುದಕ್ಕಿಂತಲೂ ನಿನ್ನ ಮನಸ್ಸನ್ನು ತೆರೆದು ನಿನ್ನಲ್ಲಿದ್ದ ದೋಷಗಳನ್ನು ಹೊರಹಾಕು. 8. ನಾವು ದೇವರನ್ನು ಆಶ್ರಯಿಸುವುದು ಒಳ್ಳೆಯದು; ಅವರು ನಮ್ಮ ರಕ್ಷಕರು; ಅವರು ನನ್ನನ್ನೂ ನಿನ್ನನ್ನೂ ಅವನನ್ನೂ ಸೃಷ್ಟಿಸಿದರು.

Reflexive and interrogative pronouns

29ನೆಯ ಪಾಠ.—ಆತ್ಮಾರ್ಥಕ ಮತ್ತು ಪ್ರಶ್ನಾರ್ಥಕ ಸರ್ವನಾಮಗಳು.

1. ಕೃಷ್ಣನು ತನ್ನ ಪುಸ್ತಕವನ್ನು ಕಳೆದುಬಿಟ್ಟನು. 2. ರಾಮನು ತನಗೆ ಪುಸ್ತಕ ಬೇಕೆಂದು ಕೇಳಿಕೊಂಡನು.

ಈ ಎರಡು ವಾಕ್ಯಗಳಲ್ಲಿ ತನ್ನ ಮತ್ತು ತನಗೆ ಎಂಬೀ ಪದಗಳು ಯಾರನ್ನು ಕುರಿತು ಹೇಳಿವೆ? ಮೊದಲನೆಯದರಲ್ಲಿ ತನ್ನ ಎಂಬುದು ಕೃಷ್ಣನನ್ನು ಕುರಿತು ಹೇಳಿದೆ. ಎರಡನೆಯದರಲ್ಲಿ ತನಗೆ ಎಂಬುದು ರಾಮನನ್ನು ಕುರಿತು ಹೇಳಿದೆ.

ಇವು ಸರ್ವನಾಮಗಳೇ. ಇವು ಪ್ರಥಮಪುರುಷದಲ್ಲಿ ಸ್ವಂತದ ಸಲುವಾಗಿ ಪ್ರಯೋಗವಾಗುತ್ತವೆ.

ISRT

ಪ್ರಥಮಪುರುಷದಲ್ಲಿ ಸ್ವಂತದ ಸಲುವಾಗಿ ಪ್ರಯೋಗವಾಗುವ ಸರ್ವನಾಮಗಳು ಆತ್ಮಾರ್ಥಕ ಸರ್ವನಾಮಗಳು ಎನ್ನಿಸುತ್ತವೆ. ತಾನು, ತನ್ನನ್ನು, ತನ್ನಿಂದ, ತನಗೆ, ತನ್ನ, ತನ್ನಲ್ಲಿ; ತಾವು, ತಮ್ಮನ್ನು, ತಮ್ಮಿಂದ, ತಮಗೆ, ತಮ್ಮ, ತಮ್ಮಲ್ಲಿ, ಇವೆಲ್ಲವು ಆತ್ಮಾರ್ಥಕ ಸರ್ವನಾಮಗಳಾಗಿವೆ.

ನಾವು ಇನ್ನೊಬ್ಬರಿಗೆ ಪ್ರಶ್ನೆಗಳನ್ನು ಕೇಳುವಾಗ ಸರ್ವನಾಮಗಳನ್ನು ಉಪಯೋಗಿಸುವುದುಂಟು. ಯಾರು ಬಂದರು? ಯಾವನು ಮಾಡುತ್ತಾನೆ? ಏನನ್ನು ಮಾಡಿದೆ? ಯಾತಕ್ಕೆ ಬಂದನು? ಇಂಥವುಗಳಿಗೆ ಪ್ರಶ್ನಾರ್ಥಕ ಸರ್ವನಾಮಗಳೆಂದು ಹೆಸರು.

ಪ್ರಶ್ನೆಯನ್ನು ಕೇಳುವುದಕ್ಕೆ ಉಪಯೋಗಿಸಲ್ಪಡುವ ಸರ್ವನಾಮಕ್ಕೆ ಪ್ರಶ್ನಾರ್ಥಕ ಸರ್ವನಾಮವೆಂದು ಹೆಸರು; ಏನು, ಯಾವನ್ನು, ಯಾವಳು, ಯಾರು, ಯಾವುದು; ಎಂಥವನು, ಎಂಥವಳು ಮೊದಲಾದುವುಗಳು ಪ್ರಶ್ನಾರ್ಥಕ ಸರ್ವನಾಮಗಳು.*

ಸರ್ವನಾಮಗಳಲ್ಲಿ ಪುರುಷಾರ್ಥಕ ಸರ್ವನಾಮಗಳೆಂದೂ, ಆತ್ಮಾರ್ಥಕ ಸರ್ವನಾಮಗಳೆಂದೂ, ಪ್ರಶ್ನಾರ್ಥಕ ಸರ್ವನಾಮಗಳೆಂದೂ ಮೂರು ವಿಧಗಳು ಗೊತ್ತಾಯಿತು. ಇವುಗಳು ಅಲ್ಲದೆ ಇನ್ನೂ ಇರುವ ವಿಧಗಳನ್ನು ಮುಂದಿನ ಪುಸ್ತಕದಲ್ಲಿ ನೀನು ಓದುವೆ.

30. ಪ್ರಶ್ನೆಗಳು.

ಕೆಳಗಿನವುಗಳಲ್ಲಿರುವ ಸರ್ವನಾಮಗಳನ್ನು ತೋರಿಸಿ ಅವು ಯಾವ ವಿಧದ ಸರ್ವನಾಮಗಳೆಂದು ಹೇಳಿರಿ:—

1. ನಾನು ಕೈಲಾಸದ ಬೆಕ್ಕಾಗಿದ್ದೇನೆ; ನೀನು ಬಲು ಗಟ್ಟಿಗನೆಂದು ಕೇಳುತ್ತೇನೆ. 2. ಕಷ್ಟ ಬಂದಾಗ ನಾವು ಯಾರಿಗೂ ಸಹಾಯ ಮಾಡದಿದ್ದರೆ, ನಮಗೆ ಯಾರೂ ಸಹಾಯ ಮಾಡಲಾರರು. 3. ನೀನು ಸುಳ್ಳುಗಾರನೆಂದು ಗೊತ್ತಾದ ಮೇಲೆ ನೀನು ನಿಜ ಹೇಳಿದರೂ, ನಿನ್ನನ್ನು ಯಾರೂ ನಂಬುವುದಿಲ್ಲ. 4. ತಾನು ಮಾಡಿದರೆ ಉತ್ತಮ, ಅಳು ಮಾಡಿದರೆ ಹಾಳು. 5. ಅವನಿಗೆ ಅವನ ತಂದೆಯು ಒಂದು ಚೂರಿಯನ್ನು ಕೊಟ್ಟನು; ಅವನು ತನ್ನ ಚೂರಿಯನ್ನು ಬಹಳ ಮೆಚ್ಚಿದನು. 6. ಯಾರು ಸಾಲ ಮಾಡುವರೋ ಅವರು ಸೋಳಾಡುವರು. 7. ನೀನು ಯಾವುದನ್ನು ಮಾಡುವುದಕ್ಕೆ ಆಲೋಚಿಸುವೆಯೋ ಅದನ್ನು ಕುರಿತು

---

*ಆ ಮನುಷ್ಯ, ಈ ಹುಡುಗ ಮೊದಲಾದುವುಗಳಲ್ಲಿ ತೋರುವ ಆ, ಈ ಎಂಬ ಪದಗಳು ವಿಕೇಪಣಗಳೆಂದು ಹೇಳಿದ್ದೇವೆ. ಸರ್ವನಾಮಗಳಲ್ಲಿ ಕಂಡುಬರುವ ಇತರ ವಿಧಗಳನ್ನು ಮುಂದಿನ ಭಾಗದಲ್ಲಿ ನೋಡುವುದು.

ISRT

ಚೆನ್ನಾಗಿ ಆಲೋಚಿಸು. 8. ನಾವು ನಮ್ಮ ನಮ್ಮ ಕಾರ್ಯಗಳನ್ನು ಮಾಡಬೇಕು. 9. ನಿನ್ನ ಮನಸ್ಸಿಗೆ ಯಾವುದು ಸೇರುತ್ತದೋ ಅದನ್ನೇ ನೀನು ಮಾಡು. 10. ದೀನ ನಾನು ಸಮಸ್ತ ಲೋಕಕೆ | ದಾನಿ ನೀನು ವಿಚಾರಿಸಲು ಮತಿ- | ಹೀನ ನಾನು ಮಹಾ ಮಹಿಮ ಕೈವಲ್ಯಪತಿ ನೀನು ॥ ಏನ ಬಲ್ಲೆನು ನಾನು ನೆರೆ ಸು- | ಜ್ಞಾನಮೂರುತಿ ನೀನು ನಿನ್ನ ಸ- | ಮಾನರುಂಟೇ ದೇವ ರಕ್ಷಿಸು ನಮ್ಮನನವರತ. ॥

ಪರೀಕ್ಷೆ.

ಸರ್ವನಾಮವೆಂದರೇನು? ಪುರುಷಗಳು ಎಷ್ಟು ವಿಧವು? ಪುರುಷಾರ್ಥಕ ಸರ್ವನಾಮವೆಂದರೇನು? ಪುರುಷಾರ್ಥಕ ಸರ್ವನಾಮಗಳು ಯಾವುವು? ಪುರುಷಾರ್ಥಕ ಸರ್ವನಾಮವೆಂದು ಹೇಳಲು ಕಾರಣವೇನು? ಆತ್ಮಾರ್ಥಕ ಸರ್ವನಾಮವೆಂದರೇನು? ಪ್ರಶ್ನಾರ್ಥಕ ಸರ್ವನಾಮವೆಂದರೇನು? ನಾನು, ಏನು, ಯಾರು, ಅವಳು, ನಿಮ್ಮ, ತಮ್ಮ, ಅವರು, ತಾನು, ಈಕೆ, ಆತನು, ತಾವು, ಯಾವುದು, ನೀವು, ಅವುಗಳು, ನನ್ನ, ಏತರಿಂದ, ಇವು ಯಾವ ವಿಧದ ಸರ್ವನಾಮಗಳೆಂದು ಹೇಳಿರಿ. ಸರ್ವನಾಮಗಳು ಎಷ್ಟು ವಿಧವಾಗಿವೆ? ಅವು ಯಾವುವು?

22ನೆಯ ಪಾಠ.—ಸರ್ವನಾಮಗಳ ವಚನ ವಿಭಕ್ತಿಗಳು.

ಸರ್ವನಾಮ-ಗಳಲ್ಲಿ ನಾನು, ನಾವು, ನೀನು, ನೀವು ಎಂಬಿವುಗಳು ಪುರುಷರನ್ನೂ ಸ್ತ್ರೀಯರನ್ನೂ ಇತರ ವಸ್ತುಗಳನ್ನೂ ಕುರಿತು ಹೇಳುತ್ತವೆಂದು ನೀನು 20ನೆಯ ಪಾಠದಲ್ಲಿ ಓದಿದೆಯಷ್ಟೆ. ಈ ಸರ್ವನಾಮಗಳು ಪುಲ್ಲಿಂಗವಾದ ನಾಮಪದಗಳ ಬದಲಾಗಿಯೂ, ಸ್ತ್ರೀಲಿಂಗವಾದ ನಾಮಪದಗಳ ಬದಲಾಗಿಯೂ, ನಪುಂಸಕಲಿಂಗವಾದ ನಾಮಪದಗಳ ಬದಲಾಗಿಯೂ ವಾಕ್ಯಗಳಲ್ಲಿ ಬರುವುದರಿಂದ ಅವುಗಳಿಗೆ ಲಿಂಗಭೇದವು ಇರುವುದಿಲ್ಲ.

"ನಾನು ಬಂಡಿಯನ್ನು ಎಳೆಯುತ್ತೇನೆ" ಎಂದು ರಾಮನು ಹೇಳಿದನು.

"ನಾನು ಬಂಡಿಯನ್ನು ಎಳೆಯುತ್ತೇನೆ" ಎಂದು ಸೀತೆಯು ಹೇಳಿದಳು.

"ನಾನು ಬಂಡಿಯನ್ನು ಎಳೆಯುತ್ತೇನೆ", ಎಂದು ಕುದುರೆಯು ಹೇಳಿತು.

"ನೀನು ಬಂಡಿಯನ್ನು ಎಳೆಯುತ್ತೀಯೇ" ಎಂದು ಹುಡುಗನು ರಾಮನಿಗೆ ಕೇಳಿದನು.

"ನೀನು ಬಂಡಿಯನ್ನು ಎಳೆಯುತ್ತೀಯೇ" ಎಂದು ಹುಡುಗನು ಸೀತೆಗೆ ಕೇಳಿದನು.

"ನೀನು ಬಂಡಿಯನ್ನು ಎಳೆಯುತ್ತೀಯೇ" ಎಂದು ಹುಡುಗನು ಕುದುರೆಗೆ ಕೇಳಿದನು.

ನಾನು, ನೀನು ಎಂಬೀ ಸರ್ವನಾಮಗಳು ಪುರುಷರನ್ನು, ಸ್ತ್ರೀಯರನ್ನು, ಮತ್ತು ಇತರ ವಸ್ತುಗಳನ್ನು ಕುರಿತು ಪ್ರಯೋಗವಾಗುತ್ತವೆಂದು ನೀವು ಮೇಲಿನ

ISRT

ಉದಾಹರಣೆಗಳಿಂದ ತಿಳಿದುಕೊಳ್ಳಬಹುದು. ನಾನು, ನೀನು, ನಾವು, ನೀವು ಎಂಬಿವುಗಳು ಉತ್ತಮ ಮಧ್ಯಮ ಪುರುಷಾರ್ಥಕ ಸರ್ವನಾಮಗಳು. ಆದುದರಿಂದ ಉತ್ತಮ ಮಧ್ಯಮ ಪುರುಷಾರ್ಥಕ ಸರ್ವನಾಮಗಳಿಗೆ ಲಿಂಗಭೇದವಿಲ್ಲವೆಂದು ಹೇಳುತ್ತಾರೆ. ಹೀಗೆ ಹೇಳುವುದರ ಬದಲಾಗಿ ಕೆಲವರು ಈ ಸರ್ವನಾಮಗಳು ಅಲಿಂಗ್ಯವೆಂದೂ ಹೇಳುವುದುಂಟು.

ಹೀಗೆಯೇ ವಿಚಾರಿಸಿದರೆ, ತಾನು, ತಾವು ಎಂಬೀ ಆತ್ಮಾರ್ಥಕ ಸರ್ವನಾಮಗಳಿಗೂ ಯಾರು, ಏನು ಎಂಬೀ ಪ್ರಶ್ನಾರ್ಥಕ ಸರ್ವನಾಮಗಳಿಗೂ ಲಿಂಗಭೇದವಿಲ್ಲವೆಂದು ಕಂಡುಬರುವುದು.

ಸರ್ವನಾಮಗಳಲ್ಲಿ ಅವನು, ಅವಳು, ಅದು, ಅವರು, ಅವುಗಳು ಎಂಬಿವುಗಳಲ್ಲಿ ಮಾತ್ರ ಲಿಂಗಭೇದವು ಕಾಣುತ್ತದೆ. ಆದುದರಿಂದ ಪ್ರಥಮಪುರುಷಾರ್ಥಕ ಸರ್ವನಾಮಗಳಿಗೆ ಲಿಂಗಭೇದವುಂಟೆಂದು ನೀನು ತಿಳಿಯಬಹುದು. ಈ ಸರ್ವನಾಮಗಳಲ್ಲಿ ಅವರು ಎಂಬುದು ಗಂಡಸರನ್ನೂ ಹೆಂಗಸರನ್ನೂ ಕುರಿತು ಹೇಳುವುದರಿಂದ ಆ ಸರ್ವನಾಮವೂ ಅಲಿಂಗ್ಯವೆಂದು ಹೇಳಬಹುದು.

ಸರ್ವನಾಮಗಳಲ್ಲಿ ಕೆಲವುಗಳಿಗೆ ಲಿಂಗಭೇದವಿಲ್ಲದಿದ್ದರೂ, ಎಲ್ಲವುಗಳಿಗೂ ವಚನಭೇದವುಂಟು. ಇದನ್ನು ಕೆಳಗೆ ಬರೆದ ಪಟ್ಟಿಯಿಂದ ಓದಿ ತಿಳಿದುಕೊಳ್ಳಿರಿ.

	ಸರ್ವನಾಮ		ಏಕವಚನ	ಬಹುವಚನ
ಪುರುಷಾರ್ಥಕ ಸರ್ವನಾಮ	ಉತ್ತಮಪುರುಷ		ನಾನು	ನಾವು
	ಮಧ್ಯಮಪುರುಷ		ನೀನು	ನೀವು
	ಪ್ರಥಮಪುರುಷ	ಪು.	ಅವನು	ಅವರು
		ಸ್ತ್ರೀ.	ಅವಳು	
		ನಪುಂ.	ಅದು	ಅವು, ಅವುಗಳು
ಪ್ರಶ್ನಾರ್ಥಕ ಸರ್ವನಾಮ	ಪ್ರಥಮಪುರುಷ	ಪು.	ಯಾವನು	ಯಾರು
		ಸ್ತ್ರೀ.	ಯಾವಳು	
		ನಪುಂ.	ಯಾವುದು	ಯಾವುವು
			ಏನು	ಏನು
ಆತ್ಮಾರ್ಥಕ ಸರ್ವನಾಮ			ತಾನು	ತಾವು

ISRT

ನಾಮಪದಗಳಂತೆಯೇ ಸರ್ವನಾಮಗಳಿಗೂ ವಿಭಕ್ತಿರೂಪಗಳು ಬರುತ್ತವೆ. ಆದರೆ ನಾಮಪದಗಳಿಗೆ ಇರುವಂತೆ ಸಂಬೋಧನೆಯು ಮಾತ್ರ ಬರುವುದಿಲ್ಲ. ವಿಭಕ್ತಿಮಾಲೆಯನ್ನು ಕೆಳಗೆ ಬರೆದ ಪಟ್ಟಿಯಿಂದ ತಿಳಿದುಕೊಳ್ಳಿರಿ: –

ವಿಭಕ್ತಿ	ಪುರುಷಾರ್ಥಕ ಸರ್ವನಾಮಗಳು							
	ಉತ್ತಮಪುರುಷ		ಮಧ್ಯಮಪುರುಷ		ಪ್ರಥಮಪುರುಷ			
	ಏಕವಚನ	ಬಹುವಚನ	ಏಕವಚನ	ಬಹುವಚನ	ಏಕವಚನ	ಬಹುವಚನ	ಏಕವಚನ	ಬಹುವಚನ
ಪ್ರಥಮೆ	ನಾನು	ನಾವು	ನೀನು	ನೀವು	ಅವನು ಅವಳು	ಅವರು	ಅದು	ಅವು, ಅವುಗಳು
ದ್ವಿತೀಯೆ	ನನ್ನನ್ನು	ನಮ್ಮನ್ನು	ನಿನ್ನನ್ನು	ನಿಮ್ಮನ್ನು	ಅವನನ್ನು ಅವಳನ್ನು	ಅವರನ್ನು	ಅದನ್ನು	ಅವನ್ನು, ಅವುಗಳನ್ನು
ತೃತೀಯೆ	ನನ್ನಿಂದ	ನಮ್ಮಿಂದ	ನಿನ್ನಿಂದ	ನಿಮ್ಮಿಂದ	ಅವನಿಂದ ಅವಳಿಂದ	ಅವರಿಂದ	ಅದರಿಂದ	ಅವುಗಳಿಂದ
ಚತುರ್ಥಿ	ನನಗೆ	ನಮಗೆ	ನಿನಗೆ	ನಿಮಗೆ	ಅವನಿಗೆ ಅವಳಿಗೆ	ಅವರಿಗೆ	ಅದಕ್ಕೆ	ಅವಕ್ಕೆ, ಅವುಗಳಿಗೆ
ಪಂಚಮಿ	ನನ್ನ ದೆಸೆಯಿಂದ	ನಮ್ಮ ದೆಸೆಯಿಂದ	ನಿನ್ನ ದೆಸೆಯಿಂದ	ನಿಮ್ಮ ದೆಸೆಯಿಂದ	ಅವನ ದೆಸೆಯಿಂದ	ಅವರ ದೆಸೆಯಿಂದ	ಅದರ ದೆಸೆಯಿಂದ	ಅವುಗಳ ದೆಸೆಯಿಂದ
ಷಷ್ಠಿ	ನನ್ನ	ನಮ್ಮ	ನಿನ್ನ	ನಿಮ್ಮ	ಅವನ ಅವಳ	ಅವರ	ಅದರ	ಅವುಗಳ
ಸಪ್ತಮಿ	ನನ್ನಲ್ಲಿ	ನಮ್ಮಲ್ಲಿ	ನಿನ್ನಲ್ಲಿ	ನಿಮ್ಮಲ್ಲಿ	ಅವನಲ್ಲಿ ಅವಳಲ್ಲಿ	ಅವರಲ್ಲಿ	ಅದರಲ್ಲಿ	ಅವುಗಳಲ್ಲಿ

ವಿಭಕ್ತಿ	ಪ್ರತ್ಯರ್ಥಕ ಸರ್ವನಾಮಗಳು					ಅತ್ಯರ್ಥಕ ಸರ್ವನಾಮಗಳು	
	ಏಕವಚನ	ಬಹುವಚನ	ಏಕವಚನ	ಬಹುವಚನ		ಏಕವಚನ	ಬಹುವಚನ
ಪ್ರಥಮೆ	ಯಾವನು ಯಾವಳು	ಯಾರು	ಯಾವುದು	ಯಾವುವು, ಯಾವುವುಗಳು	ಏನು	ತಾನು	ತಾವು
ದ್ವಿತೀಯೆ	ಯಾವನನ್ನು ಯಾವಳನ್ನು	ಯಾರನ್ನು	ಯಾವುದನ್ನು	ಯಾವುವನ್ನು, ಯಾವುವುಗಳನ್ನು	ಏನನ್ನು	ತನ್ನನ್ನು	ತಮ್ಮನ್ನು
ತೃತೀಯೆ	ಯಾವನಿಂದ ಯಾವಳಿಂದ	ಯಾರಿಂದ	ಯಾವುದರಿಂದ	ಯಾವುವುಗಳಿಂದ	ಏತರಿಂದ, ಯಾತರಿಂದ	ತನ್ನಿಂದ	ತಮ್ಮಿಂದ
ಚತುರ್ಥಿ	ಯಾವನಿಗೆ ಯಾವಳಿಗೆ	ಯಾರಿಗೆ	ಯಾವುದಕ್ಕೆ	ಯಾವುವುಗಳಿಗೆ	ಏತಕ್ಕೆ, ಏಕೆ	ತನಗೆ	ತಮಗೆ
ಪಂಚಮಿ	ಯಾವನ ದೆಸೆಯಿಂದ	ಯಾರ ದೆಸೆಯಿಂದ	ಯಾವುದರ ದೆಸೆಯಿಂದ	ಯಾವುವುಗಳ ದೆಸೆಯಿಂದ	ಏತರ ದೆಸೆ ಯಿಂದ	ತನ್ನ ದೆಸೆ ಯಿಂದ	ತಮ್ಮ ದೆಸೆ ಯಿಂದ
ಷಷ್ಠಿ	ಯಾವನ ಯಾವಳ	ಯಾರ	ಯಾವುದರ	ಯಾವುವುಗಳ	ಏತರ	ತನ್ನ	ತಮ್ಮ
ಸಪ್ತಮಿ	ಯಾವನಲ್ಲಿ ಯಾವಳಲ್ಲಿ	ಯಾರಲ್ಲಿ	ಯಾವುದರಲ್ಲಿ	ಯಾವುವುಗಳಲ್ಲಿ	ಏತರಲ್ಲಿ	ತನ್ನಲ್ಲಿ	ತಮ್ಮಲ್ಲಿ

31. ಪ್ರಶ್ನೆಗಳು.

9ನೆಯ ಮತ್ತು 29ನೆಯ ಪ್ರಶ್ನೆಗಳಲ್ಲಿರುವ ಸರ್ವನಾಮಗಳನ್ನೂ ಅವುಗಳ ವಚನ ವಿಭಕ್ತಿಗಳನ್ನೂ ಹೇಳಿರಿ.

ಪರೀಕ್ಷೆ.

ಸರ್ವನಾಮಗಳಲ್ಲಿ ಎಷ್ಟು ವಿಧಗಳು? ಪುರುಷಾರ್ಥಕ ಸರ್ವನಾಮಗಳೆಂದರೇನು? ಆ ಹೆಸರು ಬರಲು ಕಾರಣವೇನು? ತಾನು, ತಾವು—ಇವು ಎಂಥ ಸರ್ವನಾಮಗಳು? ಇವುಗಳಿಗೆ ಆತ್ಮಾರ್ಥಕ ಸರ್ವನಾಮಗಳೆಂದು ಹೆಸರು ಬರಲು ಕಾರಣವೇನು? ಪ್ರಶ್ನಾರ್ಥಕ ಸರ್ವನಾಮಗಳು ಯಾವುವು? ಯಾವ ವಿಧದ ಸರ್ವನಾಮಗಳಿಗೆ ಲಿಂಗಭೇದವಿದೆ? ಕೆಲವು ಸರ್ವನಾಮಗಳಿಗೆ ಲಿಂಗಭೇದವು ಇಲ್ಲದಿರುವುದಕ್ಕೆ ಕಾರಣವೇನು? ಸರ್ವನಾಮಗಳಿಗೆ ದಾರದ ವಿಭಕ್ತಿಯು ಯಾವುದು? ಅದು ಸರ್ವನಾಮಗಳಿಗೆ ಬರುವುದಿಲ್ಲವೇಕೆ? ನಾನು, ಏನು ಎಂಬುದರ ತೃತೀಯೆ, ಸಪ್ತಮಿ ವಿಭಕ್ತಿರೂಪಗಳನ್ನೂ, ನೀನು, ಅವನು ಎಂಬುದರ ಬಹುವಚನ ದ್ವಿತೀಯೆ, ಚತುರ್ಥಿ ವಿಭಕ್ತಿರೂಪಗಳನ್ನೂ ಹೇಳಿರಿ.

Causative verb.

23ನೆಯ ಪಾಠ.—ಪ್ರಯೋಜಕಧಾತುಗಳು.

1. ಕನ್ನಡಿಯು ಹೊಳೆಯುತ್ತದೆ. 2. ಹುಡುಗನು ಪುಸ್ತಕವನ್ನು ಓದುತ್ತಾನೆ. 3. ಉಪಾಧ್ಯಾಯನು ಪಾಠವನ್ನು ಓದಿಸುತ್ತಾನೆ.

ಮೇಲಿನ ವಾಕ್ಯಗಳಲ್ಲಿ ಕ್ರಿಯಾಪದಗಳು ಯಾವುವೆಂದು ನೀನು ಹೇಳಬಲ್ಲೆ. ಕೆಲವು ಕ್ರಿಯಾಪದಗಳು ಕರ್ಮವನ್ನು ಹೊಂದುತ್ತವೆಂದೂ, ಕೆಲವು ಹೊಂದುವುದಿಲ್ಲವೆಂದೂ ನೀನು 11ನೆಯ ಪಾಠದಲ್ಲಿ ಓದಿದ್ದೀಯೆ. ಕರ್ಮವಿರುವ ಕ್ರಿಯಾಪದಗಳು ಸಕರ್ಮಕಗಳೆಂದೂ, ಕರ್ಮಹೊಂದದ ಕ್ರಿಯಾಪದಗಳು ಅಕರ್ಮಕಗಳೆಂದೂ ನೀನು ತಿಳಿದಿರುವೆ. ಮಾಡು, ನುಡಿ, ಹೇಳು, ಓದು, ಬರೆ ಮೊದಲಾದುವುಗಳಿಗೆ ಸ್ವಭಾವನಿಮಿತ್ತವಾಗಿ ಕರ್ಮವು ಆವಶ್ಯಕವಿರುವುದರಿಂದ ಸಕರ್ಮಕಗಳೆಂದೂ, ಹೋಗು, ಇರು, ಬರು, ಬೀಳು, ಏಳು ಮೊದಲಾದುವುಗಳಿಗೆ ಇಂಥಾ ಆವಶ್ಯಕವಿಲ್ಲದಿರುವುದರಿಂದ ಅವುಗಳು ಅಕರ್ಮಕಗಳೆಂದೂ ನಿನಗೆ ಗೊತ್ತಾಗಿದೆ. ಅಕರ್ಮಕಗಳೂ ಸಕರ್ಮಕಗಳೂ ಅಲ್ಲದೆ ಕನ್ನಡದಲ್ಲಿ ಇನ್ನೊಂದು ವಿಧದ ಕ್ರಿಯಾಪದಗಳುಂಟು. ಈ ವಿಧವು ಯಾವುದೆಂದು ನೋಡೋಣ.

ISRT

ಕನ್ನಡಿಯು ಹೊಳೆಯುತ್ತದೆ; ಈ ವಾಕ್ಯದಲ್ಲಿ ಕ್ರಿಯೆಯನ್ನು ಮಾಡುವುದು ಯಾರು? ಕನ್ನಡಿಯು. ಹುಡುಗನು ಪುಸ್ತಕವನ್ನು ಓದುತ್ತಾನೆ; ಈ ವಾಕ್ಯದಲ್ಲಿ ಕ್ರಿಯೆಯನ್ನು ಮಾಡುವವನು ಹುಡುಗನೇ ಎಂದು ನೀನು ಹೇಳಬಲ್ಲೆ. ಉಪಾಧ್ಯಾಯನು ಪಾಠವನ್ನು ಓದಿಸುತ್ತಾನೆ; ಈ ವಾಕ್ಯದಲ್ಲಿ ಕ್ರಿಯೆಯನ್ನು ಮಾಡುವವನು ಉಪಾಧ್ಯಾಯನಲ್ಲ; ಉಪಾಧ್ಯಾಯನು ಕ್ರಿಯೆಯನ್ನು ಮತ್ತೊಬ್ಬನಿಂದ ಮಾಡಿಸುತ್ತಾನೆ. ತಂದೆಯು ಕಾಗದವನ್ನು ಬರೆಯಿಸಿದನು; ಈ ವಾಕ್ಯದಲ್ಲಿ ತಂದೆಯೇ ಕಾಗದವನ್ನು ಬರೆಯದೆ, ಆ ಕೆಲಸವನ್ನು ಮತ್ತೊಬ್ಬನಿಂದ ಮಾಡಿಸಿದನೆಂದು ಅರ್ಥವಾಗುವುದು. ಇದರಂತೆಯೇ ವಿಚಾರಿಸಿದರೆ, ಕೆಳಗಿನ ವಾಕ್ಯಗಳಲ್ಲಿ ಕ್ರಿಯಾಪದಗಳು ಹೇಳುವ ಕ್ರಿಯೆಯನ್ನು ಕರ್ತೃವು ಮಾಡದೆ ಅದನ್ನು ಮತ್ತೊಬ್ಬನಿಂದ ಮಾಡಿಸುತ್ತಾನೆಂದು ಗೊತ್ತಾಗುವುದು.

1. ರೈತನು ಮನೆಯನ್ನು ಕಟ್ಟಿಸುತ್ತಾನೆ. 2. ಅರಸನು ಮಂತ್ರಿಯನ್ನು ಕೊಲ್ಲಿಸಿದನು. 3. ತಂದೆಯು ಮಗನಿಗೆ ಔಷಧವನ್ನು ಕೊಡಿಸುವನು.

ಇಂಥಾ ಕ್ರಿಯಾಪದಗಳಿಗೆ ಪ್ರಯೋಜಕಗಳೆಂದು ಹೆಸರು, ಪ್ರೇರಣಾರ್ಥಕವೆಂದೂ ಹೇಳುವುದುಂಟು.

ಒಬ್ಬನು ಕ್ರಿಯೆಯನ್ನು ತಾನೇ ಮಾಡದೆ ಮತ್ತೊಬ್ಬನಿಂದ ಮಾಡಿಸುತ್ತಾನೆ ಎಂಬರ್ಥವನ್ನು ಹೇಳುವ ಧಾತುಗಳೇ ಪ್ರಯೋಜಕಧಾತುಗಳು.

ಈಗ ಧಾತುಗಳು ಎಷ್ಟು ವಿಧವೆಂದು ಇನ್ನೊಮ್ಮೆ ಹೇಳೋಣ: ಸಕರ್ಮಕ ಧಾತುಗಳು, ಇವು ಕರ್ಮವುಳ್ಳ ಕ್ರಿಯೆಯನ್ನು ಹೇಳುತ್ತವೆ; ಅಕರ್ಮಕ ಧಾತುಗಳು, ಇವುಗಳಿಗೆ ಕರ್ಮವು ಬರುವುದಿಲ್ಲ; ಪ್ರಯೋಜಕಧಾತುಗಳು, ಇವು ಕ್ರಿಯೆಯನ್ನು ನಡಿಸುವವನು ಅದನ್ನು ತಾನೇ ಮಾಡದೆ ಮತ್ತೊಬ್ಬನಿಂದ ಮಾಡಿಸುತ್ತಾನೆಂಬ ಅರ್ಥವನ್ನು ಹೇಳುತ್ತವೆ. ಪ್ರಯೋಜಕಧಾತುಗಳಿಗೂ ಕರ್ಮವು ಸೇರುತ್ತದೆ.

32. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿರುವ ಕ್ರಿಯಾಪದಗಳು ಯಾವ ವಿಧದ ಧಾತುಗಳೆಂದು ಹೇಳಿರಿ:—

1. ಬಳೆಗಳನ್ನು ಬಳೆಗಾರರೇ ಮಾಡುವುದಿಲ್ಲ. 2. ಅವರು ಬಳೆಗಳನ್ನು ಮಾಡಿಸಿ ಮಾರುತ್ತಾರೆ. 3. ತಾಯಿಯು ಮಗಳಿಗೆ ಬಳೆಗಳನ್ನೇ ತೊಡಿಸಿದಳು. 4. ಉಪಾಧ್ಯಾ

ಯನು ಹುಡುಗನನ್ನು ಶಿಕ್ಷಿಸುತ್ತಾನೆ. 5. ಮಕ್ಕಳು ಮನೆಯಲ್ಲಿ ತಂಟಿಮಾಡಿದರೆ, ತಾಯಿ ತಂದೆಗಳು ಶಾಲೆಯಲ್ಲಿ ಅವರನ್ನು ಹೊಡಿಸುವುದುಂಟು. 6. ಅತ್ತ ಅವನನ್ನು ನೋಡು, ಹಿಡಿಗಲನ್ನು ಹಿಡಿದು ಕಸವನ್ನು ಗುಡಿಸುತ್ತಾನೆ. 7. ಬಂಡೆಯ ಕಲ್ಲುಗಳು ಬಿಸಿಲಿಗೆ ಒಡೆಯುತ್ತವೆ. 8. ಹುಡುಗನು ಕಲ್ಲುಹಲಗೆಯನ್ನು ಒಡೆದನು. 9. ಪಟ್ಟಣಗಳಲ್ಲಿ ಹುಲಿಗಳ ಕಾಟವು ಎದ್ದರೆ, ಸರಕಾರದವರು ಅವನ್ನು ಕೊಲ್ಲಿಸುತ್ತಾರೆ. 10. ಸೋದಿಯನ್ನು ಬೀಸುಗಲ್ಲಲ್ಲಿ ಬೀಸುತ್ತಾರೆ. 11. ಬೀಸಣಿಗೆಯಿಂದ ಗಾಳಿ ಬೀಸುತ್ತದೆ.

Participle.

24ನೆಯ ಪಾಠ.—ನ್ಯೂನರೂಪಗಳು.

1. ನಾನು ಮಾಡುತ್ತೇನೆ. 2. ನಾನು ಮಾಡಿದೆನು. 3. ನಾನು ಮಾಡುವೆನು.

ಈ ಮೂರು ವಾಕ್ಯಗಳಲ್ಲಿ ಕ್ರಿಯೆಯ ಕಾಲವು ಯಾವುದು? ಮಾಡುತ್ತೇನೆ ಎಂಬುದು ವರ್ತಮಾನಕಾಲದ ಕ್ರಿಯೆಯೆಂದೂ, ಮಾಡಿದೆನು ಎಂಬುದು ಭೂತಕಾಲದ ಕ್ರಿಯೆಯೆಂದೂ, ಮಾಡುವೆನು ಎಂಬುದು ಭವಿಷ್ಯತ್ಕಾಲದ ಕ್ರಿಯೆಯೆಂದೂ ನೀನು 5ನೆಯ ಪಾಠದಲ್ಲಿ ಓದಿದೆಯಷ್ಟೆ. ಇವು ವಾಕ್ಯಗಳಾಗಿರುವುದರಿಂದ ಇವುಗಳಲ್ಲಿನ ಆಲೋಚನೆಯು ಸಂಪೂರ್ಣವಾಗಿದೆಯೆಂದೂ ನಿನಗೆ ಗೊತ್ತಾಗಿದೆ.

ನಾನು ಮಾಡುತ್ತ, ನಾನು ಮಾಡಿ ಎಂದು ಇಷ್ಟೇ ಹೇಳಿದರೆ, ವಾಕ್ಯವು ಸಂಪೂರ್ಣವಾಗುತ್ತದೆಯೇ? ಇಲ್ಲ. ಸಂಪೂರ್ಣವಾಗುವ ಹಾಗೆ ಇನ್ನೊಂದು ಆಖ್ಯಾತಕ್ರಿಯಾಪದವನ್ನು ಸೇರಿಸಬೇಕಾಗುವುದು.

ನಾನು ಮಾಡುತ್ತ ಹೋಗುತ್ತೇನೆ; ನಾನು ಮಾಡುತ್ತ ಹೋದೆನು; ನಾನು ಮಾಡುತ್ತ ಹೋಗುವೆನು; ನಾನು ಮಾಡಿ ಹೋಗುತ್ತೇನೆ; ನಾನು ಮಾಡಿ ಹೋದೆನು; ನಾನು ಮಾಡದೆ ಹೋಗುವೆನು.

ಕ್ರಿಯೆಯು ಸಂಪೂರ್ಣವಾಗಿದ್ದರೆ, ಅದನ್ನು ಕ್ರಿಯೆಯ ಸಂಪೂರ್ಣರೂಪವೆಂದು ಹೇಳುವರು. ಕ್ರಿಯೆಯು ಸಂಪೂರ್ಣವಲ್ಲದಿದ್ದರೆ, ಅದನ್ನು ಕ್ರಿಯೆಯ ನ್ಯೂನರೂಪವೆಂದು ಹೇಳುವರು. ಮಾಡುತ್ತೇನೆ, ಮಾಡಿದೆನು, ಮಾಡುವೆನು ಎಂಬಿವು ಸಂಪೂರ್ಣರೂಪಗಳು. ಮಾಡುತ್ತ, ಮಾಡಿ, ಮಾಡದೆ ಎಂಬಿವು ನ್ಯೂನರೂಪಗಳು.

ISRT

ಮಾಡುತ್ತ, ಹೋಗುತ್ತ, ಬರುತ್ತ, ಕೇಳುತ್ತ ಎಂಬ ಕ್ರಿಯಾರೂಪಗಳಲ್ಲಿ ಕ್ರಿಯೆಯು ವರ್ತಮಾನಕಾಲದಲ್ಲಿದೆ ಎಂದು ತೋರುವುದು. ಮಾಡಿ, ನೋಡಿ, ಬಂದು, ಕೇಳಿ ಎಂಬೀ ಕ್ರಿಯಾರೂಪಗಳಲ್ಲಿ ಕ್ರಿಯೆಯು ಭೂತಕಾಲದಲ್ಲಿದೆ ಎಂದು ತೋರುವುದು. ಎರಡೂ ರೂಪಗಳು ಕ್ರಿಯೆಯು ಸಂಪೂರ್ಣವಾಗಿಲ್ಲವೆಂದು ಹೇಳುವುದರಿಂದ, ಇವು ನ್ಯೂನರೂಪಗಳಾಗಿವೆ. ಕ್ರಿಯೆಯು ವರ್ತಮಾನಕಾಲದಲ್ಲಿದ್ದು ಅಪೂರ್ಣವಾಗಿದೆ ಎಂದು ಹೇಳುವ ರೂಪಕ್ಕೆ ವರ್ತಮಾನನ್ಯೂನವೆಂದು ಹೆಸರು; ಕ್ರಿಯೆಯು ಭೂತಕಾಲದಲ್ಲಿದ್ದು ಅಪೂರ್ಣವಾಗಿದೆ ಎಂದು ಹೇಳುವ ರೂಪಕ್ಕೆ ಭೂತನ್ಯೂನವೆಂದು ಹೆಸರು. ಮಾಡುತ್ತ, ಹೋಗುತ್ತ, ಬರುತ್ತ, ಕೇಳುತ್ತ ಮೊದಲಾದ ಕ್ರಿಯಾರೂಪಗಳು ವರ್ತಮಾನನ್ಯೂನಗಳು; ಮಾಡಿ, ಹೋಗಿ, ಬಂದು, ಕೇಳಿ ಮೊದಲಾದ ಕ್ರಿಯಾರೂಪಗಳು ಭೂತನ್ಯೂನಗಳು. ನ್ಯೂನರೂಪಗಳ ಕ್ರಿಯೆಯು ಸಂಪೂರ್ಣವಾಗಿಲ್ಲವೆಂದು ಹೇಳುವುದರಿಂದ, ವಾಕ್ಯದಲ್ಲಿ ಇನ್ನೊಂದು ಆಖ್ಯಾತಪದವು ಅಗತ್ಯವಾಗಿರುವುದು.

1. ನಾನು ಮನೆಯಲ್ಲಿ ಓದಿ ಹೋಗುತ್ತೇನೆ. 2. ಒಕ್ಕಲಿಗನು ಉಳುತ್ತ ಇರುತ್ತಾನೆ. 3. ಕಾಳನ್ನು ಬೀಸಿ, ಹಿಟ್ಟಿನಿಂದ ರೊಟ್ಟಿ ಮಾಡುತ್ತಾರೆ. 4. ಜೋಳದ ತೆನೆಗಳನ್ನು ಕೊಯ್ದು ಸುಟ್ಟು ತಿನ್ನುತ್ತಾರೆ.

ಮೇಲಿನ ವಾಕ್ಯಗಳಲ್ಲಿ ನ್ಯೂನರೂಪವು ಅಪೂರ್ಣ ಆಖ್ಯಾತವಾಗಿದ್ದುದರಿಂದ, ಮತ್ತೊಂದು ಸಂಪೂರ್ಣ ಆಖ್ಯಾತರೂಪವು ದೊಡ್ಡ ಅಕ್ಷರದಲ್ಲಿ ಬರೆದಿದೆ, ನೋಡು.

ಈ ನ್ಯೂನರೂಪಗಳನ್ನು ನಾವು ಹೇಗೆ ಮಾಡುತ್ತೇವೆ? ಕ್ರಿಯಾಪದದ ಮೂಲರೂಪವು ಧಾತುವೆಂದು ನೀನು ತಿಳಿದಿರುವೆಯಷ್ಟೆ. ಧಾತುವಿನ ಮೇಲೆ ಉತ್ತ ಎಂಬ ಪ್ರತ್ಯಯವನ್ನು ಹಚ್ಚಿದರೆ, ವರ್ತಮಾನನ್ಯೂನವಾಗುವುದು. ಮಾಡು, ಬರು, ಕೇಳು ಎಂಬೀ ಧಾತುಗಳ ಕೊನೆಯಲ್ಲಿ ಉತ್ತ ಪ್ರತ್ಯಯವನ್ನು ಹಚ್ಚಿ ಮಾಡುತ್ತ, ಬರುತ್ತ, ಕೇಳುತ್ತ ಎಂಬ ವರ್ತಮಾನನ್ಯೂನಗಳಾಗುತ್ತವೆ. ನುಡಿ, ಇಳಿ, ಕುಣಿ ಎಂಬೀ ಧಾತುಗಳ ಅಂತ್ಯದಲ್ಲಿ ಉತ್ತ ಎಂಬ ಪ್ರತ್ಯಯವು ಬಂದರೆ, ನುಡಿಯುತ್ತ (ನುಡಿವುತ್ತ), ಇಳಿಯುತ್ತ (ಇಳಿವುತ್ತ), ಕುಣಿಯುತ್ತ (ಕುಣಿವುತ್ತ) ಎಂಬ ವರ್ತಮಾನನ್ಯೂನಗಳಾಗುವುವು. ಎಯ್, ಜೇ, ನೋ ಎಂಬೀ ಧಾತುಗಳ ಮೇಲೆ ಉತ್ತ ಪ್ರತ್ಯಯವನ್ನು ಇಟ್ಟರೆ, ಎಯ್ಯುತ್ತ (ಎಯ್ವುತ್ತ), ಜೇಯುತ್ತ (ಜೇವುತ್ತ), ನೋಯುತ್ತ (ನೋವುತ್ತ) ಎಂಬ ವರ್ತಮಾನನ್ಯೂನಗಳಾಗುವುವು.

ISRT

ಧಾತುವಿನ ಮೇಲೆ ತು ಪ್ರತ್ಯಯವನ್ನು ಹಚ್ಚಿದರೆ, ಭೂತನ್ಯೂನವಾಗುವುದು. ತಿನ್ನು, ಕೊಯ್ಯು, ಕುಡಿ, ಕುಣಿ, ಕಳಿ, ನನೆ, ನೆನೆ, ಕರೆ ಮೊದಲಾದ ಧಾತುಗಳ ಕೊನೆಯಲ್ಲಿ ದು ಪ್ರತ್ಯಯವನ್ನು ಸೇರಿಸಿದರೆ, ತಿನ್ದು, ಕೊಯ್ದು, ಕುಡಿದು, ಕುಣಿದು, ಕಳೆದು, ನನೆದು, ನೆನೆದು, ಕರೆದು ಮೊದಲಾದ ಭೂತನ್ಯೂನರೂಪಗಳಾಗುತ್ತವೆ.

ಕೆಲವು ಧಾತುಗಳ ಮೇಲೆ ದು ಪ್ರತ್ಯಯವನ್ನು ಹಚ್ಚದೆ ತು ಪ್ರತ್ಯಯವನ್ನು ಹಚ್ಚಿ ಭೂತನ್ಯೂನಗಳನ್ನು ಮಾಡಬೇಕಾಗುವುದು. ಕಲಿ, ಮರೆ, ಎಚ್ಚರ್, ನೇಲು, ಉಳು, ಸೋಲು, ಚಿರೆ ಮೊದಲಾದ ಧಾತುಗಳ ಕೊನೆಯಲ್ಲಿ ತು ಪ್ರತ್ಯಯವನ್ನು ಸೇರಿಸಿದರೆ, ಕಲಿತು, ಮರೆತು, ಎಚ್ಚತ್ತು, ನೇತು, ಉತ್ತು, ಸೋತು, ಚಿರೆತು ಮೊದಲಾದ ಭೂತನ್ಯೂನರೂಪಗಳಾಗುವುವು.

ತು, ದು ಪ್ರತ್ಯಯಗಳನ್ನು ಧಾತುವಿನ ಮೇಲೆ ಹಚ್ಚುವಾಗ ಧಾತುವಿನ ಅಂತ್ಯದಲ್ಲಿರುವ ಅಕ್ಷರಗಳು ಬೇರೆಯಾಗುವುದುಂಟು. ಮಾ, ನೋ, ಜೇ ಎಂಬೀ ಧಾತುಗಳಿಗೆ ದು ಪ್ರತ್ಯಯವನ್ನು ಹಚ್ಚಿದರೆ, ಮಿಂದು, ನೊಂದು, ಬೆಂದು ಎಂಬ ಭೂತನ್ಯೂನಗಳಾಗುತ್ತವೆ; ಬೀಳು, ಏಳು, ಸೆಲ್ಲು ಎಂಬೀ ಧಾತುಗಳು ಬಿದ್ದು, ಎದ್ದು, ಸೆದ್ದು ಎಂದಾಗುತ್ತವೆ. ತರು, ಬರು ಎಂಬಿವು ತಂದು, ಬಂದು ಎಂದಾಗುವುವು. ಇರು ಎಂಬುದು ಇದ್ದು ಎಂದಾಗುವುದು; ತೆರು, ಹೊರು ಎಂಬಿವು ತೆತ್ತು, ಹೊತ್ತು ಎಂದಾಗುವುವು. ಉಣ್ಣು, ಕಾಣು, ಕೊಳ್ಳು ಎಂಬಿವು ಉಂಡು, ಕಂಡು, ಕೊಂಡು ಎಂದಾಗುವುವು. ಇಡು, ಕೊಡು, ಪಡು, ಸುಡು ಎಂಬಿವು ಇಟ್ಟು, ಕೊಟ್ಟು, ಪಟ್ಟು, ಸುಟ್ಟು ಎಂದಾಗುವುವು. ನಗು, ಮಿಸು, ಹೊಸು ಎಂಬಿವು ನಕ್ಕು, ಮಿಕ್ಕು, ಹೊಕ್ಕು ಎಂದಾಗುವುವು. ತು ಅಥವಾ ದು ಎಂಬ ಭೂತನ್ಯೂನದ ಪ್ರತ್ಯಯವನ್ನು ಧಾತುವಿನ ಮೇಲೆ ಹಚ್ಚುವಾಗ ಅಂತ್ಯದ ಅಕ್ಷರಗಳು ಹೇಗೆ ಬದಲಿಸುತ್ತವೆಂಬುದನ್ನು ನೀನು ಮುಂದೆ ತಿಳಿಯುವೆ.

ಕೆಲವು ಧಾತುಗಳಿಂದ ಭೂತನ್ಯೂನಗಳನ್ನು ಮಾಡಲು ತು, ದು ಪ್ರತ್ಯಯಗಳನ್ನು ಹಚ್ಚಬೇಕೆಂಬ ಆವಶ್ಯಕವೇ ಇಲ್ಲ. ಕೇಳು, ಹೇಳು, ನೋಡು, ಮಾಡು, ಜಾರು, ತೋರು ಮೊದಲಾದ ಧಾತುಗಳಿಗೆ ತು, ದು ಪ್ರತ್ಯಯಗಳನ್ನು ಹಚ್ಚದೆ ಕೇಳಿ, ಹೇಳಿ, ನೋಡಿ, ಮಾಡಿ, ಜಾರಿ, ತೋರಿ ಎಂಬ ಭೂತನ್ಯೂನಗಳನ್ನು ಮಾಡುತ್ತೇವೆ. ಹಾಡು, ಓಡು, ಅಟ್ಟು, ಕುಟ್ಟು, ನಂಬು, ತುಂಬು, ಕಟ್ಟು, ಅಂಜು ಮೊದಲಾದ ಅನೇಕ ಧಾತುಗಳಿಗೆ ತು, ದು ಪ್ರತ್ಯಯಗಳನ್ನು ಹಚ್ಚದೆ ಧಾತುವಿನ ಕೊನೆಯಲ್ಲಿ

ISRT

ಇ ಎಂಬ ಪ್ರತ್ಯಯವನ್ನು ಸೇರಿಸಿ ಹಾಡಿ, ಓಡಿ, ಅಟ್ಟಿ, ಕುಟ್ಟಿ, ನಂಬಿ, ತುಂಬಿ, ಕಟ್ಟಿ, ಅಂಜಿ ಎಂಬ ಭೂತನ್ಯೂನಗಳನ್ನು ಮಾಡುತ್ತೇವೆ.

ಯಾವ ಧಾತುಗಳ ಅಂತ್ಯದಲ್ಲಿ ತು ಅಥವಾ ದು ಎಂಬ ಪ್ರತ್ಯಯಗಳನ್ನು ಇಟ್ಟು ಭೂತನ್ಯೂನಗಳನ್ನು ಮಾಡುತ್ತೇವೋ ಆ ಧಾತುಗಳಿಗೆ ವಿಷಮಧಾತುಗಳೆಂದು ಹೆಸರು. ಕೊಲ್ಲು, ಉಣ್ಣು, ನುಡಿ, ನಿಲ್ಲು, ಕೊಡು, ನೆಗು, ದುಡಿ, ಕಲಿ, ಒದೆ, ಇರು ಮೊದಲಾದ ಧಾತುಗಳು ವಿಷಮಧಾತುಗಳು.

ಯಾವ ಧಾತುಗಳ ಭೂತನ್ಯೂನಗಳನ್ನು ತು ಅಥವಾ ದು ಪ್ರತ್ಯಯಗಳ ಸಹಾಯವಿಲ್ಲದೆ ಹೊಂದುವೆವೋ ಆ ಧಾತುಗಳಿಗೆ ಸಮಧಾತುಗಳೆಂದು ಹೆಸರು. ಅಡು, ದೂಡು, ಕಚ್ಚು, ಬಿಚ್ಚು, ಅರು, ತೀರು, ಆಡಗು, ತೊಡಗು, ಬಣಗು, ಬಿಡಿಸು, ತಡಿಸು, ಬದುಕು, ಮಲಗು, ತಳತಳಿಸು, ಕಳವಳಿಸು ಮೊದಲಾದ ಧಾತುಗಳಿಂದ ಭೂತನ್ಯೂನಗಳನ್ನು ತು ಅಥವಾ ದು ಪ್ರತ್ಯಯಗಳ ಸಹಾಯವಿಲ್ಲದೆ ಹೊಂದುವುದರಿಂದ ಆ ಧಾತುಗಳು ಸಮಧಾತುಗಳೆಂದು ಕರೆಯಲ್ಪಡುತ್ತವೆ.

33. ಪ್ರಶ್ನೆಗಳು.

ಕೆಳಗಿನ ಧಾತುಗಳ ವರ್ತಮಾನ ಭೂತನ್ಯೂನಗಳನ್ನು ಕೊಟ್ಟು ಅವು ಸಮಧಾತುಗಳೋ ವಿಷಮಧಾತುಗಳೋ ಎಂದು ಹೇಳಿರಿ: —

ಗುಡಿಸು, ಮೇಯಿಸು, ಮೇಯು, ಕೊಡು, ಓದು, ಬರೆ, ಮೆಚ್ಚು, ಇಡು, ಮಲಗು, ಮಾರು, ತಿನ್ನು, ಎಬ್ಬಿಸು, ಜರೆಯು, ಬಸೆ, ಹೊರು, ಹೊರಿಸು, ಹೊರಡು, ಕುಡಿ, ಕಟ್ಟು, ಹೊಲಿ, ತೊಡು, ಬರು, ಕುದಿಸು, ಕೆದಕು, ಸೀ, ಬೇ, ವಿಾ, ಕೂಡು, ಹೆಣೆ, ಹಿಡಿ, ತೆಗೆ, ಏಳು, ಕೇಳು, ಕೇಳು, ಬೀಳು, ಇರು, ಬರು, ಹೊರು, ಹೋಗು, ಹೊಗು.

34. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ನ್ಯೂನರೂಪಗಳಿದ್ದರೆ, ಅವನ್ನು ತೋರಿಸಿ, ಅವುಗಳ ಧಾತುಗಳನ್ನು ಹೇಳಿರಿ; ಅವುಗಳ ಅರ್ಥವನ್ನು ಸಂಪೂರ್ಣಮಾಡುವ ಆಖ್ಯಾತಗಳನ್ನು ಹೇಳಿರಿ: —

1. ಹಕ್ಕಿಯು ಗೂಡನ್ನು ಕಟ್ಟಿ, ಮೊಟ್ಟೆಗಳನ್ನು ಇಟ್ಟು, ಆಹಾರವನ್ನು ತರುವುದಕ್ಕೆ ಹೋಯಿತು. 2. ಬರುತ್ತ ಬರುತ್ತ ರಾಯನ ಕುದುರೆ ಕತ್ತೆಯಾಯಿತು. 3. ಜೂಲು ನಾಯಿಯು ನೀರಿನಲ್ಲಿ ದುಮಿಕಿ, ದೂರಕ್ಕೆ ಈಜಿ, ಮುಳುಗುವವನ ಬಳಿಗೆ ಹೋಗಿ ಅವನನ್ನು ರಕ್ಷಿಸುತ್ತದೆ. 4. ಆ ಮುದುಕನೂ ಅವನ ಮಗನೂ ಕತ್ತೆಯಿಂದ ಇಳಿದು, ಇಬ್ಬರೂ

ಸೇರಿ, ಕತ್ತೆಯ ಕಾಲುಗಳನ್ನು ಕಟ್ಟಿ, ಬೊಂಬನ್ನು ಅವುಗಳ ಮಧ್ಯೆ ತೂರಿಸಿ, ಅದನ್ನು ಹೆಗಲ ಮೇಲೆ ಹೊತ್ತು, ಮುಂದಕ್ಕೆ ಹೋಗುತ್ತಿದ್ದರು. 5. ಕಬ್ಬಿಣದ ಹಾರೆಯನ್ನು ನೆಲದಲ್ಲಿ ನೆಟ್ಟು, ಕಾಯನ್ನು ಕುಕ್ಕಿ, ಮಟ್ಟಿಯನ್ನು ಸುಲಿದು, ನಾರನ್ನು ಕೊಡತಿಯಿಂದ ಬಡಿದು, ಕೈಯಿಂದ ಹೊಸಕಿ, ನೀರಿನಲ್ಲಿ ತೊಳೆದು, ಬಿಸಿಲಲ್ಲಿ ಒಣಗಿಸಿ, ಚಗರೆಯನ್ನು ಇಂಗ್ಲಾಂಡಿಗೆ ಕಳುಹಿಸುತ್ತಾರೆ. 6. ಉತ್ತರ ಹಿಂದುಸ್ಥಾನದಲ್ಲಿ ಜೋಳದ ಕಾಳನ್ನು ಬೀಸಿ, ಹಿಟ್ಟನ್ನು ನೀರಲ್ಲಿ ಹಾಕಿ, ಕುದಿಸಿ, ಗಂಜಿ ಮಾಡಿ, ಎಳೆಯ ತೆನೆಗಳನ್ನು ಸುಟ್ಟು, ಕಾಳನ್ನು ಹುರಿದು, ಉಪಯೋಗಿಸುತ್ತಾರೆ. 7. ಪ್ರಾಣಿಗಳು ಸತ್ತು, ಸೊಪ್ಪುಸೆದೆಗಳು ಕೊಳೆತು, ಗಾಳಿಯು ಕೆಟ್ಟು, ವಿಷ ತುಂಬಿ, ಅನೇಕರು ಅದನ್ನು ಸೇದಿ ನಾಶವಾಗಿದ್ದಾರೆ. 8. ಕರಡಿಯು ಹಿಂಗಾಲುಗಳ ಮೇಲೆ ನಿಂತು, ಕತ್ತುವನ್ನು ಅಪ್ಪಿ, ಎಲುಬುಗಳನ್ನು ಮುರಿದು, ಹಗೆಯನ್ನು ಮತ್ತೆ ನೆಲಕ್ಕೆ ಅಪ್ಪಳಿಸಿ, ಕೊಂದುಬಿಡುತ್ತದೆ. 9. ಒಕ್ಕಲಿಗನು ಒಳ್ಳೆಯ ಬಿತ್ತನ್ನು ಆರಿಸಿ, ಗದ್ದೆಯನ್ನು ಉತ್ತು, ಬೀಜವನ್ನು ಬಿತ್ತಿ, ಕಳೆಯನ್ನು ಕಿತ್ತು, ಕೊನೆಗೆ ಸೂಡುಗಳನ್ನು ಕೊಯ್ದು, ಮೆದೆಯನ್ನು ಒಟ್ಟಿ, ಮಂಡದ ಮೇಲೆ ಬಡಿದು, ನೆಲ್ಲನ್ನೂ ಹುಲ್ಲನ್ನೂ ಬೇರ್ಪಡಿಸಿ, ಭತ್ತವನ್ನು ಬೇಯಿಸಿ, ಬಿಸಿಲಿಗೆ ಆರಿಸಿ, ಒರಳಲ್ಲಿ ಕುಟ್ಟಿ, ಹೊಟ್ಟನ್ನು ಸುಲಿದು, ಮುಡಿಯನ್ನು ಕಟ್ಟಿ, ಮಾರುವುದಕ್ಕೆ ಅಕ್ಕಿಯನ್ನು ಕಳುಹಿಸುವನು.

ಪರೀಕ್ಷೆ.

ಪ್ರಯೋಜಕಧಾತುಗಳೆಂದರೇನು? ಪ್ರಯೋಜಕಕ್ರಿಯಾಪದವನ್ನು ಇಟ್ಟು ನಾಲ್ಕು ವಾಕ್ಯಗಳನ್ನು ಮಾಡಿರಿ. ಸಕರ್ಮಕ ಅಕರ್ಮಕಗಳೆಂದರೇನು? ನ್ಯೂನರೂಪಗಳೆಂದರೇನು? ನ್ಯೂನರೂಪಗಳನ್ನು ಹೇಗೆ ಮಾಡುತ್ತೀವೆ? ವರ್ತಮಾನನ್ಯೂನದ ಪ್ರತ್ಯಯವು ಯಾವುದು? ಭೂತನ್ಯೂನದ ಪ್ರತ್ಯಯವು ಯಾವುದು? ಸಮಕ್ರಿಯೆಗಳೆಂದರೇನು? ವಿಷಮಕ್ರಿಯೆಗಳೆಂದರೇನು? ಸಮಕ್ರಿಯೆಗಳಿಗೂ ವಿಷಮಕ್ರಿಯೆಗಳಿಗೂ ಹತ್ತು ಉದಾಹರಣೆಗಳನ್ನು ಕೊಡಿರಿ.

Conjugation of verbs

25ನೆಯ ಪಾಠ.—ಆಖ್ಯಾತಪ್ರತ್ಯಯಗಳೂ ಪುರುಷಾತ್ಮಕರೂಪಗಳೂ.

ಧಾತುವಿನಿಂದ ವರ್ತಮಾನನ್ಯೂನವನ್ನೂ ಭೂತನ್ಯೂನವನ್ನೂ ಹೇಗೆ ಮಾಡಬಹುದೆಂದು ನಿನಗೆ ಗೊತ್ತಾಯಿತು. ಮಾಡು ಎಂಬ ಧಾತುವಿನಿಂದ ಮಾಡುತ್ತ, ಮಾಡಿ ಎಂಬ ನ್ಯೂನಗಳು ಹೇಗಾಗುತ್ತವೆಂದು ನೀನು ಕಲಿತಿರುವೆ. ಮಾಡುತ್ತೇನೆ, ಮಾಡಿದೆನು, ಮಾಡುತ್ತೀ, ಮಾಡಿರಿ, ಮಾಡುತ್ತಾನೆ, ಮಾಡಿದನು ಎಂಬೀ ರೂಪಗಳು ಹೇಗಾಗುತ್ತವೆಂದು ವಿಚಾರಿಸೋಣ.

ISRT

ಮಾಡುತ್ತೇನೆ ಎಂಬ ಪದವು ಮಾಡುತ್ತ ಎಂಬ ವರ್ತಮಾನನ್ಯೂನದ ಮೇಲೆ ಏನೆ ಎಂಬ ಪ್ರತ್ಯಯವನ್ನು ಹಚ್ಚಿದುದರಿಂದಾಯಿತೆಂದು ನೀನೇ ಹೇಳುವೆ. ಮಾಡುತ್ತೇವೆ ಎಂಬ ಪದವು ಮಾಡುತ್ತ ಎಂಬ ವರ್ತಮಾನನ್ಯೂನದ ಮೇಲೆ ಏವೆ ಎಂಬ ಪ್ರತ್ಯಯವನ್ನು ಇಟ್ಟು ದೊರೆಯಿತೆಂದು ನಿನಗೆ ತೋರುವುದು. ವರ್ತಮಾನಕಾಲವನ್ನು ತೋರಿಸುವುದಕ್ಕೆ ವರ್ತಮಾನನ್ಯೂನಗಳ ಮೇಲೆ ಯಾವ ಪ್ರತ್ಯಯಗಳು ಹತ್ತುತ್ತವೆಂದು ಕೆಳಗೆ ಬರೆದ ಪಟ್ಟಿಯಿಂದ ಓದಿ ತಿಳಿದುಕೊಳ್ಳಿರಿ:—

ವರ್ತಮಾನಕಾಲ. Present Tense

ನೋಡು — ಧಾತು.

	ಪುರುಷ	ಸರ್ವನಾಮ	ಆಖ್ಯಾತ	ಪ್ರತ್ಯಯ
ಏಕವಚನ	ಉತ್ತಮ	ನಾನು	ನೋಡುತ್ತೇನೆ	ಏನೆ
	ಮಧ್ಯಮ	ನೀನು	ನೋಡುತ್ತೀ	ಈ
	ಪ್ರಥಮ, ಪುಲ್ಲಿಂಗ	ಅವನು	ನೋಡುತ್ತಾನೆ	ಆನೆ
	" ಸ್ತ್ರೀಲಿಂಗ	ಅವಳು	ನೋಡುತ್ತಾಳೆ	ಆಳೆ
	" ನಪುಂ.	ಅದು	ನೋಡುತ್ತದೆ	ಅದೆ
ಬಹುವಚನ	ಉತ್ತಮ	ನಾವು	ನೋಡುತ್ತೇವೆ	ಏವೆ
	ಮಧ್ಯಮ	ನೀವು	ನೋಡುತ್ತೀರಿ	ಈರಿ
	ಪ್ರಥಮ, ಪು. ಸ್ತ್ರೀ.	ಅವರು	ನೋಡುತ್ತಾರೆ	ಆರೆ
	" ನಪುಂ.	ಅವು ಅವುಗಳು	ನೋಡುತ್ತವೆ	ಅವೆ

ವರ್ತಮಾನಕಾಲವನ್ನು ತೋರಿಸುವುದಕ್ಕೆ ಬರುವ ಪ್ರತ್ಯಯಗಳು ಯಾವುವೆಂದು ಮೇಲಿನ ಪಟ್ಟಿಯಿಂದ ಹೇಳು. ಏನೆ, ಈ, ಆನೆ, ಆಳೆ, ಅದೆ, ಏವೆ, ಈರಿ, ಆರೆ, ಅವೆ. ಇಂಥ ಪ್ರತ್ಯಯಗಳಿಗೆ ಆಖ್ಯಾತಪ್ರತ್ಯಯಗಳೆಂದು ಹೆಸರು. ಧಾತುಗಳ ಮುಂದೆ ಸೇರುವ ಏನೆ, ಏವೆ, ಆನೆ, ಆರೆ ಮೊದಲಾದ ಪ್ರತ್ಯಯಗಳು ಆಖ್ಯಾತಪ್ರತ್ಯಯಗಳು. ಈ ಆಖ್ಯಾತಪ್ರತ್ಯಯಗಳು ಬೇರೆ ಬೇರೆ ಪುರುಷ

ಗಳಲ್ಲಿ ಬೇರೆ ಬೇರೆಯಾಗಿರುತ್ತವೆ. ನಾನು ಎಂಬ ಉತ್ತಮಪುರುಷದಲ್ಲಿ ಏನೆ ಎಂಬುದು ಹತ್ತುತ್ತದೆ; ನೀನು ಎಂಬ ಮಧ್ಯಮಪುರುಷದಲ್ಲಿ ಈ ಎಂಬುದು ಹತ್ತುತ್ತದೆ. ಒಂದೊಂದು ಪುರುಷಕ್ಕೆ ಸಂಬಂಧಿಸಿರುವ ಒಂದೊಂದು ಪ್ರತ್ಯಯವುಂಟು; ಅದನ್ನು ಹಚ್ಚದೆ ಆಖ್ಯಾತಕ್ಕೆ ಮತ್ತೊಂದನ್ನು ಹಚ್ಚಿದರೆ, ವಾಕ್ಯವು ತಪ್ಪಾಗುವುದು. ನಾನು ನೋಡುತ್ತಾನೆ; ಅವರು ನೋಡುತ್ತೇನೆ; ನೀವು ನೋಡುತ್ತದೆ ಮೊದಲಾದ ವಾಕ್ಯಗಳಲ್ಲಿ ಆಯಾ ಪುರುಷಕ್ಕೂ ವಚನಕ್ಕೂ ಸಂಬಂಧಿಸಿದ ಪ್ರತ್ಯಯಗಳನ್ನು ಹಚ್ಚದೆ ಇದ್ದದರಿಂದ ವಾಕ್ಯಗಳು ತಪ್ಪಾದುವು.

ಮೇಲೆ ಕಾಣಿಸಿದ ಆಖ್ಯಾತಪ್ರತ್ಯಯಗಳು ವರ್ತಮಾನನ್ಯೂನಗಳ ಮೇಲೆ ಸೇರುತ್ತವೆ. ಕ್ರಿಯಾಪದದ ವರ್ತಮಾನಕಾಲವನ್ನು ತೋರಿಸಬೇಕಾದರೆ, ವರ್ತಮಾನನ್ಯೂನದ ಮೇಲೆ ತಕ್ಕ ಪ್ರತ್ಯಯಗಳನ್ನು ಹಚ್ಚಬೇಕು.

ಈಗ ಭೂತಕಾಲವನ್ನು ಹೇಗೆ ತೋರಿಸುತ್ತೇವೆಂದು ನೋಡೋಣ. ಮೊದಲು ಭೂತಕಾಲದಲ್ಲಿ ಯಾವ ಆಖ್ಯಾತಪ್ರತ್ಯಯಗಳು ಬರುತ್ತವೋ ಅವುಗಳನ್ನು ನೋಡೋಣ.

ಭೂತಕಾಲ.

ನೋಡು — ಧಾತು.

	ಪುರುಷ	ಸರ್ವನಾಮ	ಆಖ್ಯಾತ	ಪ್ರತ್ಯಯ
ಏಕವಚನ	ಉತ್ತಮ	ನಾನು	ನೋಡಿದೆನು	ಎನು
	ಮಧ್ಯಮ	ನೀನು	ನೋಡಿದಿ / ನೋಡಿದೆ	ಇ, ಎ
	ಪ್ರಥಮ, ಪುಲ್ಲಿಂಗ	ಅವನು	ನೋಡಿದನು	ಅನು
	" ಸ್ತ್ರೀಲಿಂಗ	ಅವಳು	ನೋಡಿದಳು	ಅಳು
	" ನಪುಂ.	ಅದು	ನೋಡಿತು	ಇತು
ಬಹುವಚನ	ಉತ್ತಮ	ನಾವು	ನೋಡಿದೆವು	ಎವು
	ಮಧ್ಯಮ	ನೀವು	ನೋಡಿದಿರಿ	ಇರಿ
	ಪ್ರಥಮ, ಪು. ಸ್ತ್ರೀ.	ಅವರು	ನೋಡಿದರು	ಅರು
	" ನಪುಂ.	ಅವು / ಅವುಗಳು	ನೋಡಿದುವು / ನೋಡಿದವು	ಉವು / ಅವು

The past tense is formed by adding the termina. to the past relative participle of the verb.

ಎನು, ಇ, ಅನು, ಅಳು, ಇತು, ಎವು, ಇರಿ, ಅರು, ಉವು (ಅವು), ಇವೇ ಭೂತ ಕ್ರಿಯೆಯನ್ನು ತೋರಿಸಲು ಬರುವ ಆಖ್ಯಾತಪ್ರತ್ಯಯಗಳು. ಈ ಆಖ್ಯಾತ ಪ್ರತ್ಯಯಗಳು ನೋಡಿ ಎಂಬ ಭೂತನ್ಯೂನದ ಮೇಲೆ ಹತ್ತುವಾಗ ನಡುವೆ ದ ಎಂಬ ಹೊಸ ಅಕ್ಷರವು ಸೇರಿ ನೋಡಿದೆನು, ನೋಡಿದೆ (ನೋಡಿದ), ನೋಡಿದನು, ನೋಡಿದಳು, ನೋಡಿತು, ನೋಡಿದೆವು, ನೋಡಿದಿರಿ, ನೋಡಿದರು, ನೋಡಿದುವು (ನೋಡಿದವು) ಎಂಬ ಭೂತಕಾಲದ ರೂಪಗಳಾಗುವುವು.

ವರ್ತಮಾನ ಭೂತಕಾಲಗಳಲ್ಲಿರುವಂತೆಯೇ ಭವಿಷ್ಯತ್ಕಾಲದಲ್ಲಿಯೂ ಆಖ್ಯಾತಪ್ರತ್ಯಯಗಳು ಇರುತ್ತವೆ. ಇವು ಯಾವುವೆಂದು ಕೆಳಗೆ ಬರೆದ ಪಟ್ಟಿಯಿಂದ ನೋಡಿ ತಿಳಿದುಕೊಳ್ಳಿರಿ:—

ಭವಿಷ್ಯತ್ಕಾಲ.

ನೋಡು — ಧಾತು.

	ಪುರುಷ	ಸರ್ವನಾಮ	ಆಖ್ಯಾತ	ಪ್ರತ್ಯಯ
ಏಕವಚನ	ಉತ್ತಮ	ನಾನು	ನೋಡುವೆನು	ಎನು
	ಮಧ್ಯಮ	ನೀನು	ನೋಡುವೆ / ನೋಡುವಿ	ಎ, ಇ
	ಪ್ರಥಮ, ಪುಲ್ಲಿಂಗ	ಅವನು	ನೋಡುವನು	ಅನು
	" ಸ್ತ್ರೀಲಿಂಗ	ಅವಳು	ನೋಡುವಳು	ಅಳು
	" ನಪುಂ.	ಅದು	ನೋಡುವುದು / ನೋಡುವದು	ಉದು / ಅದು
ಬಹುವಚನ	ಉತ್ತಮ	ನಾವು	ನೋಡುವೆವು	ಎವು
	ಮಧ್ಯಮ	ನೀವು	ನೋಡುವಿರಿ	ಇರಿ
	ಪ್ರಥಮ, ಪು. ಸ್ತ್ರೀ.	ಅವರು	ನೋಡುವರು	ಅರು
	" ನಪುಂ.	ಅವು / ಅವುಗಳು	ನೋಡುವುವು / ನೋಡುವವು	ಉವು / ಅವು

ಭವಿಷ್ಯತ್ಕಾಲದಲ್ಲಿ ಬರುವ ಪ್ರತ್ಯಯಗಳು ಯಾವುವೆಂದರೆ—ಎನು, ಎ(ಇ), ಅನು, ಅಳು, ಉದು (ಅದು), ಎವು, ಇರಿ, ಅರು, ಉವು (ಅವು). ಈ ಪ್ರತ್ಯಯಗಳು

ಧಾತುವಿನ ಮೇಲೆ ನೆಟ್ಟನೆ ಸೇರಿ ಭವಿಷ್ಯತ್ಕಾಲವನ್ನು ತೋರಿಸುವಾಗ ನಡುವೆ ಒಂದು ವಕಾರವು ಬರುತ್ತದೆ. ಇದು ಹೇಗೆ ಬರುತ್ತದೆಂದು ನೀನು ಮುಂದೆ ತಿಳಿಯುವೆ.

ಈ ಪ್ರತ್ಯಯಗಳೆಲ್ಲಾ ಪುರುಷರನ್ನು ಕುರಿತು ಹೇಳುವುದರಿಂದ ಅವು ಧಾತುಗಳ ಮೇಲೆ ಸೇರಿ ಉಂಟಾಗುವ ಕ್ರಿಯಾಪದಗಳಿಗೆ ಪುರುಷಾತ್ಮಕರೂಪಗಳೆಂದು ಹೆಸರು; ಇವುಗಳಿಗೆ ಆಖ್ಯಾತಪದಗಳೆಂಬ ಹೆಸರೂ ಉಂಟು. ಈ ವರೆಗೆ ಓದಿದ ರೂಪಗಳಲ್ಲದೆ ಇನ್ನೂ ಅನೇಕ ಪುರುಷಾತ್ಮಕರೂಪಗಳುಂಟು. ಅವನ್ನು ನೀವು ದೊಡ್ಡವರಾದ ಮೇಲೆ ಕಲಿಯುವಿರಿ.

ಪರೀಕ್ಷೆ.

ವರ್ತಮಾನಕಾಲದ ಆಖ್ಯಾತಪ್ರತ್ಯಯಗಳು ಯಾವುವು? ಭೂತಕಾಲದಲ್ಲಿ ಏಕವಚನದ ಆಖ್ಯಾತಪ್ರತ್ಯಯಗಳು ಯಾವುವು? ಬಹುವಚನದ ಆಖ್ಯಾತಪ್ರತ್ಯಯಗಳು ಯಾವುವು? ವರ್ತಮಾನಕಾಲದ ಆಖ್ಯಾತಪ್ರತ್ಯಯಗಳು ಯಾವುದರ ಮೇಲೆ ಸೇರುತ್ತವೆ? ಭೂತಕಾಲದ ಪ್ರತ್ಯಯಗಳು ಯಾವುದರ ಮೇಲೆ ಸೇರುತ್ತವೆ? ಭವಿಷ್ಯತ್ಕಾಲದ ಆಖ್ಯಾತಪ್ರತ್ಯಯಗಳು ಯಾವುವು? ಅವು ಯಾವುದರ ಮೇಲೆ ಸೇರುತ್ತವೆ? ಪುರುಷಾತ್ಮಕರೂಪಗಳೆಂದರೇನು? ಹಾಗೆ ಹೆಸರು ಬರುವುದಕ್ಕೆ ಕಾರಣವೇನು?

26ನೆಯ ಪಾಠ.—ಅರ್ಥವಿಶೇಷತ್ರಯಗಳು.

1. ಅವನು ಹೋಗುವನು. 2. ಅವನು ಹೋಗನು. 3. ಅವನು ಹೋಗಲಿ.

ಈ ಮೂರು ವಾಕ್ಯಗಳಲ್ಲಿ ಅರ್ಥಭೇದವು ಏನಿದೆ? ಮೊದಲನೆಯ ವಾಕ್ಯದಲ್ಲಿ ಕ್ರಿಯೆಯು ಸಂಭವಿಸಬಹುದೆಂದು ಹೇಳಬೇಕು; ಅವನು ಈಗ ಹೋಗದೆ ಇದ್ದರೂ ಮುಂದೆ ಹೋಗಲುಳ್ಳವನಿದ್ದಾನೆ. ಎರಡನೆಯ ವಾಕ್ಯದಲ್ಲಿ ಕ್ರಿಯೆಯು ಸಂಭವಿಸುವುದಿಲ್ಲವೆಂದೇ ಹೇಳಬೇಕು. ಮೂರನೆಯ ವಾಕ್ಯದಲ್ಲಿ ಅವನು ಹೋಗುವುದಕ್ಕೆ ಮತ್ತೊಬ್ಬರು ಯಾರೋ ಅಪ್ಪಣೆ ಕೊಟ್ಟಂತೆ ತೋರುತ್ತದೆ.

ಕ್ರಿಯೆಯು ನಡೆಯುವುದೆಂದು ಹೇಳುವ ರೂಪವು ಸಂಭವಾರ್ಥ ಎನ್ನಿಸುತ್ತದೆ. ಹೋಗುತ್ತೇನೆ, ಹೋದನು, ಹೋಗುವಳು, ಹೋಗುತ್ತಾರೆ, ಹೋಗುವುದು

Verbs of the indicative mood.

ಎಂಬೀ ರೂಪಗಳು ಸಂಭವಾರ್ಥಕಗಳು. ಈ ಕ್ರಿಯಾಪದಗಳು ಮೂರು ಕಾಲಗಳಲ್ಲಿಯೂ ಸಂಭವಿಸುವ ಕ್ರಿಯೆಗಳನ್ನೇ ಹೇಳುವುವು.

ಕ್ರಿಯೆಯು ನಡೆಯುವುದಿಲ್ಲವೆಂದು ಹೇಳುವ ರೂಪವು ಅಭಾವಾರ್ಥವೆನ್ನಿಸುತ್ತದೆ; ಇದಕ್ಕೆ ನಿಷೇಧಾರ್ಥವೆಂದೂ ಹೆಸರುಂಟು. ಹೋಸೆನು, ಹೋಸನು, ಹೋಸಳು ಎಂಬೀ ರೂಪಗಳು ನಿಷೇಧಾರ್ಥಕಗಳು. ಈ ಕ್ರಿಯಾಪದಗಳು ಮೂರು ಕಾಲಗಳಲ್ಲಿಯೂ ಸಂಭವಿಸದಂಥ ಕ್ರಿಯೆಗಳನ್ನು ಹೇಳುತ್ತವೆ. ಈಗ ನಿಷೇಧರೂಪವನ್ನು ತೋರಿಸುವುದಕ್ಕೆ ಯಾವ ಪ್ರತ್ಯಯಗಳು ಬರುತ್ತವೆಂದು ಕೆಳಗಿನ ಪಟ್ಟಿಯಿಂದ ನೋಡಿ ತಿಳಿದುಕೊಳ್ಳಿರಿ:—

Negative.

ನಿಷೇಧರೂಪ.

ನೋಡು — ಧಾತು.

	ಪುರುಷ	ಸರ್ವನಾಮ	ರೂಪಗಳು	ಪ್ರತ್ಯಯ
ಏಕವಚನ	ಉತ್ತಮ	ನಾನು	ನೋಡೆನು	ಎನು
	ಮಧ್ಯಮ	ನೀನು	ನೋಡೆ	ಎ
	ಪ್ರಥಮ, ಪುಲ್ಲಿಂಗ	ಅವನು	ನೋಡನು	ಅನು
	" ಸ್ತ್ರೀಲಿಂಗ	ಅವಳು	ನೋಡಳು	ಅಳು
	" ನಪುಂ.	ಅದು	ನೋಡದು	ಅದು
ಬಹುವಚನ	ಉತ್ತಮ	ನಾವು	ನೋಡೆವು	ಎವು
	ಮಧ್ಯಮ	ನೀವು	ನೋಡರಿ	ಅರಿ
	ಪ್ರಥಮ, ಪು. ಸ್ತ್ರೀ.	ಅವರು	ನೋಡರು	ಅರು
	" ನಪುಂ.	ಅವು / ಅವುಗಳು	ನೋಡವು	ಅವು

ನಿಷೇಧರೂಪವನ್ನು ಮಾಡುವುದಕ್ಕೆ ಎನು, ಎ, ಅನು, ಅಳು, ಅದು, ಎವು, ಅರಿ, ಅರು, ಅವು ಎಂಬೀ ಪ್ರತ್ಯಯಗಳು ಕ್ರಮವಾಗಿ ಹತ್ತುವುವು. ಈ ಪ್ರತ್ಯಯಗಳು ಧಾತುವಿನ ಮೇಲೆ ಹತ್ತುತ್ತವೆಂದೂ ನೀನು ತಿಳಿಯಬಹುದು.

ISRT

1. ಅವನು ಮನೆಗೆ ಹೋಗಲಿ! 2. ದೇವರು ನಮ್ಮನ್ನು ಕಾಯಲಿ. 3. ಕೆಲಸ ಮಾಡಿದ ಮೇಲೆ ನಾವು ಆಡುವಾ!

ಈ ವಾಕ್ಯಗಳನ್ನು ಓದು! ಈ ವಾಕ್ಯಗಳಲ್ಲಿ ಹೋಗಲಿ ಎಂಬ ಪದದಿಂದ ಹೋಗುವುದಕ್ಕೆ ಅಪ್ಪಣೆಯಾಗಿದೆ ಎಂಬ ಅರ್ಥವು ಹೊರಡುವುದು. ಕಾಯಲಿ ಎಂಬ ಪದದಿಂದ ದೇವರೊಡನೆ ನಮ್ಮ ಮನಸ್ಸಿನ ಆಶೆಯನ್ನು ಬೇಡಿಕೊಂಡಂತೆ ತೋರುತ್ತದೆ. ಮೂರನೆಯ ವಾಕ್ಯದಲ್ಲಿ ಆಡುವಾ ಎಂಬ ಪದದಿಂದ ನಮ್ಮ ಆಶೆಯನ್ನು ನಾವು ತಿಳಿಸಿದಂತೆ ತೋರುತ್ತದೆ; ಈ ಕ್ರಿಯೆಗಳು ಸಂಭವಿಸಲೂ ಬಹುದು. ಅಪ್ಪಣೆ, ಬೇಡಿಕೊಳ್ಳೋಣ, ಆಶೆ, ಅನುಮತಿ ಮೊದಲಾದ ಅರ್ಥಗಳನ್ನು ಹೇಳುವ ಕ್ರಿಯಾರೂಪಗಳು ವಿಧಿರೂಪಗಳೆಂದೂ ವಿಧ್ಯರ್ಥಕಗಳೆಂದೂ ಕರೆಯಲ್ಪಡುತ್ತವೆ. ವಿಧ್ಯರ್ಥಕಗಳಿಗೆ ಯಾವ ಪ್ರತ್ಯಯಗಳು ಬರುತ್ತವೆಂದು ಕೆಳಗಿನ ಪಟ್ಟಿಯಿಂದ ನೋಡಿ ತಿಳಿದುಕೊಳ್ಳಿರಿ:—

ವಿಧಿರೂಪ. Imperative.

ನೋಡು — ಧಾತು.

	ಪುರುಷ	ಸರ್ವನಾಮ	ರೂಪಗಳು	ಪ್ರತ್ಯಯ
ಏಕವಚನ	ಉತ್ತಮ	ನಾನು	ನೋಡುವೆ	ಎ
	ಮಧ್ಯಮ	ನೀನು	ನೋಡು	
	ಪ್ರಥಮ, ಪುಲ್ಲಿಂಗ	ಅವನು	ನೋಡಲಿ	ಅಲಿ
	" ಸ್ತ್ರೀಲಿಂಗ	ಅವಳು		
	" ನಪುಂ.	ಅದು		
ಬಹುವಚನ	ಉತ್ತಮ	ನಾವು	ನೋಡುವಾ (ನೋಡೋಣ)	ಅ
	ಮಧ್ಯಮ	ನೀವು	ನೋಡಿರಿ	ಇರಿ
	ಪ್ರಥಮ, ಪು. ಸ್ತ್ರೀ.	ಅವರು	ನೋಡಲಿ	ಅಲಿ
	" ನಪುಂ.	ಅವು		
		ಅವುಗಳು		

ವಿಧಿರೂಪದ ಪ್ರತ್ಯಯಗಳು ಧಾತುವಿನ ಮೇಲೆ ಹತ್ತುತ್ತವೆಂದೂ ನೀನು ಪಟ್ಟಿಯಿಂದ ಓದಿ ತಿಳಿಯುವೆ.

ISRT

ಕ್ರಿಯಾಪದಗಳಿಗೆ ಬರುವ ಅರ್ಥವಿಶೇಷಗಳು ಮೂರು; ಅವು ಯಾವು ವೆಂದರೆ: ಸಂಭವಾರ್ಥ, ನಿಷೇಧಾರ್ಥ (ಅಭಾವಾರ್ಥ), ವಿಧ್ಯರ್ಥ. ಇವುಗಳಲ್ಲಿ ಸಂಭವಾರ್ಥದ ರೂಪಗಳಿಗೆ ವರ್ತಮಾನ, ಭೂತ, ಭವಿಷ್ಯತ್ತು ಎಂಬೀ ಮೂರು ಕಾಲಗಳಿವೆ. ನಿಷೇಧಾರ್ಥದಲ್ಲಿಯೂ ವಿಧ್ಯರ್ಥದಲ್ಲಿಯೂ ಇರುವ ರೂಪಗಳಿಗೆ ಈ ಮೂರು ಕಾಲಭೇದಗಳಿಲ್ಲ.

ಮಾಡು ಎಂಬ ಧಾತುವಿನಿಂದ ಮಾಡುತ್ತ ಎಂಬ ವರ್ತಮಾನನ್ಯೂನವೂ ಮಾಡಿ ಎಂಬ ಭೂತನ್ಯೂನವೂ ಹೇಗಾಯಿತೆಂದು ನೀನು 24ನೆಯ ಪಾಠದಲ್ಲಿ ಓದಿದೆಯಷ್ಟೆ. ನ್ಯೂನರೂಪಗಳು ಕ್ರಿಯೆಯನ್ನು ಸಂಪೂರ್ಣವಾಗಿ ಹೇಳುವು ದಿಲ್ಲವೆಂದು ನಿನಗೆ ಗೊತ್ತಾಗಿದೆ. ವರ್ತಮಾನ, ಭೂತನ್ಯೂನಗಳಲ್ಲದೆ ಮತ್ತೊಂದು ನ್ಯೂನರೂಪವುಂಟು. ಇದಕ್ಕೆ ನಿಷೇಧನ್ಯೂನವೆಂದು ಹೆಸರು. ಕ್ರಿಯೆಯು ಸಂಭವಿಸುವುದಿಲ್ಲವೆಂಬ ಅರ್ಥವನ್ನು ಈ ನ್ಯೂನರೂಪವು ಪೂರ್ಣ ವಾಗಿ ಹೇಳುವುದಿಲ್ಲ; ಇಂಥ ರೂಪಕ್ಕೆ ನಿಷೇಧನ್ಯೂನವೆಂದು ಹೆಸರು.

1. ಅವನು ಬರೆಯದೆ ಹೋದನು. 2. ಗದ್ದೆಯು ಉಳದೆ ಹಾಳಾಯಿತು. 3. ಸಾಲವು ಕೇಳದೆ ಹೋಯಿತು.

ಈ ವಾಕ್ಯಗಳಲ್ಲಿ ಬರೆಯದೆ, ಉಳದೆ, ಕೇಳದೆ ಎಂಬೀ ಕ್ರಿಯಾರೂಪಗಳು ನಿಷೇಧನ್ಯೂನಗಳಾಗಿವೆ. ಅವುಗಳು ನ್ಯೂನರೂಪಗಳಾದ್ದರಿಂದ ಅವುಗಳ ಅರ್ಥವು ಸಂಪೂರ್ಣವಾಗುವುದಕ್ಕೆ ಮತ್ತೊಂದು ಆಖ್ಯಾತವು ಅಗತ್ಯವಾಗಿದೆ. ಆಖ್ಯಾತವನ್ನು ಪ್ರತಿಯೊಂದು ವಾಕ್ಯದಲ್ಲಿ ಸೇರಿಸಿದೆ ನೋಡು. ಧಾತುವಿನ ಮೇಲೆ ಅದೆ ಎಂಬ ಪ್ರತ್ಯಯವನ್ನು ಹಚ್ಚಿ ನಿಷೇಧನ್ಯೂನವು ಉಂಟಾಗುತ್ತ ದೆಂದೂ ನೀನು ತಿಳಿಯಬಹುದು.

ಪರೀಕ್ಷೆ.

ಕ್ರಿಯಾಪದಗಳಿಗೆ ಬರುವ ಮೂರು ಅರ್ಥವಿಶೇಷಗಳು ಯಾವುವು? ಸಂಭವಾರ್ಥವೆಂದ ರೇನು? ನಿಷೇಧಾರ್ಥವೆಂದರೇನು? ವಿಧ್ಯರ್ಥವೆಂದರೇನು? ನಿಷೇಧರೂಪಗಳನ್ನು ನಾವು ಯಾವಾಗ ಉಪಯೋಗಿಸುತ್ತೇವೆ? ಕೆಲವು ಉದಾಹರಣೆಗಳನ್ನು ಕೊಡು. ವಿಧಿರೂಪಗಳನ್ನು ನಾವು ಯಾವಾಗ ಪ್ರಯೋಗಿಸುತ್ತೇವೆ? ಕೆಲವು ಉದಾಹರಣೆಗಳನ್ನು ಕೊಡು. ಸಂಭವಾರ್ಥಕ್ಕೂ ನಿಷೇಧಾರ್ಥಕ್ಕೂ ಇರುವ ಭೇದವೇನು? ನಿಷೇಧಾರ್ಥದ ಆಖ್ಯಾತಗಳಲ್ಲಿ ಬರುವ ಪ್ರತ್ಯಯಗಳು

ISRT

ಯಾವುವು? ಏಕರೂಪದ ಪ್ರತ್ಯಯಗಳು ಯಾವುವು? ನ್ಯೂನರೂಪಗಳು ಎಷ್ಟು ವಿಧವು? ನ್ಯೂನ ರೂಪಗಳನ್ನು ಮಾಡುವ ಪ್ರತ್ಯಯಗಳು ಯಾವುವು? ಏಳು, ಬರು, ಬೀಳು, ಮಾಡು, ಇವುಗಳ ನ್ಯೂನರೂಪಗಳನ್ನೂ ವರ್ತಮಾನಪುರುಷಾತ್ಮಕರೂಪಗಳನ್ನೂ ಹೇಳು.

Participial adjectives.

27ನೆಯ ಪಾಠ.—ಕೃದ್ವಾಚಿಗಳು.

ಇದು ವರೆಗೆ ಹೇಳಿದ ಕ್ರಿಯಾರೂಪಗಳಲ್ಲದೆ ಇನ್ನೂ ಕೆಲವು ಕ್ರಿಯಾರೂಪಗಳಿವೆ.

1. ಹುಲಿಯನ್ನು ಕೊಂದ ಬೇಡನಿಗೆ ಇನಾಮು ಸಿಕ್ಕಿತು. 2. ತಾಯಿಯು ಅಳುವ ಕೂಸನ್ನು ಸಂತೈಸಿದಳು. 3. ಉಪಾಧ್ಯಾಯನು ಕಾಲೇಗೆ ಬಾರದ ಹುಡುಗರನ್ನು ಶಿಕ್ಷಿಸುತ್ತಾನೆ. 4. ಮಲಗುವ ಮನೆಯಲ್ಲಿ ಬೆಂಕಿ ಉರಿಯುತ್ತಿದ್ದರೆ, ವಾಯು ಕೆಡುತ್ತದೆ. 5. ಹುಡುಗನು ಕಲಿಯದ ಕಾರಣದಿಂದ ಬಡವನಾದನು. 6. ಚಂಪ್ರನು ಏರುವ ರೀತಿಯಲ್ಲಿ ಬಾಲಕನು ಬೆಳೆದನು. 7. ಪೆಟ್ಟು ತಿಂದ ಮೇಲೆ ರಾಮನಿಗೆ ಬುದ್ಧಿ ಬಂದಿತು.

ಮೇಲಿನ ವಾಕ್ಯಗಳಲ್ಲಿ ಕೊಂದ, ಅಳುವ, ಬಾರದ, ಮಲಗುವ, ಕಲಿಯದ, ಏರುವ, ತಿಂದ ಮೊದಲಾದುವುಗಳು ಕ್ರಿಯಾರೂಪಗಳೇ. ಇವು ಇತರ ಕ್ರಿಯಾರೂಪಗಳಂತೆ ಅಖ್ಯೆಗೆ ಆಖ್ಯಾತವಾಗಿ ಬರುವುದಿಲ್ಲ. ಕೊಂದ ಬೇಡನು, ಅಳುವ ಕೂಸು, ಬಾರದ ಹುಡುಗರು, ಮಲಗುವ ಮನೆ—ಇಂಥಾ ಮಾತುಗಳಲ್ಲಿ ಈ ಕ್ರಿಯಾರೂಪಗಳು ನಾಮಪದಗಳಿಗೆ ವಿಶೇಷಣಗಳಾಗುತ್ತವೆ. ಇಂಥ ಕ್ರಿಯಾರೂಪಗಳಿಗೆ ಕೃದ್ವಾಚಿಗಳೆಂದು ಹೆಸರು.

ನಾಮಪದಗಳಿಗೆ ವಿಶೇಷಣಗಳಾಗಿ ಬರುವ ಕ್ರಿಯಾರೂಪಗಳಿಗೆ ಕೃದ್ವಾಚಿಗಳೆಂದು ಹೆಸರು.

ಈ ಕೃದ್ವಾಚಿಗಳಲ್ಲಿ ವರ್ತಮಾನಕೃದ್ವಾಚಿ, ಭೂತಕೃದ್ವಾಚಿ, ನಿಷೇಧ ಕೃದ್ವಾಚಿ ಎಂಬೀ ಮೂರು ಭೇದಗಳಿವೆ. ಅಳುವ ಕೂಸು, ಮಲಗುವ ಮನೆ ಎಂಬಲ್ಲಿ ತೋರುವ ಅಳುವ, ಮಲಗುವ ಎಂಬ ಕ್ರಿಯಾರೂಪಗಳು ವರ್ತಮಾನ ಕೃದ್ವಾಚಿಗಳು. ಕೊಂದ ಬೇಡ, ಆಡಿದ ಹುಡುಗ ಎಂಬಲ್ಲಿ ಕೊಂದ, ಆಡಿದ ಎಂಬಿವು ಭೂತಕೃದ್ವಾಚಿಗಳು; ಏಕೆಂದರೆ ಕ್ರಿಯೆಯು ಹೋದ ಕಾಲದಲ್ಲಿಯೇ

ISRT

ನಡೆದಿದೆ ಎಂದು ತಿಳಿಯಬಹುದು. ಕಲಿಯದ ಹುಡುಗ, ತಿನ್ನದ ಹಣ್ಣು ಎಂಬಲ್ಲಿ ಕ್ರಿಯೆಯು ನಡೆಯುವುದಿಲ್ಲವೆಂದು ಕ್ರಿಯಾರೂಪವು ತೋರಿಸುವುದರಿಂದ ಅವು ನಿಷೇಧಕೃದ್ವಾಚಿಗಳೆಂದು ತಿಳಿಯಬೇಕು.

ಈ ಕೃದ್ವಾಚಿಗಳನ್ನು ಧಾತುವಿನಿಂದ ನಾವು ಹೇಗೆ ಪಡೆಯುತ್ತೇವೆ? ಮೊದಲು ಪಟ್ಟಿಯಿಂದ ರೂಪಗಳನ್ನು ನೋಡಿ ಪ್ರತ್ಯಯಗಳನ್ನು ಕಂಡು ಹಿಡಿಯೋಣ!

ಕೃದ್ವಾಚಿಗಳು.

ನೋಡು
ತಿನ್ನು } — ಧಾತುಗಳು.

ಕಾಲ	ರೂಪ	ಪ್ರತ್ಯಯ
ವರ್ತಮಾನ	ನೋಡುವ ತಿನ್ನುವ	ಉವ
ಭೂತ	ನೋಡಿದ ತಿಂದ	ಇದ, ದ
ನಿಷೇಧ	ನೋಡದ ತಿನ್ನದ	ಅದ

ವರ್ತಮಾನಕೃದ್ವಾಚಿಗಳನ್ನು ರೂಪಿಸುವುದಕ್ಕೆ ಧಾತುವಿನ ಮೇಲೆ ಉವ ಪ್ರತ್ಯಯವನ್ನೂ, ಭೂತಕೃದ್ವಾಚಿಗಳನ್ನು ರೂಪಿಸುವುದಕ್ಕೆ ಧಾತುವಿನ ಮೇಲೆ ಇದ ಪ್ರತ್ಯಯವನ್ನೂ, ನಿಷೇಧಕೃದ್ವಾಚಿಗಳನ್ನು ರೂಪಿಸುವುದಕ್ಕೆ ಧಾತುವಿನ ಮೇಲೆ ಅದ ಪ್ರತ್ಯಯವನ್ನೂ ಹಚ್ಚುತ್ತೇವೆ.

35. ಪ್ರಶ್ನೆಗಳು.

ಕೆಳಗಿನವುಗಳಲ್ಲಿರುವ ನ್ಯೂನರೂಪಗಳನ್ನೂ ಕೃದ್ವಾಚಿಗಳನ್ನೂ ತೋರಿಸಿ, ಅವುಗಳ ಧಾತುಗಳನ್ನು ಹೇಳಿರಿ:—

1. ಕೊಂದ ಪಾಪವು ತಿಂದು ಪರಿಹಾರವಾಗುವುದು. 2. ಹತ್ತಿ ಬೆಳೆಯುವ ಮಣ್ಣಿನಲ್ಲಿ ಗೋದಿಯನ್ನು ಬೆಳೆ ಮಾಡಿ, ಪರದೇಶಗಳಿಗೆ ಕಳುಹಿಸುವೆ, ಊರಲ್ಲಿಯೇ ಸಾಗಿಸ

ಬಿಡುತ್ತಾರೆ. 3. ಕಾಪ ಮರಳು ಮುಚ್ಚಿರುವ ಅರಬಿಸ್ಥಾನದಲ್ಲಿ ಒಂಟೆಯು ನೀರು ಕುಡಿಯದೆ, ಆಹಾರವನ್ನು ತಿನ್ನದೆ, ಎಲ್ಲಿಯೂ ನಿಲ್ಲದೆ ಸರಾಗವಾಗಿ ನಡೆಯುವುದು. 4. ಕೆಟ್ಟ ಮೇಲೆ ಬುದ್ಧಿ ಬಂತು, ಅಟ್ಟ ಮೇಲೆ ಒಲೆ ಉರಿಯಿತು. 5. ದೊಡ್ಡ ಎಲೆಗಳನ್ನು ತೆಗೆದುಕೊಂಡು, ಅವುಗಳಿಗೆ ಸರಿಸೆಯ ಹಾಗೆ ಇರುವ ಅಂಟನ್ನು ಸವರಿ, ಹುಲಿ ತಿರುಗುವ ಮಾರ್ಗದಲ್ಲಿ ಎಲೆಗಳನ್ನು ಹಾಸಿ, ಹುಲಿಗಳನ್ನು ಹಿಡಿಯುತ್ತಾರೆ. 6. ಆ ವನವು ಉಲಿಯುವ ಗಿಳಿಗಳಿಂದಲೂ, ನಲಿಯುವ ನವಿಲುಗಳಿಂದಲೂ, ಕಲಿಯುವ ಶಿಷ್ಯರಿಂದಲೂ, ಕಲಿಸುವ ಗುರುವಿನಿಂದಲೂ ರಮ್ಯವಾಗಿದ್ದಿತು. 7. ನೋಯುವ ಕಾಲ ತಪ್ಪಿದರೂ ಸಾಯುವ ಕಾಲ ತಪ್ಪದು.

ಪರೀಕ್ಷೆ.

ಕೃದ್ವಾಚಿಗಳೆಂದರೇನು? ಕೃದ್ವಾಚಿಗಳಲ್ಲಿ ಎಷ್ಟು ವಿಧಗಳು? ವರ್ತಮಾನಕೃದ್ವಾಚಿಗಳು ಆಗುವುದಕ್ಕೆ ಧಾತುವಿನ ಮೇಲೆ ಹಚ್ಚಬೇಕಾದ ಪ್ರತ್ಯಯವು ಯಾವುದು? ಭೂತಕೃದ್ವಾಚಿಯ ಪ್ರತ್ಯಯವು ಯಾವುದು? ಸಿದ್ಧೇಧಕೃದ್ವಾಚಿಯ ಪ್ರತ್ಯಯವು ಯಾವುದು? ಕೃದ್ವಾಚಿಗಳು ಯಾವುದಕ್ಕೆ ವಿಶೇಷಣಗಳಾಗುತ್ತವೆ? ಉದಾಹರಣೆಗಳನ್ನು ಕೊಡಿರಿ.

Verbal nouns.

28ನೆಯ ಪಾಠ.—ಕೃನ್ನಾಮಗಳೂ ಕ್ರಿಯಾನಾಮಗಳೂ.
(Personal) (Abstract).

1. ಅಳುವವನು ಕಳ್ಳನು. 2. ಏರಿದವನು ಇಳಿಯುವನು. 3. ಬಾಲ್ಯದಲ್ಲಿ ಕಲಿಯದವನು ಮುಪ್ಪಿನಲ್ಲಿ ಅನ್ನವಿಲ್ಲದೆ ಹೋಗುವನು.

ಈ ಮೂರು ವಾಕ್ಯಗಳಲ್ಲಿ ಆಖ್ಯೆಗಳು ಯಾವುವು? ಮೊದಲನೆಯದರಲ್ಲಿ ಅಳುವವನು ಎಂಬುದು, ಎರಡನೆಯದರಲ್ಲಿ ಏರಿದವನು ಎಂಬುದು, ಮೂರನೆಯದರಲ್ಲಿ ಕಲಿಯದವನು ಎಂಬುದು. ಆಖ್ಯೆಯಾಗಿ ನಿಲ್ಲುವ ಪದಗಳು ನಾಮಪದಗಳಾಗಲಿ ಸರ್ವನಾಮಗಳಾಗಲಿ ಇರಬೇಕೆಂದು ನೀನು 9ನೆಯ ಪಾಠದಲ್ಲಿ ಕಲಿತಿರುವೆ. ಈ ವಾಕ್ಯದಲ್ಲಿರುವ ಆಖ್ಯೇಯಪದಗಳು ಇನ್ನೊಂದು ವಿಧದವು. ಇವು ಆಖ್ಯೆಗಳಾಗಿರುವುದರಿಂದ ಇವು ಸಹ ನಾಮಗಳೇ. ಆಖ್ಯೇಯಪದಗಳು ನಾಮಗಳಾಗಿಯೇ ಇರಬೇಕು. ಈ ವಾಕ್ಯದಲ್ಲಿರುವ ಆಖ್ಯೇಯಪದಗಳು ನಾಮಪದಗಳೂ ಅಲ್ಲ, ಸರ್ವನಾಮಗಳೂ ಅಲ್ಲ. ಇವುಗಳಿಗೆ ಕೃನ್ನಾಮಗಳೆಂದು ಹೆಸರು. ಅಳುವವನು ಎಂಬುದು ಅಳು ಎಂಬ ಧಾತುವಿನಿಂದಲೂ, ಏರಿದವನು ಎಂಬುದು ಏರು ಎಂಬ ಧಾತುವಿನಿಂದಲೂ, ಕಲಿಯು

ಪವನು ಎಂಬುದು ಕಲಿ ಎಂಬ ಧಾತುವಿನಿಂದಲೂ ಬಂದಿರುವುದರಿಂದ ಇವುಗಳಿಗೆ ಕೃನ್ನಾಮಗಳೆಂದು ಹೆಸರಾಯಿತು.

ಕೃನ್ನಾಮಗಳನ್ನು ನಾವು ಹೇಗೆ ಮಾಡುತ್ತೇವೆ? ಅಳುವ, ಏರಿಸ, ಕಲಿಯುವ ಎಂಬೀ ಕ್ರಿಯಾರೂಪಗಳು ಕೃದ್ವಾಚಿಗಳೆಂದು ನೀನು ಹಿಂದಿನ ಪಾಠದಲ್ಲಿ ಓದಿದ್ದೀಯೆ. ಕೃದ್ವಾಚಿಗಳಿಗೆ ಪ್ರಥಮಪುರುಷದ ಅವನು, ಅವಳು ಎಂಬ ಸರ್ವನಾಮಗಳನ್ನು ಹಚ್ಚುವುದರಿಂದ ಉಂಟಾಗುವ ರೂಪಗಳಿಗೆ ಕೃನ್ನಾಮಗಳೆಂದು ಹೆಸರು.

ಕೃನ್ನಾಮಗಳು.

ನೋಡು — ಧಾತು.

ಕೃದ್ವಾಚಿ		ಸರ್ವನಾಮ	ಕೃನ್ನಾಮ
ವರ್ತಮಾನ	ನೋಡುವ	ಅವನು	ನೋಡುವವನು
		ಅವಳು	ನೋಡುವವಳು
ಭೂತ	ನೋಡಿದ	ಅವನು	ನೋಡಿದವನು
		ಅವಳು	ನೋಡಿದವಳು
ನಿಷೇಧ	ನೋಡದ	ಅವನು	ನೋಡದವನು
		ಅವಳು	ನೋಡದವಳು

ಕೃನ್ನಾಮಗಳು ನಾಮಗಳಂತೆ ಮನುಷ್ಯರನ್ನು ಕುರಿತು ಹೇಳುತ್ತವೆ. ನಾಮಗಳಿಗೆ ಹೇಗೆ ಲಿಂಗ ವಚನ ವಿಭಕ್ತಿಗಳು ಬರುತ್ತವೋ ಹಾಗೆಯೇ ಕೃನ್ನಾಮಗಳಿಗೂ ಲಿಂಗ ವಚನ ವಿಭಕ್ತಿಗಳು ಹತ್ತುತ್ತವೆ. ಇವು ಕ್ರಿಯಾಪದಗಳ ರೂಪಗಳಾಗಿದ್ದರೂ, ಇವನ್ನು ವ್ಯಾಕರಣದಲ್ಲಿ ನಾಮಗಳಂತೆಯೇ ಅನ್ವಯಿಸಬೇಕು.

ಕೃದ್ವಾಚಿಗಳಿಂದ ಮನುಷ್ಯರನ್ನು ಕುರಿತು ಹೇಳುವ ಕೃನ್ನಾಮಗಳನ್ನು ಮಾಡಿದಂತೆಯೇ ಇನ್ನೊಂದು ವಿಧದ ನಾಮಗಳನ್ನೂ ಮಾಡಬಹುದು.

1. ಮಾತುಮಾತಿಗೆ ನಗುವುದು ಕೆಟ್ಟದು. 2. ಉಪಾಧ್ಯಾಯನು ಹೇಳಿದುದನ್ನು ಹುಡುಗನು ಬರೆದುಕೊಂಡನು. 3. ಮಕ್ಕಳು ಕೋಪಿಸುವುದರಿಂದ ಹಾಳಾಗುತ್ತಾರೆ.

ISRT

ಈ ಮಾತುಗಳಲ್ಲಿ ನಗುವುದು ಎಂದರೆ ನಗೆ, ಹೇಳಿದುದು ಎಂದರೆ ಹೇಳಿಕೆ, ಕೋಪಿಸುವುದು ಎಂದರೆ ಕೋಪ ಎಂದು ಅರ್ಥವಾಗುವುದು. ನಗೆ, ಹೇಳಿಕೆ, ಕೋಪ ಎಂಬಿವು ಭಾವನಾಮಗಳೆಂದು ನಿನಗೆ 15ನೆಯ ಪಾಠದಲ್ಲಿ ಗೊತ್ತಾಗಿದೆ. ನಗುವುದು, ಹೇಳಿದುದು, ಕೋಪಿಸುವುದು ಎಂಬೀ ಪದಗಳು ವಸ್ತುಗಳ ಕ್ರಿಯೆಗಳನ್ನು ಹೇಳುತ್ತವೆ. ಇವುಗಳು ನಗೆ, ಹೇಳಿಕೆ, ಕೋಪ ಮೊದಲಾದ ಭಾವನಾಮಗಳಂತೆ ಹೆಸರುಗಳಲ್ಲದಿದ್ದರೂ, ಭಾವನಾಮಗಳ ಹಾಗೆಯೇ ವಸ್ತುಗಳ ಕ್ರಿಯೆಗಳನ್ನು ಹೇಳುತ್ತವೆ. ಆದುದರಿಂದಲೇ ಇವುಗಳನ್ನು ಒಂದು ವಿಧದ ನಾನುಗಳೆಂದು ಕರೆಯುತ್ತಾರೆ. ಇವುಗಳು ಕ್ರಿಯಾರೂಪಗಳಾದುದರಿಂದ ಇವುಗಳಿಗೆ ಕ್ರಿಯಾನಾಮಗಳೆಂದು ಹೆಸರು.

ಕ್ರಿಯೆಯನ್ನು ಭಾವಾರ್ಥಕನಾಮಗಳಾಗಿ ಹೇಳುವ ಕ್ರಿಯಾರೂಪಗಳಿಗೆ ಕ್ರಿಯಾನಾಮಗಳೆಂದು ಹೆಸರು. ನಗುವುದು, ಹೇಳಿದುದು, ಕೋಪಿಸುವುದು ಮೊದಲಾದ ರೂಪಗಳು ಕ್ರಿಯಾನಾಮಗಳು.

ನೋಡುವುದು, ನೋಡಿದುದು, ನೋಡದುದು ಎಂಬೀ ಕ್ರಿಯಾನಾಮಗಳು ಹೇಗುಂಟಾಗುತ್ತವೆ? ನೋಡುವ, ನೋಡಿದ, ನೋಡದ ಎಂಬಿವು ಕೃದ್ವಾಚಿಗಳೆಂದು ನಿನಗೆ ಹೇಳಿಕೊಟ್ಟಿದ್ದೇನೆ. ಕೃದ್ವಾಚಿಗಳ ಮೇಲೆ ಉದು ಪ್ರತ್ಯಯವನ್ನು ಹಚ್ಚಿದರೆ ಉಂಟಾಗುವ ಕ್ರಿಯಾರೂಪಗಳು ಕ್ರಿಯಾನಾಮಗಳೆನ್ನಿಸುತ್ತವೆ.

ಕ್ರಿಯಾನಾಮಗಳು.

ನೋಡು — ಧಾತು.

ಕೃದ್ವಾಚಿ		ಪ್ರತ್ಯಯ	ಕ್ರಿಯಾನಾಮಗಳು
ವರ್ತಮಾನ	ನೋಡುವ	ಉದು	ನೋಡುವುದು (ನೋಡುವದು, ನೋಡೋದು)
ಭೂತ	ನೋಡಿದ	ಉದು	ನೋಡಿದುದು (ನೋಡಿದ್ದು)
ನಿಷೇಧ	ನೋಡದ	ಉದು	ನೋಡದುದು (ನೋಡದ್ದು)

ಕೃದ್ವಾಚಿಗಳು ನಾಮಪದಗಳಿಗೆ ವಿಶೇಷಣಗಳಾಗಿ ಬರುತ್ತವೆ; ಕೃನ್ನಾಮ ಕ್ರಿಯಾನಾಮಗಳೂ ನಾಮಗಳಂತೆಯೇ ಲಿಂಗ ವಚನ ವಿಭಕ್ತಿಗಳನ್ನು ಹೊಂದುತ್ತವೆ. ಆದುದರಿಂದ ಕೃದ್ವಾಚಿ, ಕೃನ್ನಾಮ, ಕ್ರಿಯಾನಾಮಗಳಿಗೆ ನಾಮಾ

ISRT

ತ್ಮಕರೂಪಗಳೆಂದು ಹೇಳುತ್ತಾರೆ. ಪುರುಷಾತ್ಮಕರೂಪಗಳು ಆಖ್ಯೇಯಪದವು ಮಾಡುವ ಪ್ರವೃತ್ತಿಯನ್ನೂ ಕಾಲವನ್ನೂ ಹೇಳುತ್ತವೆ; ನಾಮಾತ್ಮಕರೂಪಗಳು ನಾಮಗಳಂತೆ ವ್ಯಾಕರಣದಲ್ಲಿ ಅನ್ವಯವಾಗುತ್ತವೆ.*

36. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಿಂದ ಕೃನ್ನಾಮಗಳನ್ನೂ ಕ್ರಿಯಾನಾಮಗಳನ್ನೂ ತೋರಿಸಿರಿ:—

1. ಹಡ್ಡು ಹಾರುವುದನ್ನು ಕಂಡ ಕೂಡಲೇ ಹೇಂಟೆಯು ಅರಚುವುದು. 2. ಬಗ್ಗದವನಿಗೆ ಒಂದು ಗುದ್ದು ಹೆಚ್ಚು. 3. ಉಳುವುದು ಸರಿಯಾದರೆ, ಬೆಳೆಯುವುದು ಸರಿಯಾಗುತ್ತದೆ. 4. ತಾಳಿದವನು ಬಾಳುವನು. 5. ಆಳುವವರಿಗೆ ಆಳಾಗಿ ನಡೆಯಬೇಕು. 6. ಕಳುವುದು ನೀಚವಾದ ಕೆಲಸ. 7. ಕೇಳದೆ ಕೊಡುವವನು ಉತ್ತಮನು, ಕೇಳಿ ಕೊಡುವವನು ಮಧ್ಯಮನು, ಕೇಳಿಯೂ ಕೊಡದವನು ಅಧಮನು. 8. ನಂಬಿದವರನ್ನು ದೇವರು ತ್ಯಜಿಸುವುದಿಲ್ಲ; ಕಾಯುವುದೂ ಕೊಲ್ಲುವುದೂ ಆತನಿಗೆ ಸೇರಿದೆ. 9. ಹೇಳುವವರಿಗೆ ಸುದ್ದಿ ಕೇಳುವವರಿಗೆ ಬುದ್ಧಿ. 10. ಕೇಳದ್ದನ್ನು ಕೇಳಿದ್ದೇವೆಂದು ಹೇಳುವವರೂ, ನೋಡದ್ದನ್ನು ನೋಡಿದ್ದೇವೆಂದು ನುಡಿಯುವವರೂ, ಆಡದ್ದನ್ನು ಆಡಿದ್ದೇವೆಂದು ಮಾತಾಡುವವರೂ ಸುಳ್ಳುಗಾರರೆಂದು ತಿಳಿಯಬೇಕು. 11. ಮಾಡಬಾರದ್ದನ್ನು ಮಾಡಿದರೆ, ಅಗಬಾರದ್ದು ಆಗುವುದು.

ಪರೀಕ್ಷೆ.

ಕೃನ್ನಾಮಗಳೆಂದರೇನು? ಕೃನ್ನಾಮಗಳು ಹೇಗೆ ಉಂಟಾಗುತ್ತವೆ? ಕೃನ್ನಾಮಗಳೆಂದು ಹೆಸರು ಹೇಗೆ ಬಂದಿತು? ಕ್ರಿಯಾನಾಮಗಳೆಂದರೇನು? ಕ್ರಿಯಾನಾಮಗಳಿಗೂ ಕೃನ್ನಾಮಗಳಿಗೂ ಭೇದವೇನು? ಕೃದ್ವಾಚಿ, ಕೃನ್ನಾಮ, ಕ್ರಿಯಾನಾಮ, ಇವುಗಳು ನಾಮಾತ್ಮಕರೂಪಗಳೆಂದು ಏಕೆ ಹೇಳುವರು? ಕೃದ್ವಾಚಿ, ಕೃನ್ನಾಮ, ಕ್ರಿಯಾನಾಮ, ಇವುಗಳನ್ನು ವ್ಯಾಕರಣದಲ್ಲಿ ಹೇಗೆ ಅನ್ವಯಿಸಬೇಕು? ಕೃದ್ವಾಚಿ, ಕೃನ್ನಾಮ, ಕ್ರಿಯಾನಾಮ, ಇವುಗಳಲ್ಲಿ ಒಂದೊಂದಕ್ಕೆ ನಾಲ್ಕು ಉದಾಹರಣೆಗಳನ್ನು ಕೊಡಿರಿ.

29ನೆಯ ಪಾಠ.—ವಿಶೇಷಣಗಳು. Adjunct.

ವಸ್ತುಗಳ ಗುಣವನ್ನೂ ಸಂಖ್ಯೆಯನ್ನೂ ಪರಿಮಾಣವನ್ನೂ ಒಮ್ಮೆಯೇ ತಿಳಿಸುವ ಪದಗಳು ವಿಶೇಷಣಗಳೆಂದು ನೀನು 6ನೆಯ ಪಾಠದಲ್ಲಿ ಓದಿದೆ.

---

* ಇಲ್ಲಿ ಅವ್ಯಯಾತ್ಮಕರೂಪಗಳನ್ನು ಕುರಿತು ಹೇಳಿಲ್ಲ.

ISRT

ವಿಶೇಷಣಪದಗಳು ನಾಮಗಳೊಂದಿಗೆ ಸೇರಿ ಅವುಗಳಿಗೆ ಸಂಬಂಧಿಸುತ್ತವೆ. ವಿಶೇಷಣವು ಯಾವ ನಾಮಕ್ಕೆ ಅನ್ವೆಯಿಸಿರುವುದೋ ಆ ನಾಮಕ್ಕೆ ವಿಶೇಷ್ಯವೆನ್ನುತ್ತಾರೆ. ಪುಟ್ಟ ಕೂಸು ಎಂಬಲ್ಲಿ ಪುಟ್ಟ ಎಂಬುದು ವಿಶೇಷಣ, ಕೂಸು ಎಂಬುದು ವಿಶೇಷ್ಯ. ವಿಶೇಷಣಗಳು ನಾಮಗಳ ಮುಂದೆ ಬಂದರೆ, ಅವುಗಳಿಗೆ ಪೂರ್ವವಿಶೇಷಣಗಳೆನ್ನುವರು; ನಾಮಗಳ ಹಿಂದೆ ಬಂದರೆ, ಅವುಗಳಿಗೆ ಉತ್ತರವಿಶೇಷಣಗಳೆಂದು ಹೆಸರು. ದೊಡ್ಡ ಮರ ಎಂಬಲ್ಲಿ ದೊಡ್ಡ ಎಂಬುದು ಪೂರ್ವವಿಶೇಷಣವಾಗಿದೆ; ಮರವು ದೊಡ್ಡದು ಎಂಬಲ್ಲಿ ದೊಡ್ಡದು ಉತ್ತರವಿಶೇಷಣವಾಗಿದೆ.

ಒಳ್ಳೆಯ ಹುಡುಗಮ; ಹುಡುಗನು ಒಳ್ಳೆಯವನು. ಒಳ್ಳೆಯ ಹುಡುಗರು; ಹುಡುಗರು ಒಳ್ಳೆಯವರು.

ದೊಡ್ಡ ಮರ; ಮರವು ದೊಡ್ಡದು. ದೊಡ್ಡ ಮರಗಳು; ಮರಗಳು ದೊಡ್ಡವು. ಬಿಳಿ ಕೂದಲು; ಕೂದಲು ಬಿಳಿದು. ಬಿಳಿ ಕೂದಲುಗಳು; ಕೂದಲುಗಳು ಬಿಳಿಯವು.

ದಡ್ಡ ಹುಡುಗನು; ಹುಡುಗನು ದಡ್ಡನು. ದಡ್ಡ ಹುಡುಗರು; ಹುಡುಗರು ದಡ್ಡರು. ಬುದ್ಧಿಯುಳ್ಳ ಹುಡುಗಿ; ಹುಡುಗಿ ಬುದ್ಧಿಯುಳ್ಳವಳು; ಹುಡುಗಿಯರು ಬುದ್ಧಿಯುಳ್ಳವರು.

ಮೇಲಿನ ಉದಾಹರಣೆಗಳಿಂದ ನಾಮಗಳಿಗೆ ಯಾವ ಲಿಂಗ ವಚನಗಳು ಬರುತ್ತವೋ ಆ ಲಿಂಗ ವಚನಗಳೇ ಉತ್ತರವಿಶೇಷಣಗಳಿಗೂ ಬರುತ್ತವೆಂದು ತಿಳಿಯಬಹುದು. ಪೂರ್ವವಿಶೇಷಣಗಳಿಗೆ ಈ ಲಿಂಗ ವಚನಗಳು ವಾಡಿಕೆಯಾಗಿ ಬರುವುದಿಲ್ಲ.

ಇಂಥಾ ವಿಶೇಷಣಗಳಿಗೆ ಗುಣವಾಚಕಗಳೆನ್ನುವರು. ಇವು ವಸ್ತುವಿನ ಗುಣವನ್ನಾಗಲಿ ಲಕ್ಷಣವನ್ನಾಗಲಿ ಹೇಳುವ ಪದಗಳು. ಇವುಗಳು ಉತ್ತರವಿಶೇಷಣಗಳಾಗಿ ಬರುವಾಗ ವಿಶೇಷ್ಯದ ಲಿಂಗ ವಚನಗಳನ್ನೇ ಹೊಂದುತ್ತವೆ.

ವಸ್ತುವಿನ ಗುಣಗಳನ್ನಾಗಲಿ ಲಕ್ಷಣಗಳನ್ನಾಗಲಿ ಹೇಳುವ ವಿಶೇಷಣಗಳು ಗುಣವಾಚಕಗಳೆಂದೆನ್ನಿಸುತ್ತವೆ. ದೊಡ್ಡ, ಸಣ್ಣ, ಪುಟ್ಟ, ಚೆಲುವ, ಒಳ್ಳೆ, ಕರಿದು, ಬಿಳಿದು, ಹೊಸತು, ಹಳದು, ಎಳದು ಮೊದಲಾದ ಶಬ್ದಗಳು ಗುಣವಾಚಕಗಳು.

ISRT

ಬೆರಳುಳ್ಳ ಕೈಗಳು; ರತ್ನವುಳ್ಳ ಉಂಗುರ; ಬಲವಾದ ಗಾಳಿ; ಭಾರವಾದ ಹೊರೆ; ಮಕ್ಕಳಿಲ್ಲದ ಮನೆ; ವಿದ್ಯೆಯಿಲ್ಲದ ಶಿಷ್ಯ; ಕ್ಷಿತ್ರನೆಂಬ ರತ್ನ; ಪ್ರಜೆಗಳೆಂಬ ಮಕ್ಕಳು; ಚಂದ್ರನಂಥ ಮುಖ; ತಾವರೆಯಂಥ ಕಣ್ಣು.

ಈ ಮಾತುಗಳಲ್ಲಿ ಮೊದಲನೆಯ ಪದವು ಗುಣವಾಚಕವೆಂದರಿಯಬೇಕು.

ಹೀಗೆ ನಾಮಪದಗಳಿಗೆ ಬೇರೆ ಪ್ರತ್ಯಯಗಳನ್ನಾಗಲಿ ಶಬ್ದಗಳನ್ನಾಗಲಿ ಹಚ್ಚಿ ಗುಣವಾಚಕಗಳನ್ನು ಮಾಡುವುದುಂಟು.

ವಿಶೇಷಣಗಳು ವಸ್ತುವಿನ ಗುಣಗಳನ್ನು ಮಾತ್ರವಲ್ಲ ಸಂಖ್ಯೆಯನ್ನು ಸೂಚಿಸುತ್ತವೆ. ಒಬ್ಬ ಹುಡುಗ, ಒಂದು ಊರು, ಎರಡು ಕಣ್ಣುಗಳು, ಮೂರು ಲೋಕಗಳು, ನಾಲ್ಕು ಸಾಗರಗಳು, ಐದು ಇಂದ್ರಿಯಗಳು, ಆರು ಗುಣಗಳು, ನೂರು ಎಸಳುಗಳು. ಇವು ವಸ್ತುಗಳ ಸಂಖ್ಯೆಯನ್ನು ಹೇಳುವುದರಿಂದ ಸಂಖ್ಯಾ ವಿಶೇಷಣಗಳೆಂದು ಕರೆಯಲ್ಪಡುತ್ತವೆ. ವಸ್ತುಗಳ ಸಂಖ್ಯೆಯನ್ನು ಹೇಳುವ ವಿಶೇಷಣಗಳು **ಸಂಖ್ಯಾವಾಚಕಗಳು.**

ಒಂದು, ಎರಡು, ಮೂರು ಎಂಬೀ ಸಂಖ್ಯಾವಾಚಕಗಳೇ ಒಂದನೆಯ, ಎರಡನೆಯ, ಮೂರನೆಯ ಮೊದಲಾದ ರೂಪಗಳನ್ನು ಹೊಂದಿ ಇನ್ನೊಂದು ವಿಧದ ವಿಶೇಷಣಗಳಾಗುತ್ತವೆ. ಮೊದಲನೆಯ ಸ್ಥಳ, ಎರಡನೆಯ ದಿನ, ಮೂರನೆಯ ಸಾಲು, ಐದನೆಯ ವರ್ಗ, ಆರನೆಯ ಪುಸ್ತಕ, ಇವುಗಳಿಗೆ ಸಂಖ್ಯಾಪೂರಕಗಳೆಂದು ಹೆಸರು. ವಸ್ತುಗಳು ಯಾವ ಸ್ಥಾನದಲ್ಲಿ ಕ್ರಮವಾಗಿ ಸೇರಿವೆ ಎಂಬುದನ್ನು ಈ ಸಂಖ್ಯಾಪೂರಕಗಳು ಹೇಳುತ್ತವೆ. ವಸ್ತುಗಳ ಸ್ಥಾನವನ್ನು ಅನುಕ್ರಮವಾಗಿ ಹೇಳುವ ವಿಶೇಷಣಗಳಿಗೆ **ಸಂಖ್ಯಾಪೂರಕಗಳೆಂದು** ಹೆಸರು. ಒಂದನೆಯ, ಮೂರನೆಯ ಮೊದಲಾದ ಪದಗಳು ಸಂಖ್ಯಾಪೂರಕಗಳು.

ಎರಡು ಮರಗಳು, ಮೂರು ಪುಸ್ತಕಗಳು ಎಂಬಲ್ಲಿ ಸಂಖ್ಯಾವಾಚಕಗಳು ವಸ್ತುಗಳು ಎಷ್ಟಿವೆ ಎಂಬುದನ್ನು ಸರಿಯಾಗಿ ಹೇಳುತ್ತವೆ. ಕೆಲವು ವಿಶೇಷಣಗಳು ಈ ಸಂಖ್ಯೆಯನ್ನು ಸರಿಯಾಗಿ ಹೇಳುವುದಿಲ್ಲ. ಅಷ್ಟು ಜನರು, ಕೈತುಂಬಾ ಹಣ, ಇಷ್ಟೊಂದು ಸುಖ, ನಾಲ್ಕು ಪಾಲು ಫಲಾಹಾರ, ಇನ್ನಿಷ್ಟು ಭಿಕ್ಷೆ, ಕೈಯುದ್ದ ಮರ, ಈ ಮಾತುಗಳಲ್ಲಿ ವಿಶೇಷಣಗಳು ವಸ್ತುಗಳ ಸಂಖ್ಯೆಯನ್ನು ಹೇಳದೆ ಅವುಗಳ ಗಾತ್ರವನ್ನೋ ಪರಿಮಾಣವನ್ನೋ ಹೇಳುತ್ತವೆ. ಇಂಥವುಗಳಿಗೆ ಪರಿ

ಮಾಣವಾಚಕಗಳೆಂದು ಹೆಸರು. ವಸ್ತುಗಳ ಪರಿಮಾಣವನ್ನು ಅಥವಾ ಅಳತೆಯನ್ನು ಸೂಚಿಸುವ ವಿಶೇಷಣಗಳು ಪರಿಮಾಣವಾಚಕಗಳು. ಅಷ್ಟು, ಇಷ್ಟು, ಎಲ್ಲ, ಕೆಲವು, ಹಲವು ಮೊದಲಾದುವುಗಳು ಪರಿಮಾಣವಾಚಕಗಳು.

ಮೇಗಣ ಪೇಟಿ, ಮೂಡಣ ದಿಕ್ಕು, ಕೆಳಗಿನ ಸೀಮೆ, ಅಲ್ಲಿಯ ಜನರು, ಇಲ್ಲಿಯ ಮಕ್ಕಳು ಮೊದಲಾದ ಮಾತುಗಳಲ್ಲಿ ವಿಶೇಷಣವು ಕ್ರಿಯಾವಿಶೇಷಣವಾಗಿದ್ದು ಷಷ್ಠಿವಿಭಕ್ತಿಯನ್ನು ಹೊಂದಿದೆ. ವಿಶೇಷಣವು ವಸ್ತುವಿರುವ ಸ್ಥಳವನ್ನು ಸೂಚಿಸುತ್ತದೆ. ಆದುದರಿಂದ ಇಂಥಾ ವಿಶೇಷಣಗಳಿಗೆ ಸ್ಥಳವಾಚಕಗಳೆಂದು ಹೆಸರು; ಇವುಗಳನ್ನು ದಿಗ್ವಾಚಕಗಳೆಂದೂ ಕರೆಯುವುದುಂಟು. ವಸ್ತುಗಳ ಸ್ಥಳವನ್ನು ಅಥವಾ ದಿಕ್ಕನ್ನು ಸೂಚಿಸುವ ವಿಶೇಷಣಗಳು ಸ್ಥಳವಾಚಕಗಳು. ಮೇಗಣ, ಹಿಂದಣ, ಕೆಳಗಣ ಮೊದಲಾದ ಪದಗಳು ದಿಗ್ವಾಚಕಗಳು.

ಕೆಲವು ವಿಶೇಷಣಗಳು ವಸ್ತುವಿನ ಕಾಲವನ್ನು ಸೂಚಿಸುತ್ತವೆ. ಇಂದಿನ ಸುಖ, ನಾಳಿನ ದುಃಖ, ಅಂದಿನ ಮೋಸ, ಆಗಿನ ಕಂಟಕ, ಇಂಥಾ ವಿಶೇಷಣಗಳಿಗೆ ಕಾಲವಾಚಕಗಳೆಂದು ಹೆಸರು. ವಸ್ತುಗಳ ಕಾಲವನ್ನು ಸೂಚಿಸುವ ವಿಶೇಷಣಗಳು ಕಾಲವಾಚಕಗಳು. ಇಲ್ಲಿ ಸಹ ವಿಶೇಷಣಗಳು ಕ್ರಿಯಾವಿಶೇಷಣಗಳಾಗಿದ್ದು ಷಷ್ಠಿವಿಭಕ್ತಿಯನ್ನು ಹೊಂದಿವೆ.

ಕೃದ್ವಾಚಿಗಳನ್ನು ವಿಶೇಷಣಗಳಾಗಿ ಅನ್ವಯಿಸಬೇಕೆಂದು ನೀನು 27ನೆಯ ಪಾಠದಲ್ಲಿ ಓದಿರುವೆ. ಅಳುವ ಕೂಸು, ಬಿಟ್ಟ ಕಾಲೆ, ಮಾಡದ ಕಾರ್ಯ, ಹೋದ ವರ್ಷ, ಓದದ ಬಾಯಿ, ಅಳಿದ ಊರು, ಮಲಗುವ ಕೊಟಡಿ – ಈ ಮಾತುಗಳಲ್ಲಿ ಕೃದ್ವಾಚಿಗಳೇ ವಿಶೇಷಣಗಳಾಗುವುವು. ವಿಶೇಷಣಗಳು ಕೃದ್ವಾಚಿಗಳಾದರೆ, ಆ ವಿಶೇಷಣಗಳಿಗೆ ಕೃದ್ವಾಚಕಗಳೆಂದು ಹೆಸರು.

ನಾಮಪದಗಳ ಅಥವಾ ಸರ್ವನಾಮಗಳ ಷಷ್ಠಿವಿಭಕ್ತಿಯ ರೂಪವು ವಿಶೇಷಣವಾಗಿ ಬರುವುದುಂಟು. ಹುಡುಗರ ಕಾಲೆ, ನನ್ನ ಮನೆ, ಕೋಳಿಯ ಕೂಗು, ಮಕ್ಕಳ ಆಟ, ಪ್ರಜೆಗಳ ಸುಖ, ಅರಸನ ರಾಜ್ಯಭಾರ – ಈ ಮಾತುಗಳಲ್ಲಿರುವ ಪೂರ್ವಪದಗಳನ್ನು ವಿಶೇಷಣಗಳನ್ನಾಗಿಯೇ ತೆಗೆದುಕೊಳ್ಳಬೇಕು.

ಈಗ ವಿಶೇಷಣಗಳು ನಾಮಗಳಿಗೆ ಸಂಬಂಧಿಸುತ್ತವೆಂದು ನಿನಗೆ ಗೊತ್ತಾಯಿತು; ವಿಶೇಷಣಗಳಲ್ಲಿ ಗುಣವಾಚಕ, ಸಂಖ್ಯಾವಾಚಕ, ಸಂಖ್ಯಾಪೂರಕ, ದಿಗ್ವಾಚಕ, ಕಾಲವಾಚಕ, ಕೃದ್ವಾಚಕ ಮೊದಲಾದ ಅನೇಕ ಭೇದಗಳುಂಟು.

ISRT

37. ಪ್ರಶ್ನೆಗಳು.

ಕೆಳಗಿನವುಗಳಲ್ಲಿ ವಿಶೇಷಣಗಳನ್ನು ತೋರಿಸಿ ಅವು ಎಂತಹ ವಿಶೇಷಣಗಳೆಂದು ಹೇಳಿರಿ:—

1. ಎಲ್ಲ ಜನರನ್ನು ಮೆಚ್ಚಿಸುವುದಕ್ಕೆ ಪ್ರಯತ್ನಿಸುವುದು ಹುಚ್ಚು ಕೆಲಸ. 2. ಒಂದಾನೊಂದು ಊರಿನಲ್ಲಿ ಒಬ್ಬಾನೊಬ್ಬ ರಾಜನು ಇದ್ದನು. 3. ಶೀತ ದೇಶಗಳಲ್ಲಿ ದೊರೆಯುವ ಜಿಂಕೆಗಳು ಅಲ್ಲಿನ ನಿವಾಸಿಕರಿಗೆ ಅನೇಕ ಪ್ರಯೋಜನಗಳಿಗೆ ಬರುತ್ತವೆ. 4. ದಯಾಳುವಾದ ಭಗವಂತನು ಬಡವರ ಗೋಳನ್ನು ಕೇಳಲಾರದೆ ಸಮೃದ್ಧವಾದ ಮಳೆಯನ್ನು ಕರುಣಿಸಿದನು. 5. ಈ ರಮಣೀಯವಾದ ಪ್ರಪಂಚದಲ್ಲಿ ಇಷ್ಟೊಂದು ದುಃಖವು ಉಂಟಾಗುವುದಕ್ಕೆ ಕಾರಣವೇನು? 6. ಒಬ್ಬ ಮನುಷ್ಯನು ತೀಕ್ಷ್ಣವಾದ ಖಡ್ಗದಿಂದ ನಿನ್ನ ಶರೀರವನ್ನು ಖಂಡಿಸಿದರೂ ನೀನು ದುಷ್ಟ ವಾಕ್ಯನ್ನು ಆಡಬೇಡ. 7. ದಟ್ಟವಾದ ಬೀದಿಗಳಲ್ಲಿ ವಾಸ ಮಾಡುವುದಕ್ಕಿಂತ ಉಪವನವುಳ್ಳ ಮನೆಗಳಲ್ಲಿ ವಾಸ ಮಾಡುವುದು ಮೇಲು. 8. ಹುಲಿಯು ಇತರ ಮೃಗಗಳನ್ನು ಕೊಂದು ತಿನ್ನುವಂತೆ ನೀರಿನಲ್ಲಿ ಬೇರೆ ಜೀವಿಗಳನ್ನು ಬೆನ್ನಟ್ಟಿಕೊಂಡು ತಿನ್ನುವ ಭಯಂಕರವಾದ ದೊಡ್ಡ ಮೀನುಗಳುಂಟು. 9. ಆನೆಗಳಿಗೆ ಚಿಕ್ಕ ಕಣ್ಣುಗಳೂ ಮೊರದಂತೆ ಕಿವಿಗಳೂ ಕಂಬದಂತೆ ಕಾಲುಗಳೂ ಕೊರಡಿನಂತೆ ದಂತಗಳೂ ಉಂಟು. 10. ಕೆಳಗಿನ ಪೇಟೆಯಿಂದ ಮೇಲಿನ ಪೇಟೆಗೆ ಹೋಗಬೇಕಾದರೆ, ಸಾಲಾದ ಅಂಗಡಿಗಳನ್ನೂ ಉದ್ದವಾದ ಬೀದಿಗಳನ್ನೂ ದೊಡ್ಡ ಮನೆಗಳನ್ನೂ ದಾಟಬೇಕು.

ಪರೀಕ್ಷೆ.

ವಿಶೇಷಣಗಳೆಂದರೇನು? ವಿಶೇಷಣಗಳಾಗಿ ಬರುವ ಪದಗಳು ಯಾವುವು? ಸಂಖ್ಯಾವಾಚಕಗಳಿಗೂ ಸಂಖ್ಯಾಪೂರಕಗಳಿಗೂ ಭೇದವೇನು? ಕ್ರಿಯಾವಿಶೇಷಣಗಳು ವಿಶೇಷಣಗಳಾಗಿ ಬರುತ್ತವೆ ಎಂಬುದಕ್ಕೆ ಉದಾಹರಣೆಗಳನ್ನು ಕೊಡು. ಕೃದ್ವಾಚಕಗಳೆಂದರೇನು? ದಿಗ್ವಾಚಕಗಳು ಏನನ್ನು ತೋರಿಸುತ್ತವೆ? ಸರ್ವನಾಮಗಳು ವಿಶೇಷಣಗಳಾಗುತ್ತವೆ ಎಂಬುದಕ್ಕೆ ಉದಾಹರಣೆಗಳನ್ನು ಕೊಡು. ಪರಿಮಾಣವಾಚಕಗಳೆಂದರೇನು?

Indeclinable, adverbs. Postpositions.

30ನೆಯ ಪಾಠ.—ಅವ್ಯಯಗಳೂ ಕ್ರಿಯಾವಿಶೇಷಣಗಳೂ ಉಪಸರ್ಗಗಳೂ.

ಅವ್ಯಯಗಳೆಂದರೆ ನಾಮಗಳೂ ವಿಶೇಷಣಗಳೂ ಕ್ರಿಯಾಪದಗಳೂ ಅಲ್ಲದ ಶಬ್ದಗಳು. ಲಿಂಗ ವಚನ ವಿಭಕ್ತಿರೂಪಗಳು ಹೊಂದದ ಶಬ್ದಗಳು ಅವ್ಯಯಗಳೆಂದೆನ್ನಿಸುತ್ತವೆ.

ISRT

ಅತ್ತ, ಇತ್ತ, ಅಂದು, ಇಂದು, ಬೆಳಗ್ಗೆ, ವೇಳೆ, ಬಲವಾಗಿ, ಫಕ್ಕನೆ, ಕೆಮ್ಮನೆ, ಊ, ಮತ್ತು, ಆದರೆ, ಅದರೂ, ನಡುವೆ, ಒಳಗೆ, ಕುರಿತು, ಬಳಿಕ, ಆಹಾ, ಓಹೋ, ಇಕೋ, ಅಯ್ಯೋ, ಅಬ್ಬಾ, ಹಾಹಾ, ಕಜಾಸ್, ಗಳಗಳನೆ, ದಡದಡನೆ.

ಇಂಥ ಶಬ್ದಗಳು ನಾಮಗಳಂತೆ ಎಲ್ಲಾ ವಿಭಕ್ತಿಗಳನ್ನೂ, ಕ್ರಿಯಾಪದಗಳಂತೆ ಮೂರು ಕಾಲಗಳನ್ನೂ ಹೊಂದದ ಕಾರಣ ಅವುಗಳಿಗೆ ಅವ್ಯಯಗಳೆಂದು ಹೆಸರಾಗಿದೆ. ಇವು ವಾಕ್ಯದಲ್ಲಿ ಅಖ್ಯೆ ಆಖ್ಯಾತ ಕರ್ಮಪದಗಳಾಗಿಯೂ ಬರಲಾರವು. ಕೆಲವು ಅವ್ಯಯಗಳು ಕ್ರಿಯೆಯು ಹೇಗೆ ನಡೆಯುತ್ತಿದೆ ಎಂದು ಹೇಳುವುದಕ್ಕೆ ಬರುತ್ತವೆ.

ಹಣ್ಣು ಮೇಲಿಂದ ಬಿದ್ದಿತು;
ಹುಡುಗನು ಅಲ್ಲಿ ಇದ್ದನು;
ರಾಮನು ಮತ್ತೆ ಮತ್ತೆ ಕೇಳಿದನು;
ರಾಜರು ನಮ್ಮ ಊರಿಗೆ ಒಮ್ಮೆ ಬಂದರು;
ದೇವರ ನಾಮವನ್ನು ಇನ್ನೂ ಇನ್ನೂ ಹೇಳು;
ಗಾಳಿಯು ಬಲವಾಗಿ ಬೀಸಿತು;
ಹುಡುಗನು ಚೆನ್ನಾಗಿ ಓದಿದನು;
ಅವನು ಕೆಲಸವನ್ನು ಹೇಗಾದರೂ ಮಾಡಿದನು;
ಕೌಶಿಕನು ಮುನಿಯಾಗಿ ಜೀವಿಸಿದನು;
ಹೈದರನು ಅರಸಾಗಿ ರಾಜ್ಯವಾಳಿದನು.

ಇಲ್ಲಿ ತೋರುವ ಅವ್ಯಯಗಳು ಕ್ರಿಯಾಪದಗಳಿಗೆ ಸಂಬಂಧಿಸಿ ಅವುಗಳನ್ನು ವಿಶೇಷಿಸುತ್ತವೆ. ಆದುದರಿಂದಲೇ ಅವುಗಳಿಗೆ ಕ್ರಿಯಾವಿಶೇಷಣಗಳೆಂದು ಹೆಸರು. ಇವು ಕ್ರಿಯೆಯು ಹೇಗೆ ನಡೆಯಿತು, ಎಲ್ಲಿ ನಡೆಯಿತು, ಯಾವಾಗ ನಡೆಯಿತು ಎಂದು ಹೇಳುವುದರಿಂದ ಕ್ರಿಯೆಗಳಿಗೆ ಅನ್ವಯವಾಗುತ್ತವೆ.

ಕ್ರಿಯೆಯು ನಡೆಯುವ ಸ್ಥಳವನ್ನೂ ಅಥವಾ ಕಾಲವನ್ನೂ ಅಥವಾ ರೀತಿಯನ್ನೂ ಸೂಚಿಸುವ ಅವ್ಯಯಗಳಿಗೆ ಕ್ರಿಯಾವಿಶೇಷಣಗಳೆಂದು ಹೆಸರು.

ಕ್ರಿಯಾವಿಶೇಷಣಗಳು ಅವ್ಯಯಗಳಾಗಿದ್ದರೂ ಅವುಗಳಲ್ಲಿ ಕೆಲವುಗಳಿಗೆ ನಾಮಗಳಂತೆಯೇ ವಿಭಕ್ತಿರೂಪಗಳು ಹತ್ತುತ್ತವೆ. ರಾಮನು ಅಲ್ಲಿ ಹೋದನು;

ISRT

ರಾಮನು ಅಲ್ಲಿಗೆ ಹೋದನು; ರಾಮನು ಅಲ್ಲಿಂದ ಹೋದನು; ರಾಮನು ಹಿಂದು ಹೋದನು; ರಾಮನು ಹಿಂದಕ್ಕೆ ಹೋದನು; ರಾಮನು ಹಿಂದಿಂದ ಬಂದನು. ವಿಭಕ್ತಿ ರೂಪಗಳನ್ನು ಹೊಂದಿದರೂ ಇವುಗಳಿಗೆ ಲಿಂಗ ವಚನ ಭೇದವು ಇರುವುದಿಲ್ಲ. ಆದುದರಿಂದ ಇವುಗಳನ್ನು ಕ್ರಿಯಾವಿಶೇಷಣಾವ್ಯಯಗಳೆಂದು ತಿಳಿಯಬೇಕು.

ಮುದುಕನು ಕೋಪವಾಗಿ ಹೋದನು; ಹುಡುಗನು ವಿನೋದವಾಗಿ ಮಾತಾಡಿದನು; ಸೀತೆಯು ಮಧುರವಾಗಿ ಹಾಡಿದಳು; ದೇವರನ್ನು ಸ್ಥಿರವಾಗಿ ಭಜಿಸು; ಸೂರ್ಯನು ಪ್ರಕಾಶವಾಗಿ ಹೊಳೆಯುತ್ತಾನೆ. ಈ ವಾಕ್ಯಗಳಲ್ಲಿ ಕೋಪವಾಗಿ, ವಿನೋದವಾಗಿ, ಪ್ರಕಾಶವಾಗಿ ಎಂಬಿವು ಕ್ರಿಯಾವಿಶೇಷಣಗಳೇ. ಇವು ನಾಮ ಪದಗಳಿಗೆ ಆಗಿ ಎಂಬುದನ್ನು ಹಚ್ಚಿದುದರಿಂದ ಉಂಟಾಗಿವೆ. ನಾಮಪದಗಳಿಗೂ ಗುಣವಚನಗಳಿಗೂ 'ಆಗಿ' ಎಂಬ ನ್ಯೂನರೂಪವನ್ನು ಹಚ್ಚಿ ಕ್ರಿಯಾವಿಶೇಷಣಗಳನ್ನು ಮಾಡುವುದುಂಟು. ಮಧುರವಾಗಿ, ಸ್ಥಿರವಾಗಿ ಎಂಬಿವು ಗುಣವಚನಗಳಿಗೆ ಆಗಿ ಎಂಬುದನ್ನು ಹಚ್ಚಿಸಿ ಬಂದ ಕ್ರಿಯಾವಿಶೇಷಣಗಳು.

38. ಪ್ರಶ್ನೆಗಳು.

ಕೆಳಗಿನವುಗಳಲ್ಲಿ ಕ್ರಿಯಾವಿಶೇಷಣಗಳನ್ನು ತೋರಿಸಿರಿ: —

1. ಈ ದೇಶದಲ್ಲಿ ಎಲ್ಲೆಲ್ಲಿಯೂ ಸಾಧಾರಣವಾಗಿ ಹರಡಿಕೊಂಡಿರುವ ರೋಗವು ಚಳಿಜ್ವರವು. 2. ಈ ರೋಗವು ಹೆಚ್ಚು ಕಡಮೆ ಎಲ್ಲರಿಗೂ ಒಂದು ವೇಳೆ ಬಂದಿದೆ. 3. ಗಂಗಾನದಿಯು ಪರ್ವತಮಾರ್ಗವಾಗಿ ಹರಿದು ಅನೇಕ ಮುಖವಾಗಿ ಸಮುದ್ರಕ್ಕೆ ಬೀಳುತ್ತದೆ. 4. ನಾವು ಇಲ್ಲಿ ನಿನ್ನೆ ಬಂದೆವು; ಈ ಹೊತ್ತು ನಿಲ್ಲುತ್ತೇವೆ; ನಾಳೆ ಅಲ್ಲಿಗೆ ಹೋಗುವೆವು. 5. ಡೊಂಬನು ನುಂಗಿದ ಕತ್ತಿಯನ್ನು ಮೆಲ್ಲಗೆ ಹೊರಕ್ಕೆ ತೆಗೆಯಲಾಗಿ ಅಲ್ಲಿ ಕೂಡಿದ ಜನರು ಅತ್ಯಂತವಾಗಿ ಆಶ್ಚರ್ಯ ಪಟ್ಟರು. 6. ಸಮುದ್ರದಲ್ಲಿ ಬಹಳ ದೂರ ಪ್ರಯಾಣ ಮಾಡಿದರೂ ಸುತ್ತಲೂ ನೀರಲ್ಲದೆ ಇನ್ನಾವುದೂ ಸರಿಯಾಗಿ ಗೋಚರವಾಗುವುದಿಲ್ಲ. 7. ನೀರು ಚೆನ್ನಾಗಿ ಕಾಸಿದರೆ, ಆವಿಯಾಗಿ ಮೇಲಕ್ಕೆ ಏರುತ್ತದೆ; ಅಲ್ಲಿ ಮೋಡಗಳಾಗಿ, ಪರ್ವತದ ಶಿಖರಗಳಿಗೆ ತಾಗಿ ತಂಪಾಗಿ, ಮಳೆಯಾಗಿ ಕೆಳಕ್ಕೆ ಸುರಿಯುತ್ತದೆ. 8. ಹೊರಗೆ ನೋಡಿದರೆ ಕೋಟೆ, ಒಳಗೆ ನೋಡಿದರೆ ಓಟೆ.

1. ನಾನು ನಿನಗೋಸ್ಕರ ಪ್ರಾರ್ಥನೆ ಮಾಡುತ್ತೇನೆ. 2. ಮಗನ ದೆಸೆಯಿಂದ ತಂದೆಯು ಸುಖಿ ಪಟ್ಟನು. 3. ಸಣ್ಣ ಮಾತಿನ ಸಲುವಾಗಿ ಜಗಳವಾಡಬಾರದು. 4. ಎಲ್ಲರಿಗಿಂತ ದೇವರೇ ದೊಡ್ಡವನು. 5. ಕೈಯೊಳಗೆ ಹಣವಿಲ್ಲ; ಮೈಯೊಳಗೆ ಗುಣವಿಲ್ಲ. 6. ರಾಮನ ಒಡನೆ ಸೀತೆಯು ವನಕ್ಕೆ ಹೋದಳು. 7. ಲಕ್ಷ್ಮಣನು ಅಣ್ಣನ ಸಂಗಡ

ISRT

ಹೋದನು. 8. ನಿನ್ನ ಮೇಲೆ ನನಗೆ ನಂಬುಗೆ ಇಲ್ಲ. 9. ಅವನ ಬಳಿಯಲ್ಲಿ ಹಣವಿದೆ. 10. ಮನೆಯ ಹತ್ತಿರ ತೋಟವುಂಟು.

ಈ ವಾಕ್ಯಗಳಲ್ಲಿ ತೋರುವ ಓಸ್ಕರ, ದೆಸೆಯಿಂದ, ಇಂತ, ಒಳಗೆ, ಒಡನೆ, ಸಂಗಡ, ಮೇಲೆ, ಬಳಿಯಲ್ಲಿ, ಹತ್ತಿರ ಎಂಬೀ ಶಬ್ದಗಳು ಅವ್ಯಯಗಳು. ಅವುಗಳು ಲಿಂಗ ವಚನ ವಿಭಕ್ತಿರೂಪಗಳನ್ನು ಹೊಂದುವುದಿಲ್ಲ. ಈ ಅವ್ಯಯಗಳು ಕ್ರಿಯಾವಿಶೇಷಣಗಳಂತೆ ಕ್ರಿಯಾಪದಗಳಿಗೆ ಸಂಬಂಧಿಸುವುದಿಲ್ಲ. ಇವು ನಾಮವಿಭಕ್ತಿಗಳ ಅರ್ಥದಲ್ಲಿಯೇ ಉಪಯೋಗಿಸಲ್ಪಡುತ್ತವೆ. ವಿಭಕ್ತಿ ಪ್ರತ್ಯಯಗಳ ಸ್ಥಳದಲ್ಲಿ ನಾಮಪದಗಳ ಮೇಲೆ ಹತ್ತುವ ಅವ್ಯಯಗಳಿಗೆ ಉಪಸರ್ಗಗಳೆಂದು ಹೆಸರು. ಹತ್ತಿರ, ಸಂಗಡ, ಒಡನೆ, ಒಂದಿಗೆ, ಸಲುವಾಗಿ, ಬಗ್ಗೆ, ತನಕ, ವರೆಗೆ, ಮಟ್ಟಿಗೆ, ಹಾಗೆ, ಅಂತೆ, ಹೊರತು, ಕುರಿತು, ಮೇರೆಗೆ, ಮುಖಾಂತರ, ಬಳಿಗೆ ಮೊದಲಾದ ಶಬ್ದಗಳು ಉಪಸರ್ಗಾವ್ಯಯಗಳು.

ಕ್ರಿಯಾವಿಶೇಷಣಗಳು ಕ್ರಿಯಾಪದಗಳಿಗೆ ಸಂಬಂಧಿಸುತ್ತವೆ; ಉಪಸರ್ಗಗಳು ವಿಭಕ್ತಿಪ್ರತ್ಯಯಗಳ ಸ್ಥಳದಲ್ಲಿ ನಾಮಗಳ ಮೇಲೆ ಬರುತ್ತವೆ. ನಾನು ಮೇಲೆ ನೋಡಿದೆನು; ತಲೆಯ ಮೇಲೆ ಪುಟ್ಟಿಯನ್ನು ಇಟ್ಟುಕೊಂಡಿದ್ದಾನೆ. ಮೊದಲನೆಯ ವಾಕ್ಯದಲ್ಲಿ ಮೇಲೆ ಎಂಬುದು ನೋಡಿದೆನು ಎಂಬ ಕ್ರಿಯಾಪದಕ್ಕೆ ಸಂಬಂಧಿಸಿರುವುದರಿಂದ ಅದು ಕ್ರಿಯಾವಿಶೇಷಣಾವ್ಯಯವು. ಎರಡನೆಯದರಲ್ಲಿ ಮೇಲೆ ಎಂಬುದು ತಲೆ ಎಂಬ ನಾಮಪದದ ಷಷ್ಠಿವಿಭಕ್ತಿಯ ಮೇಲೆ ಬಂದಿರುವುದರಿಂದ ಉಪಸರ್ಗಾವ್ಯಯವು. ಹೀಗೆ ಒಂದೇ ಶಬ್ದವನ್ನು ಕ್ರಿಯಾವಿಶೇಷಣವಾಗಿಯೂ ಉಪಸರ್ಗವಾಗಿಯೂ ಉಪಯೋಗಿಸಬಹುದು. ಶಬ್ದವು ವಾಕ್ಯದಲ್ಲಿ ಯಾವ ಪದಕ್ಕೆ ಅನ್ವಯಿಸುತ್ತದೆಂದು ತಿಳಿದುಕೊಂಡು, ಅದನ್ನು ಕ್ರಿಯಾವಿಶೇಷಣವೆಂದಾಗಲಿ ಉಪಸರ್ಗವೆಂದಾಗಲಿ ವಿಚಾರಿಸಿ ಅರಿಯಬೇಕು.

ಹುಡುಗನು ಒಳಗೆ ಜಾರಿದನು. (ಕ್ರಿಯಾವಿಶೇಷಣ.)
ಹುಡುಗನು ಶಾಲೆಯ ಒಳಗೆ ಹೋದನು. (ಉಪಸರ್ಗ.)
ಅರಸನು ಮುಂದೆ ಹೋದನು; ಪರಿಜನರು ಹಿಂದೆ ಬಂದರು (ಕ್ರಿಯಾವಿಶೇಷಣ.)
ಹನುಮನ ಮುಂದೆ ಹಾರುವ ಗುಬ್ಬಿಯೇ. (ಉಪಸರ್ಗ.)
ಪಾಪ ಮಾಡುವಷ್ಟಕ್ಕೆ ಜನರು ಕೆಳಗೆ ಇಳಿಯುತ್ತಾರೆ. (ಕ್ರಿಯಾವಿಶೇಷಣ.)

ISRT

ದನಗಳು ಬಿಸಿಲಿಗೆ ಮರಗಳ ಕೆಳಗೆ ಸೇರುತ್ತವೆ. (ಉಪಸರ್ಗ.)
ಕರಡಿಗೆ ಜೇನುತುಪ್ಪದ ಮೇಲೆ ಬಹಳ ಆಸೆ. (ಉಪಸರ್ಗ.)

ಕಾರಣ, ನಿಮಿತ್ತ, ಮೂಲ, ಉದ್ದೇಶ, ಕಡೆಗೆ, ಕಡೆಯಲ್ಲಿ, ರೀತಿಯಿಂದ ಮೊದಲಾದ ನಾಮಪದಗಳನ್ನು ಉಪಸರ್ಗಗಳನ್ನಾಗಿ ಪ್ರಯೋಗಿಸುವುದೂ ಉಂಟು. ಕೆಳಗಿನ ವಾಕ್ಯಗಳಲ್ಲಿ ನಾಮಪದಗಳನ್ನು ಉಪಸರ್ಗಗಳನ್ನಾಗಿ ಪ್ರಯೋಗಿಸಿದುದನ್ನು ನೋಡು:—

1. ಕಾಲೆಗೆ ಬಾರದ ಕಾರಣ ಪರೀಕ್ಷೆಯು ತಪ್ಪಿಹೋಯಿತು. 2. ಹೊಟ್ಟೆಯ ನಿಮಿತ್ತವಾಗಿ ವೇಷ ಹಾಕಿಕೊಳ್ಳುವರು. 3. ದೇವರ ವಿಷಯ ಚಿಂತನೆ ಮಾಡು. 4. ಶಿಕ್ಷೆ ತಪ್ಪಿಸುವ ಉದ್ದೇಶ ಹುಡುಗನು ಸುಳ್ಳಾಡಿದನು. 5. ಹುಡುಗನು ಪುಸ್ತಕದ ಕಡೆಗೆ ನೋಡದೆ ಉಪಾಧ್ಯಾಯನ ಬಳಿಯಲ್ಲಿ ನಿಂತನು.

39. ಪ್ರಶ್ನೆಗಳು.

ಕೆಳಗಿನ ವಾಕ್ಯಗಳಲ್ಲಿ ಉಪಸರ್ಗಗಳನ್ನು ತೋರಿಸಿರಿ:—

1. ಭೂಮಿಯ ಒಳಗೆ ಬಂಡೆಗಳಿವೆ; ಅವುಗಳ ಮೇಲೆ ನಾನಾ ಜೀವಿಗಳು ಬದುಕುತ್ತವೆ. 2. ಆನೆಯು ಸೊಂಡಲಿನ ಮೂಲಕ ನೀರನ್ನೂ ಆಹಾರವನ್ನೂ ತೆಗೆದುಕೊಳ್ಳುತ್ತದೆ. 3. ಸೆಕೆಕಾಲದಲ್ಲಿ ಒಂದು ತಿಂಗಳು ವರೆಗೆ ಹುಡುಗರು ಶಾಲೆಗೆ ಹೋಗುವುದಿಲ್ಲ. 4. ಹಣ್ಣುಗಳನ್ನು ಆರು ಕಾಸಿನ ಮೇರೆಗೆ ಮಾರಿದಳು. 5. ಸಜ್ಜನರ ಒಡನೆ ಸಹವಾಸ ಮಾಡು; ದುಷ್ಟರ ಸಂಗಡ ಸೇರಬೇಡ. 6. ಒಂದು ಕಲ್ಲಿನಿಂದ ಇನ್ನೊಂದು ಕಲ್ಲಿಗೆ ಮೈಲಿಗಳ ಮೇರೆಗೆ ಲೆಕ್ಕ ಮಾಡುತ್ತಾರೆ; ನೀನು ರಸ್ತೆಯಲ್ಲಿ ನಡೆದರೆ, ಗುರುತು ಹಚ್ಚಿದ್ದ ಒಂದು ಕಲ್ಲಿನ ಬಳಿಗೆ ಬರುತ್ತೀ. 7. ಆ ಹೆಂಗಸು ಒಂದು ಹೂವಿನ ಹಾಗೆ ಅಥವಾ ಒಂದು ಚಿತ್ರದ ಹಾಗೆ ಸಣ್ಣ ಗೆರೆಗಳಾಗಿ ರಂಗವಲ್ಲಿಯನ್ನು ಬರೆಯುತ್ತಾಳೆ. 8. ನಿಮ್ಮ ಕಡೆಯಿಂದ ನನ್ನ ಕಡೆಗೆ ಹರಿಯುವ ನೀರನ್ನು ನಾನು ಕೆಡಿಸುವುದು ಹೇಗೆ ಸಾಧ್ಯ? 9. ಹೆಣ್ಣುಮಕ್ಕಳಿಗೋಸ್ಕರ ಅಲ್ಲಲ್ಲಿ ಶಾಲೆಗಳನ್ನು ಸ್ಥಾಪಿಸಿದ್ದಾರೆ. 10. ತಂದೆಯು ಹೊರತು ಮಗನಿಗೆ ಗತಿಯಿಲ್ಲ.

ಪರೀಕ್ಷೆ.

ಅವ್ಯಯಗಳೆಂದರೇನು? ಕ್ರಿಯಾವಿಶೇಷಣಗಳು ಏನನ್ನು ತೋರಿಸುತ್ತವೆ? ಕ್ರಿಯಾವಿಶೇಷಣಗಳೆಂದು ಏತಕ್ಕೆ ಹೆಸರಾಯಿತು? ಕ್ರಿಯಾವಿಶೇಷಣಗಳೆಂದರೇನು? ಕ್ರಿಯೆಯ ಸ್ಥಾನವನ್ನು ತೋರಿಸುವ ಕ್ರಿಯಾವಿಶೇಷಣಗಳಿಗೆ ಕೆಲವು ಉದಾಹರಣೆಗಳನ್ನು ಕೊಡಿರಿ; ಕಾಲವನ್ನು ತೋರಿಸುವ ಕ್ರಿಯಾವಿಶೇಷಣಗಳಿಗೆ ಕೆಲವು ಉದಾಹರಣೆಗಳನ್ನು ಕೊಡಿರಿ; ರೀತಿಯನ್ನು ತೋರಿಸುವ

ISRT

ಕ್ರಿಯಾವಿಶೇಷಣಗಳಿಗೆ ಕೆಲವು ಉದಾಹರಣೆಗಳನ್ನು ಕೊಡಿರಿ. ಉಪಸರ್ಗಗಳೆಂದರೇನು? ಉಪಸರ್ಗಗಳು ಯಾವ ಪದಗಳ ಮೇಲೆ ಹತ್ತುತ್ತವೆ? ಕ್ರಿಯಾವಿಶೇಷಣಗಳಾಗಿಯೂ ಉಪಸರ್ಗಗಳಾಗಿಯೂ ಪ್ರಯೋಗವಾಗುವ ಕೆಲವು ಶಬ್ದಗಳಿಗೆ ಉದಾಹರಣೆಗಳನ್ನು ಕೊಡಿರಿ. ಒಂದು ಪದವು ವಾಕ್ಯದಲ್ಲಿ ಕ್ರಿಯಾವಿಶೇಷಣ ಅಥವಾ ಉಪಸರ್ಗವೆಂದು ಹೇಗೆ ತಿಳಿಯಬಹುದು?

Conjunctions. Interjections.

31ನೆಯ ಪಾಠ.—ಸಮುಚ್ಚಯಗಳೂ ಭಾವಬೋಧಕಗಳೂ.

ಎರಡು ಪದಗಳನ್ನಾಗಲಿ ಎರಡು ವಾಕ್ಯಗಳನ್ನಾಗಲಿ ಒಂದಕ್ಕೊಂದು ಕೂಡಿಸುವುದಕ್ಕೆ ಪ್ರಯೋಗಿಸುವ ಅವ್ಯಯಗಳಿಗೆ ಸಮುಚ್ಚಯಗಳೆಂದು ಹೆಸರು. ಮತ್ತು, ಉ, ಕೂಡ, ಸಹ, ಆದರೂ, ಆದಾಗ್ಯೂ, ಏಕೆಂದರೆ, ಅಗಲಿ-ಅಗಲಿ ಮೊದಲಾದ ಶಬ್ದಗಳು ಸಮುಚ್ಚಯಗಳು.

1. ದೇವರನ್ನು ಭಕ್ತಿಯಿಂದ ಮತ್ತು ಪ್ರೀತಿಯಿಂದ ಪ್ರಾರ್ಥಿಸು. 2. ದೇವರನ್ನು ಭಕ್ತಿಯಿಂದಲೂ ಪ್ರೀತಿಯಿಂದಲೂ ಪ್ರಾರ್ಥಿಸು. 3. ಅಕ್ಕನು ತಂಗಿಯು ಕೂಡ ಪಾಠಶಾಲೆಗೆ ಹೋಗುತ್ತಾರೆ. 4. ಹುಡುಗನು ಆಲಸ್ಯವಾಗಿದ್ದನು, ಆದರೂ ಶಾಲೆಗೆ ಬಂದನು. 5. ಪ್ರತಾಪನು ಹೆಂಡತಿಮಕ್ಕಳನ್ನು ತೊರೆದುಬಿಟ್ಟನು, ಆದಾಗ್ಯೂ ಧೈರ್ಯವನ್ನು ಬಿಡಲಿಲ್ಲ. 6. ನಾವು ಒಳ್ಳೆಯ ಮಾತುಗಳನ್ನೇ ಆಡಬೇಕು, ಏಕೆಂದರೆ ನಮ್ಮನ್ನು ಎಲ್ಲರೂ ಮೆಚ್ಚುವರು. 7. ಒಕ್ಕಲಿಗನು ಎತ್ತನ್ನಾಗಲಿ ಕೋಣವನ್ನಾಗಲಿ ಉಳುವುದಕ್ಕೆ ಉಪಯೋಗಿಸುವನು.

ಸಮುಚ್ಚಯಗಳು ಪದಗಳನ್ನಾಗಲಿ ವಾಕ್ಯಗಳನ್ನಾಗಲಿ ಕೂಡಿಸುವುದರಿಂದ ಅವು ಯಾವುದನ್ನು ಜೋಡಿಸುತ್ತವೆಂದು ಹೇಳಬೇಕು. ಮೊದಲಿನ ಮೂರು ವಾಕ್ಯಗಳಲ್ಲಿ ಇರುವ ಸಮುಚ್ಚಯಗಳು ಪದಗಳನ್ನು ಜೋಡಿಸುತ್ತವೆ. 4, 5, 6ನೆಯ ವಾಕ್ಯಗಳಲ್ಲಿರುವ ಸಮುಚ್ಚಯಗಳು ವಾಕ್ಯಗಳನ್ನು ಕೂಡಿಸುತ್ತವೆ. ಇವುಗಳಿಗೆ ಲಿಂಗ ವಚನ ವಿಭಕ್ತಿಗಳು ಬಾರದ್ದರಿಂದ ಅವ್ಯಯಗಳೆಂದು ಹೇಳುತ್ತಾರೆ.

ಎಲೆ, ಓಹೋ, ಅಹಾ, ಅಯ್ಯೋ, ಶಾಬಾಸ್, ಅಬ್ಬಾ, ಅಸೋ, ಸಡಸಡನೆ, ಸಳಸಳನೆ ಮೊದಲಾದ ಶಬ್ದಗಳನ್ನು ಜನರು ಚಿಂತೆಯಿಂದಾಗಲಿ ಸಂತೋಷದಿಂದಾಗಲಿ

ISRT

ಹೇಳುವುದುಂಟು. ಇಂಥವುಗಳಿಗೆ ಭಾವಬೋಧಕಗಳೆಂದು ಹೆಸರು. ಚಿಂತೆ, ಹರ್ಷ ಮುಂತಾದ ಮನಸ್ಸಿನ ಭಾವಗಳನ್ನು ಹೇಳುವ ಅವ್ಯಯಗಳಿಗೆ ಭಾವ ಬೋಧಕಗಳೆಂದು ಹೆಸರು. ಇವು ಲಿಂಗ ವಚನ ವಿಭಕ್ತಿರೂಪಗಳನ್ನು ಹೊಂದುವುದಿಲ್ಲ; ಆದುದರಿಂದಲೇ ಇವುಗಳನ್ನೂ ಅವ್ಯಯಗಳೆಂದು ಕರೆಯುತ್ತಾರೆ. ಇವುಗಳು ವಾಕ್ಯದಲ್ಲಿ ಇತರ ಪದಗಳಿಗೆ ಅನ್ವಯವಾಗದೆ ಸ್ವತಂತ್ರವಾಗಿರುತ್ತವೆ. ಕೆಲವು ಮಾತ್ರ ಕ್ರಿಯಾವಿಶೇಷಣಗಳಂತೆ ಕ್ರಿಯಾಪದಗಳಿಗೆ ಸಂಬಂಧಿಸುತ್ತವೆ.

ಛಳಿರೆ! ನಿನ್ನ ಸಾಹಸವನ್ನು ಮೆಚ್ಚಿದೆನು. ಅಹಾ! ನಿನ್ನ ರೂಪವು ತೆಲುವಾಗಿದೆ. ಎಲೆ ಅಣ್ಣಾ, ಇತ್ತ ನೋಡು! ಶಾಬಾಸ್ ಹುಡುಗ! ನೀನು ಇನ್ನೂ ಬುದ್ಧಿವಂತನಾಗಬೇಕು. ಅಯ್ಯೋ, ನನ್ನ ಮೊಟ್ಟೆಗಳು ಹೋದುವಲ್ಲಾ.

ಮೇಲೆ ತೋರುವ ಭಾವಬೋಧಕಗಳು ಸ್ವತಂತ್ರವಾಗಿವೆ. ಕ್ರಿಯಾವಿಶೇಷಣಗಳಂತೆ ಕ್ರಿಯಾಪದಕ್ಕೆ ಸಂಬಂಧಿಸುವ ಭಾವಬೋಧಕಗಳನ್ನು ಕೆಳಗಿನ ದೃಷ್ಟಾಂತಗಳಿಂದ ತಿಳಿದುಕೊಳ್ಳಿರಿ:—

ಹುಡುಗನು ಗಡಗಡನೆ ನಡುಗಿದನು. ಹಾವು ಬುಸುಬುಸು ಎಂದಿತು. ಹೊಳೆಯು ಗಳಗಳಯೆಂದು ಹರಿಯಿತು. ಆಕಳು ಭೋಯೆಂದು ಒಸರಿತು.

ಅವ್ಯಯಗಳು ಯಾವುವೆಂದೂ ನಿನಗೆ ತಿಳಿಯಿತು. ಅವ್ಯಯಗಳಲ್ಲಿ ಕ್ರಿಯಾವಿಶೇಷಣಗಳು, ಉಪಸರ್ಗಗಳು, ಸಮುಚ್ಚಯಗಳು, ಭಾವಬೋಧಕಗಳು ಎಂದು ನಾಲ್ಕು ವಿಧಗಳುಂಟೆಂದೂ ನಿನಗೆ ಗೊತ್ತಾಯಿತು.

40. ಪ್ರಶ್ನೆಗಳು.

ಕೆಳಗಿನ ಮಾತುಗಳಲ್ಲಿ ಸಮುಚ್ಚಯಗಳನ್ನೂ ಭಾವಬೋಧಕಗಳನ್ನೂ ತೋರಿಸಿರಿ:—

1. ಗುಲ್‌ಗುಲ್ ಎಂದು ಗೆಜ್ಜೆಗಳು ಶಬ್ದಿಸಿದುವು. 2. ಎಡ್ವರ್ಡ್ ಮಹಾರಾಜರು ವಿಕ್ಟೋರಿಯಾ ಚಕ್ರವರ್ತಿನಿಯವರ ಮತ್ತು ಆಲ್ಬರ್ಟ್ ಪ್ರಭುಗಳ ಪುತ್ರರು; ಅವರು ಇಂಗ್ಲೆಂಡ್ ದೇಶವನ್ನೂ ಹಿಂದುಸ್ಥಾನವನ್ನೂ ಆಳುತ್ತಿದ್ದಾರೆ. 3. ಮಕ್ಕಳು ಕುಧ್ವಾಗಿ ಮತ್ತು ಸ್ಪಷ್ಟವಾಗಿ ಕೇಳಿಸುವಂತೆ ಓದಬೇಕು. 4. ಅಯ್ಯೋ ಎಂದು ಕೂಗಿದರೆ, ಹೋದ ವಸ್ತು ಬರಲಾರದು. 5. ಕ್ರಿಸ್ತಮತಸ್ಥರಲ್ಲಿಯೂ ಮಹಮ್ಮದಿಯರಲ್ಲಿಯೂ ತಂದೆಯ ಆಸ್ತಿಯು

ಪುತ್ರರಿಗೆ ಮತ್ತು ಪುತ್ರಿಯರಿಗೆ ಸಿಕ್ಕುತ್ತದೆ; ಪರಂತು ಹಿಂದೂ ಜನರಲ್ಲಿ ಗಂಡು ಮಕ್ಕಳು ಮಾತ್ರ ಬಾಧ್ಯಸ್ಥರಾಗುತ್ತಾರೆ. 6. ಹಾಹೊ ಸೀತೆಯೆ! ಎಂದು ರಾಮನು ವನದಲ್ಲಿ ಕೂಗಿದನು. 7. ಅರಸನು ಸೇನಾಪತಿಯು ಸಹಿತ ಯುದ್ಧಕ್ಕೆ ಹೋದನು. 8. ಮಧ್ಯಮರು ಕೀರ್ತಿಯನ್ನು ಅಥವಾ ಧನವನ್ನು ಬಯಸುವರು; ಆದರೆ ಉತ್ತಮರು ಕೀರ್ತಿಯನ್ನೇ ಬಯಸುವರು. 9. ಈ ದೀಪವು ಕುರಿಯ ಹೃದಯದಂತೆ ಪುರಪುರ ಎನ್ನುತ್ತಿದೆ; ಗಾಳಿಯು ಬೀಸುವುದರಲ್ಲಿ ಬುಸ್ಸೆಂದು ಅರಿಚೋಸುವುದು. 10. ಭೂಕಂಪದಲ್ಲಿ ನೆಲವು ಗಡಗಡನೆ ನಡುಗುವುದು, ಮತ್ತು ಮನೆಗಳು ಗರಗರನೆ ತಿರುಗುವುವು.

ಪರೀಕ್ಷೆ.

ಅವ್ಯಯಗಳೆಂದರೇನು? ಅವ್ಯಯಗಳಲ್ಲಿ ಎಷ್ಟು ವಿಧವು? ಕ್ರಿಯಾವಿಶೇಷಣಗಳೆಂದರೇನು? ಕ್ರಿಯಾವಿಶೇಷಣವೆಂದು ಹೆಸರು ಬರಲು ಕಾರಣವೇನು? ಸಮುಚ್ಚಯಗಳೆಂದರೇನು? ಉಪಸರ್ಗಗಳಿಗೂ ಕ್ರಿಯಾವಿಶೇಷಣಗಳಿಗೂ ಭೇದವೇನು? ಭಾವಬೋಧಕಗಳೆಂದರೇನು? ಭಾವಬೋಧಕಗಳಲ್ಲಿ ಯಾವ ಬಗೆಯ ತಪ್ಪುಗಳು ಸೇರುತ್ತವೆ?

PH 481.68 Mam
KM

SCHOOL-BOOKS PUBLISHED BY THE

BASEL MISSION BOOK AND TRACT DEPOSITORY, MANGALORE.

	Rs.	As.	P.
A Catechism of Canarese Grammar, for use in I., II. and III. Forms ಕನ್ನಡ ಬಾಲವ್ಯಾಕರಣ ಪ್ರಶ್ನೋತ್ತರರೂಪವಾದ	0	3	0
Canarese School-Grammar for High Schools ಕನ್ನಡ ಶಾಲಾ ವ್ಯಾಕರಣ	0	5	0
A Grammar of the Ancient Dialect of the Canarese Language ಹಳಗನ್ನಡ ವ್ಯಾಕರಣಸೂತ್ರಗಳು	0	6	0
Hosagannadanudigannadi, a Grammar of the Modern Canarese Language ಹೊಸಗನ್ನಡವನುಡಿಗನ್ನಡ ಎಂಬ ಹೊಸಗನ್ನಡ ವ್ಯಾಕರಣವು	1	8	0
A Grammar of the Kannada Language in English, by the Rev. Dr. F. Kittel	5	8	0
Tables of Canarese Grammar, by the Rev. B. Grœter	0	12	0
An Elementary Sanskrit Grammar in Canarese ಸಂಸ್ಕೃತ ಪಠ್ಯ ವ್ಯಾಕರಣವು	1	0	0
A Practical Key to the Canarese Language, by the Rev. F. Ziegler	1	8	0
English and Canarese School-Dictionary ಇಂಗ್ಲೀಷು ಕನ್ನಡ ಶಾಲಾನಘಂಟು	3	0	0
Canarese and English School-Dictionary ಕನ್ನಡ ಇಂಗ್ಲೀಷು ಶಾಲಾನಘಂಟು	3	0	0
Kannada-English Dictionary ಕನ್ನಡ ಇಂಗ್ಲೀಷು ನಘಂಟು	16	0	0